ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 63

ಮಾನ್ಯ ಸದಸ್ಯರ ಹೆಸರು : ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸುವ ದಿನಾಂಕ: : 08.12.2020

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯ ಸರ್ಕಾರದ ಸೇವೆಗೆ 2006ರ ನಂತರ ನೇಮಕವಾದ ನೌಕರರುಗಳಿಗೆ ಹಳೆಯ ಪಿಂಚಣಿ ವ್ಯವಸ್ಥೆ ಬದಲಾಗಿ ಹೊಸ ಪಿಂಚಣಿ ವ್ಯವಸ್ಥೆ ಅಳವಡಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಬಂದಿದ್ದಲ್ಲಿ, ಈ ನೌಕರರುಗಳಿಗೆ ಅಳವಡಿಸಲಾಗಿರುವ ಹೊಸ ಪಿಂಚಣಿ ವ್ಯವಸ್ಥೆಯನ್ನು ರದ್ದು ಪಡಿಸಿ ಹಳೆಯ ಪಿಂಚಣಿ ವ್ಯವಸ್ಥೆಗೆ ಒಳಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಸರ್ಕಾರದ ಆದೇಶ ಸಂಖ್ಯೆ: ಆ.ಇ. 107 ಪಿಇಎನ್ 2018, ದಿನಾಂಕ: 11.12.2018 ರಲ್ಲಿ ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ / ಮಾರ್ಪಾಡು ಮಾಡಲು ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.
ಇ	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ನೌಕರರುಗಳನ್ನು ಹೊಸ ಪಿಂಚಣಿ ವ್ಯವಸ್ಥೆಯ ಬದಲಾಗಿ ಹಳೆ ಪಿಂಚಣಿ ವ್ಯವಸ್ಥೆಗೊಳಪಡಿಸಿ ಅವರುಗಳಿಗೆ ಅನುಕೂಲ ಕಲ್ಪಿಸಿಕೊಡಲಾಗುವುದು;	
ಈ	ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	

ಆಇ 130 ಪಿಇಎನ್ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	64
ಸದಸ್ಯರ ಹೆಸರು	:	ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸಬೇಕಾದ ದಿನಾಂಕ	:	08.12.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ಬಿರನಾಳ ಗ್ರಾಮದಲ್ಲಿ 220 ಕೆ.ವಿ. ಸಬ್–ಸ್ಟೇಷನ್ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಬಿರನಾಳ ಗ್ರಾಮದಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ ಮುಗಳಖೋಡ (ಕಬ್ಬೂರ್) ಗ್ರಾಮದಲ್ಲಿ ಹೊಸದಾಗಿ 220 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲಾಗುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಸದರಿ ವಿದ್ಯುತ್ ಉಪಕೇಂದ್ರವನ್ನು ಮಾರ್ಚ್–2021 ರೊಳಗೆ ಪೂರ್ಣಗೊಳಿಸಿ ಚಾಲನೆಗೊಳಿಸಲು ಕವಿಪ್ರನಿನಿಯು ಉದ್ದೇಶಿಸಿದ್ದು, ಈ ವಿದ್ಯುತ್ ಉಪಕೇಂದ್ರವು ಚಾಲನೆಗೊಂಡ ನಂತರ ಬಿರನಾಳ ಗ್ರಾಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿದ್ಯುತ್ ಭಾರವನ್ನು ಸಹ ಹೊಸದಾಗಿ ಸ್ಥಾಪಿಸಲಾಗುವ ಮುಗಳಖೋಡ ವಿದ್ಯುತ್ ಉಪಕೇಂದ್ರದ ಮೇಲೆ ತೆಗೆದುಕೊಳ್ಳುವುದರಿಂದ, ಬಿರನಾಳ ಗ್ರಾಮದಲ್ಲಿ ಹೊಸದಾಗಿ 220 ಕೆ.ವಿ. ವಿದ್ಯುತ್ ಉಪಕೇಂದ್ರ ಸ್ಥಾಪನೆಯ ಪ್ರಸ್ತಾವನೆ ಪ್ರಸ್ತುತ ಕವಿಪ್ರನಿನಿಯ ಮುಂದೆ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ 220 ಕೆ.ವಿ. ಸಬ್–ಸ್ಟೇಷನ್ ಕಾಮಗಾರಿ ಪ್ರಾರಂಭಿಸಲಾಗುವುದು;	
ಇ)	ರಾಯಭಾಗ ತಾಲ್ಲೂಕಿನ ಬಿರನಾಳ ಗ್ರಾಮದಲ್ಲಿ ಈ ಸ್ಟೇಷನ್ ಸ್ಥಾಪಿಸುವುದರ ಮುಖಾಂತರ ಅಲ್ಲಿನ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ'	
ಈ)	ಇಲ್ಲವಾದಲ್ಲಿ, ಕಾರಣಗಳೇನು? (ವಿವರ ನೀಡುವುದು)	

ಸಂಖ್ಯೆ: ಎನರ್ಜಿ 187 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	68
ಸದಸ್ಯರ ಹೆಸರು	:	ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)
ಉತ್ತರಿಸಬೇಕಾದ ದಿನಾಂಕ	:	08.12.2020
ಉತ್ತರಿಸಬೇಕಾದ ಸಚಿವರು		ಮಾನ್ಯ ಮುಖ್ಯಮಂತ್ರಿಗಳು

****

	ಪ್ರಶ್ನೆ	ಉತ್ತರ
ಅ)	ಕರ್ನಾಟಕ ವಿದ್ಯುತ್ ನಿಗಮದ ಜಾಗಕ್ಕೆ ಸೇರಿದ ಕಾರ್ಗಲ್ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸಮಸ್ಯೆಗಳಾದ ರಸ್ತೆ, ಕುಡಿಯುವ ನೀರು, ವಿದ್ಯುತ್ ಹಾಗೂ ಇನ್ನಿತರ ಸರ್ಕಾರಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ವಿದ್ಯುತ್ ನಿಗಮದವರು ಅಡ್ಡಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಾರ್ಗಲ್ ಸುತ್ತಮುತ್ತಲಿನ ಯಾವುದೇ ಗ್ರಾಮಗಳು ಕರ್ನಾಟಕ ವಿದ್ಯುತ್ ನಿಗಮದ ವ್ಯಾಪ್ತಿಗೆ ಒಳಪಡುವುದಿಲ್ಲ. ಕಾರ್ಗಲ್ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಕುಡಿಯುವ ನೀರು, ವಿದ್ಯುತ್ ಹಾಗೂ ಇನ್ನಿತರ ಸರ್ಕಾರಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ವಿದ್ಯುತ್ ನಿಗಮವು ಯಾವುದೇ ರೀತಿ ಅಡ್ಡಿಪಡಿಸಿರುವುದಿಲ್ಲ.
ಆ)	ಇದರಿಂದಾಗಿ ಈ ಭಾಗದಲ್ಲಿ ಸರ್ಕಾರಿ ಕಾಮಗಾರಿಗಳನ್ನು ನಿರ್ವಹಿಸಲು ಸಾಧ್ಯವಾಗದೇ, ಅಲ್ಲಿನ ರಸ್ತೆಯಲ್ಲಿ ಸಂಚರಿಸಲು ತೊಂದರೆಯಾಗುತ್ತಿದ್ದು ಮತ್ತು ವಿದ್ಯುತ್ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿದ್ದು, ಇದನ್ನು ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು)	ಅನ್ವಯಿಸುವುದಿಲ್ಲ.
ಇ)	ಕರ್ನಾಟಕ ವಿದ್ಯುತ್ ನಿಗಮದ ಜಾಗಕ್ಕೆ ಸೇರಿದ ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು)	

ಸಂಖ್ಯೆ: ಎನರ್ಜಿ 193 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	69
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ರಾಮಪ್ಪ ಸೊಬೆಪ್ಪ ಲಮಾಣಿ (ಶಿರಹಟ್ಟಿ)
ಉತ್ತರಿಸುವವರು	:	ಮುಖ್ಯಮಂತ್ರಿಗಳು
ಉತ್ತರಿಸಬೇಕಾದ ದಿನಾಂಕ	:	08.12.2020

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ರಾಜ್ಯದ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಪ್ರತಿ ವರ್ಷದಂತೆ ಅನುದಾನ ಮೀಸಲು ಗುರಿ ವಿಸ್ತರಣೆಯಾಗದೆ ಯೋಜನೆ ಕುಂಠಿತವಾಗಿದ್ದು, ಕುಶಲಕರ್ಮಿಗಳು ಯೋಜನೆಯ ಸೌಲಭ್ಯದಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?	ವಸತಿ ನಿರ್ಮಾಣ ಯೋಜನೆಯಡಿ ರಾಜೀವಗಾಂಧಿ ವಸತಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಮನೆಗಳಿಗೆ ಸಂಬಂಧಿಸಿದಂತೆ ಅನುದಾನದ ಕೊರತೆಯಿಂದಾಗಿ ಅನುಮೋದನೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ. ಮುಂದಿನ ದಿನಗಳಲ್ಲಿ, ಆರ್ಥಿಕ ಸಂಪನ್ಮೂಲವನ್ನು ಆಧರಿಸಿ, ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಸಿಐ 122 ಸಪ್ರಕೈ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು

<u>ಕರ್ನಾಟಕ ವಿಧಾನ ಸಭೆ</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 85
2. ಸದಸ್ಯರ ಹೆಸರು : ಶ್ರೀ ಮಹದೇವ .ಕೆ
3. ಉತ್ತರಿಸಬೇಕಾದ ದಿನಾಂಕ : 08-12-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಪಿರಿಯಾಪಟ್ಟಣ ಮತ ಕ್ಷೇತ್ರದ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆ ವತಿಯಿಂದ ಟೆಂಡರ್ ಪ್ರಕ್ರಿಯೆ ಮುಗಿದಿರುವ ಕಾಮಗಾರಿಗಳನ್ನು (ತಡೆಹಿಡಿದಿರುವ) ಮುಂದುವರೆಸುವ ಬಗ್ಗೆ ಸರ್ಕಾರದ ನಿಲುವೇನು ;	ದಿನಾಂಕ:20-09-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ 70 ನೇ ಮಂಡಳಿ ಸಭೆಯ ನಿರ್ಣಯದಂತೆ ಆಡಳಿತಾತ್ಮಕ ಕಾರಣಗಳಿಂದ ಮುಂದುವರೆಯಲ್ಪಟ್ಟ / ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಮುಂದುವರೆಸಲು ಹಾಗೂ ಟೆಂಡರ್ ಪ್ರಕ್ರಿಯೆಯಲ್ಲಿರುವ, ತಾಂತ್ರಿಕ ಮಂಜೂರಾತಿ ಆಗಬೇಕಿರುವ ಹಾಗೂ ಟೆಂಡರ್ ಆಹ್ವಾನಿಸಬೇಕಿರುವ ಕಾಮಗಾರಿಗಳನ್ನು ಕೈಬಿಡಲು ಸೂಚಿಸಲಾಗಿರುತ್ತದೆ. ಅಲ್ಲದೇ, ಯಾವುದೇ ತುರ್ತು ಹಾಗೂ ಅವಶ್ಯಕ ಕಾಮಗಾರಿಗಳಿದ್ದಲ್ಲಿ (Regardless of cost & Financial delegation) ಅಂತಹ ಪ್ರಸ್ತಾವನೆಗಳನ್ನು ಮಂಡಳಿ ಸಭೆಯ ಅನುಮೋದನೆ ಪಡೆದು ಅದರನ್ವಯ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ವಹಿಸಲು ಸೂಚಿಸಲಾಗಿರುತ್ತದೆ. ಮುಂದುವರೆದ ಕಾಮಗಾರಿಗಳ ಮತ್ತು ಪ್ರಸಕ್ತ ಸಾಲಿನ ಅನುದಾನದ ಲಭ್ಯತೆಯ ಅನುಪಾತವನ್ನು ಗಮನದಲ್ಲಿಟ್ಟುಕೊಂಡು ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಮುಂಬರುವ ಆರ್ಥಿಕ ವರ್ಷಗಳಲ್ಲಿ ಪರಿಶೀಲಿಸಲಾಗುವುದು.
ಆ	ಈ ಕ್ಷೇತ್ರದಲ್ಲಿ ಒಟ್ಟು ಎಷ್ಟು ಮೊತ್ತದ ಹಾಗೂ ಎಷ್ಟು ಕಾಮಗಾರಿಗಳನ್ನು ತಡೆಹಿಡಿಯಲಾಗಿದೆ ; (ವಿವರ ನೀಡುವುದು).	ದಿನಾಂಕ:20-09-2019 ರ ನಿಗಮದ 70ನೇ ಮಂಡಳಿ ಸಭೆಯ ನಿರ್ಣಯದಂತೆ ಪಿರಿಯಾಪಟ್ಟಣ ಮತಕ್ಷೇತ್ರದಲ್ಲಿ 2018-19ನೇ ಸಾಲಿನಲ್ಲಿ ಒಟ್ಟಾರೆ 53 ಕಾಮಗಾರಿಗಳ ರೂ.23.60 ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಬಿಡಲಾಗಿದೆ. ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.
ಇ	ರಾಜ್ಯದಲ್ಲಿನ ಯಾವ ಯಾವ ಮತ ಕ್ಷೇತ್ರದಲ್ಲಿ ತಡೆಹಿಡಿದಿರುವ ಕಾಮಗಾರಿಗಳನ್ನು ಮುಂದುವರೆಸಲಾಗಿದೆ ; (ವಿವರ ನೀಡುವುದು)	ಮಂಡಳಿಯ ನಿರ್ಣಯದಂತೆ ನಿಗಮದಡಿ ವಿವಿಧ ಮತಕ್ಷೇತ್ರದಲ್ಲಿ ತಡೆಹಿಡಿದಿರುವ ಕಾಮಗಾರಿಗಳನ್ನು ಮುಂದುವರೆಸಲಾಗಿದ್ದು, ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ.
ಈ	ಪ್ರಸ್ತುತ ಸಾಲಿನಲ್ಲಿ ಹೊಸದಾಗಿ ಯಾವುದೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳದೇ ತಡೆಹಿಡಿದಿರುವ ಕಾಮಗಾರಿಗಳನ್ನು ಮುಂದುವರೆಸಲು ಸರ್ಕಾರಕ್ಕಿರುವ ತೊಂದರೆಯೇನು ?	ಕಾವೇರಿ ನೀರಾವರಿ ನಿಗಮಕ್ಕೆ 2020-21 ನೇ ಸಾಲಿಗೆ ಒಟ್ಟಾರೆ ರೂ.2,509.14 ಕೋಟಿ ಅನುದಾನವು ಸರ್ಕಾರದಿಂದ ಹಂಚಿಕೆ ಮಾಡಲಾಗಿದ್ದು, ಈ ಪೈಕಿ ಕ್ಯಾಪಿಟಲ್ ಕಾಮಗಾರಿಗಳಿಗೆ ಲಭ್ಯವಾಗುವ ನಿವ್ವಳ ಮೊತ್ತ ರೂ.1,091.55 ಕೋಟಿಗಳಿದ್ದು, ಮುಂದುವರೆದ ಕಾಮಗಾರಿಗಳ ಮೊತ್ತ ರೂ.7,167.24 ಕೋಟಿಗಳಿದ್ದು, ಅನುದಾನ ಮತ್ತು ಮುಂದುವರೆದ ಕಾಮಗಾರಿಗಳ ಮೊತ್ತದ ಅನುಪಾತವು 1:6.5 (ಶೇಕಡ 15) ಇರುತ್ತದೆ. ಈ ಹಿನ್ನೆಲೆಯಲ್ಲಿ, ಹೊಸ ಕಾಮಗಾರಿಗಳನ್ನು ಕೈಗೊಳ್ಳುವುದು ಕಷ್ಟಸಾಧ್ಯವಾಗುತ್ತಿರುತ್ತದೆ.

<u>ಸಂಖ್ಯೆ:ಜಸಂಇ 152 ಎಸ್‌ಎಲ್‌ಎ 2020</u>

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 91
2. ಮಾನ್ಯ ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
3. ಉತ್ತರಿಸುವ ದಿನಾಂಕ : 08/12/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸಗೂರು ಪಟ್ಟಣದಲ್ಲಿ ನೂತನ ಸಂಚಾರಿ ಪೊಲೀಸ್ ಠಾಣೆ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;	ರಾಯಚೂರು ಜಿಲ್ಲೆಯ ಲಿಂಗಸಗೂರು ಪಟ್ಟಣದಲ್ಲಿ ನೂತನ ಸಂಚಾರಿ ಪೊಲೀಸ್ ಠಾಣೆಯನ್ನು ಸೃಜಿಸುವ ಸಂಬಂಧ ರಾಷ್ಟ್ರೀಯ ಪೊಲೀಸ್ ಆಯೋಗದ ಮಾನದಂಡಗಳನ್ನು ಪೂರೈಸದ ಕಾರಣ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ.
ಆ)	ಲಿಂಗಸಗೂರು ತಾಲ್ಲೂಕಿನ ಹಟ್ಟಿ ಪೊಲೀಸ್ ಠಾಣೆಯನ್ನು ಮಸ್ಕಿ ವೃತ್ತಕ್ಕೆ ಸ್ಥಳಾಂತರಿಸದೆ ಲಿಂಗಸಗೂರು ವೃತ್ತದಲ್ಲಿ ಮುಂದುವರೆಸಲು ಸರ್ಕಾರ ಕೈಗೊಂಡ ಕ್ರಮಗಳೇನು ;	ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಸ್ತುತ ಲಿಂಗಸಗೂರು ವೃತ್ತದಲ್ಲಿರುವ ಲಿಂಗಸಗೂರು ಪೊಲೀಸ್ ಠಾಣೆಯನ್ನು ಪಿ.ಐ. ಠಾಣೆಯಾಗಿ ಮೇಲ್ದರ್ಜೆಗೇರಿಸಿ ಮತ್ತು ಆನಂತರದಲ್ಲಿ ಸದರಿ ವೃತ್ತದಲ್ಲಿ ಉಳಿಯುವ ಏಕೈಕ ಹಟ್ಟಿ ಪೊಲೀಸ್ ಠಾಣೆಯನ್ನು ಮಸ್ಕಿ ವೃತ್ತಕ್ಕೆ ಸ್ಥಳಾಂತರಿಸಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/107/ಪಿಓಪಿ/2020, ದಿನಾಂಕ:23.11.2020 ರಲ್ಲಿ ಆದೇಶಿಸಲಾಗಿರುತ್ತದೆ.
ಇ)	ಹಟ್ಟಿ ಪೊಲೀಸ್ ಠಾಣೆಯನ್ನು ಲಿಂಗಸಗೂರು ವೃತ್ತದಿಂದ ಬೇರ್ಪಡಿಸಿ ಮಸ್ಕಿ ವೃತ್ತಕ್ಕೆ ಸ್ಥಳಾಂತರಿಸದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	
ಈ)	ಲಿಂಗಸಗೂರು ಪಟ್ಟಣದಲ್ಲಿ ನೂತನ ಗ್ರಾಮೀಣ ಪೊಲೀಸ್ ಠಾಣೆ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.
ಉ)	ಈ ತಾಲ್ಲೂಕಿನಲ್ಲಿ ಬರುವ ಹಟ್ಟಿ ಮುದಗಲ್ಲು ಪಟ್ಟಣದಲ್ಲಿ ನೂತನ ಅಗ್ನಿ ಶಾಮಕ ಠಾಣೆ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?	ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಹಟ್ಟಿ ಮುದಗಲ್ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆಗಾಗಿ 02 ಎಕರೆ ನಿವೇಶನ ಅವಶ್ಯವಿರುತ್ತದೆ. ಸೂಕ್ತ ನಿವೇಶನ ದೊರೆತ ಕೂಡಲೇ ಅಧಿಕಾರಿ/ ಸಿಬ್ಬಂದಿ, ವಾಹನ/ಉಪಕರಣಗಳೊಂದಿಗೆ ಅಗ್ನಿಶಾಮಕ ಠಾಣೆ ಮಂಜೂರಾತಿ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ:ಹೆಚ್.ಡಿ 126 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 92
ಸದಸ್ಯರ ಹೆಸರು	: ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
ಉತ್ತರಿಸುವ ದಿನಾಂಕ	: 08.12.2020
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸಗೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 7 ಸಣ್ಣ ನೀರಾವರಿ ಕೆರೆಗಳಿಗೆ ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ನೀರು ತುಂಬಿಸುವ ಯೋಜನೆಯ ಕಾಮಗಾರಿ ಕುರಿತು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಯೋಜನೆಗೆ ಅವಶ್ಯಕವಿರುವ ನೀರಿನ ಲಭ್ಯತೆ, ಹಂಚಿಕೆ ಮತ್ತು ಸಣ್ಣ ನೀರಾವರಿ ಕೆರೆಗಳ ನೀರಿನ ಹಂಚಿಕೆಯಡಿ ಪರಿಗಣಿಸುವ ಪ್ರಸ್ತಾವನೆ ಕೃಷ್ಣಾ ಭಾಗ್ಯ ಜಲ ನಿಗಮದ ಪರಿಶೀಲನೆ ಹಂತದಲ್ಲಿದೆ.
ಆ)	ಈ ವಿಧಾನಸಭಾ ಕ್ಷೇತ್ರದಲ್ಲಿ ಬರುವ ನಾರಾಯಣಪುರ ಅಣೆಕಟ್ಟು ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ನಾರಾಯಣಪುರ ಅಣೆಕಟ್ಟೆಯ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಕಾಮಗಾರಿಯ ಕುರಿತಂತೆ (Landscape Development Works) ರೂ.59.20 ಕೋಟಿ ಅಂದಾಜು ಮೊತ್ತದಲ್ಲಿ ವಿಶ್ವ ಬ್ಯಾಂಕ್ ನೆರವಿನ DRIP ಹಂತ-2 ರಡಿ ಪ್ರಸ್ತಾಪಿಸಲಾಗಿದ್ದು, ಸದರಿ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಈಗಾಗಲೇ ಕನ್ಸಲ್ಟೆನ್ಸಿ ಸಂಸ್ಥೆಯವರಿಗೆ ವಹಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ DRIP ಹಂತ-2 ರ ಯೋಜನಾ ಅನುದಾನದಡಿಯಲ್ಲಿ ಅಗತ್ಯ ಅನುಮೋದನೆ ದೊರೆತ ನಂತರ, ನಿಗಮಗಳನುಸಾರ ಅಗತ್ಯ ಕ್ರಮಗಳನ್ನು ಜರುಗಿಸಲಾಗುವುದು.

ಸಂಖ್ಯೆ: ಜಸಂಇ 115 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 97
2) ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್ ಎನ್
3) ಉತ್ತರಿಸಬೇಕಾದ ದಿನಾಂಕ : 08/12/2020
4) ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ದೇವನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ವಾಸಿಸುತ್ತಿದ್ದು ಮೀಸಲಾತಿ ಕ್ಷೇತ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಬಂದಿದೆ
(ಆ)	ಹಾಗಿದ್ದಲ್ಲಿ, ಇಲ್ಲಿ ಈ ವರ್ಗದವರ ಜಮೀನುಗಳ ಹತ್ತಿರ ಚೆಕ್ ಡ್ಯಾಂ ನಿರ್ಮಾಣ ಹಾಗೂ ಕಾಮಗಾರಿಗಳ ಅಭಿವೃಧ್ಧಿಗಾಗಿ ಎಸ್.ಸಿ.ಪಿ/ ಟಿ.ಎಸ್.ಪಿ ಯೋಜನೆಯಡಿ ಹೆಚ್ಚುವರಿ ಹಣ ಬಿಡುಗಡೆಗೆ ಸರ್ಕಾರ ಕ್ರಮ ಕೈಗೊಂಡಿದೆಯೇ; (ಮಾಹಿತಿ ನೀಡುವುದು)	ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ಸಣ್ಣ ನೀರಾವರಿ ಇಲಾಖೆಗೆ ಪ್ರತಿ ವರ್ಷ ಒದಗಿಸಲಾಗುವ ಅನುದಾನದಲ್ಲಿ ದೇವನಹಳ್ಳಿ ವಿಧಾನ ಸಭಾ ಕ್ಷೇತ್ರವೂ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರ ಅಭಿವೃದ್ಧಿಗಾಗಿ ಅನುದಾನವನ್ನು ಬಿಡುಗಡೆ ಮಾಡಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ದೇವನಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಯಡಿಯಲ್ಲಿ ರೂ.200.00 ಲಕ್ಷಗಳು ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ರೂ.232.00 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.
(ಇ)	ಹಾಗಿದ್ದಲ್ಲಿ, ಹೆಚ್ಚುವರಿ ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಮುಂಬರುವ ಸಾಲುಗಳಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಆಧ್ಯತೆಗನುಗುಣವಾಗಿ ಹೆಚ್ಚುವರಿ ಅನುದಾನ ಬಿಡುಗಡೆಮಾಡಲು ಪರಿಶೀಲಿಸಲಾಗುವುದು.
(ಈ)	ಬಿಡುಗಡೆ ಮಾಡಿದ್ದಲ್ಲಿ ಮೀಸಲು ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಅನುಕೂಲವಾಗುವುದಿಲ್ಲವೇ? (ಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಎಂ ಐ ಡಿ 224 ಎಲ್ ಎ ಕ್ಯೂ 2020

(ಜೆ.ಸಿ ಮಾಧುಸ್ವಾಮಿ)
ಕಾನೂನು ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 109
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ .ಎ
3. ಉತ್ತರಿಸಬೇಕಾದ ದಿನಾಂಕ : 08-12-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	2019-20ನೇ ಸಾಲಿನ ಆಯವ್ಯಯದಲ್ಲಿ ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮಂಚನಬೆಲೆ ಜಲಾಶಯದ ಕೆಳಭಾಗದಲ್ಲಿ ಉದ್ಯಾನವನದ ಅಭಿವೃದ್ಧಿ ಹಾಗೂ ಸೌಂದರ್ಯೀಕರಣ ಮತ್ತು ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ರೂ.125.00 ಕೋಟಿ ಅನುದಾನವನ್ನು ಮೀಸಲಿಡಲಾಗಿದೆಯೇ ;	2019-20ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಾಮಗಾರಿಯನ್ನು ರೂ.125.00 ಕೋಟಿಗಳಲ್ಲಿ ಕೈಗೆತ್ತಿಕೊಳ್ಳಲು ಘೋಷಿಸಲಾಗಿದೆ.
ಆ	ಹಾಗಿದ್ದಲ್ಲಿ, ಮೀಸಲಿಟ್ಟ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ ; ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ; ಬಾಕಿ ಇರುವಅನುದಾನ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)	2019-20ನೇ ಸಾಲಿನಲ್ಲಿ ನಿಗಮದಿಂದ ಬಂಡವಾಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ರೂ.50.00 ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿತ್ತು.
ಇ	ಮೀಸಲಿಟ್ಟ ಅನುದಾನವನ್ನು ಬಿಡುಗಡೆ ಮಾಡದಿದ್ದಲ್ಲಿ ಕಾರಣಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)	ಮಂಚನಬೆಲೆ ಜಲಾಶಯದ ಕೆಳಭಾಗದ ಉದ್ಯಾನವನ ಅಭಿವೃದ್ಧಿ ಸೌಂದರೀಕರಣ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಕಾಮಗಾರಿಯನ್ನು ಪಿ.ಪಿ.ಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕುರಿತು ಕಾವೇರಿ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ.
ಈ	ಮಂಚನಬೆಲೆ ಜಲಾಶಯವು ಬೆಂಗಳೂರಿಗೆ ಅತ್ಯಂತ ಸಮೀಪ ಇರುವುದರಿಂದ ದಿನನಿತ್ಯ ಸಾವಿರಾರು ಪ್ರವಾಸಿಗರು ಜಲಾಶಯದ ವೀಕ್ಷಣೆಗಾಗಿ ಆಗಮಿಸುತ್ತಿರುವುದರಿಂದ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳನ್ನು ಕ್ರಮ ಕೈಗೊಳ್ಳಲಾಗುವುದೇ ?	

ಸಂಖ್ಯೆ:ಜಸಂಇ 153 ಎಸ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 111
2. ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)
3. ಉತ್ತರಿಸಬೇಕಾದ ದಿನಾಂಕ : 08.12.2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಭದ್ರಾ ಮೇಲ್ದಂಡೆ ಯೋಜನೆಗೆ ಕಳೆದ 3 ವರ್ಷಗಳಲ್ಲಿ ಒದಗಿಸಿದ ಅನುದಾನ ಎಷ್ಟು; ಖರ್ಚಾದ ಅನುದಾನವೆಷ್ಟು; ಎಷ್ಟು ಬಾಕಿ ಬಿಲ್ಲುಗಳು ಇವೆ;</td><td>ಭದ್ರಾ ಮೇಲ್ದಂಡೆ ಯೋಜನಾ ವಲಯದಡಿಯಲ್ಲಿ 2017-18, 2018-19 ಮತ್ತು 2019-20 ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಅನುದಾನ ಹಾಗೂ ಖರ್ಚಾದ ಮೊತ್ತದ ವಿವರ ಈ ಕೆಳಗಿನಂತಿವೆ:
ರೂ. ಕೋಟಿಗಳಲ್ಲಿ
<table>
<tr><th>ಲೆಕ್ಕ ಶೀರ್ಷಿಕೆ 4701</th><th>ಅನುದಾನ</th><th>ವೆಚ್ಚ</th></tr>
<tr><td>2017-18</td><td>533.10</td><td>533.10</td></tr>
<tr><td>2018-19</td><td>657.40</td><td>657.40</td></tr>
<tr><td>2019-20</td><td>842.74</td><td>842.74</td></tr>
<tr><td>2020-21 (ನವೆಂಬರ್-2020ರ ಅಂತ್ಯಕ್ಕೆ)</td><td>518.00</td><td>379.07</td></tr>
</table>
ಭದ್ರಾ ಮೇಲ್ದಂಡೆ ಯೋಜನೆಯ ಒಟ್ಟು ರೂ.266.07 ಕೋಟಿಗಳ ಮೊತ್ತದ 46 ಬಿಲ್ಲುಗಳು ಬಾಕಿ ಇದ್ದು, ಭೂಸ್ವಾಧೀನಕ್ಕಾಗಿ ರೂ.80.15 ಕೋಟಿಗಳ ಪಾವತಿ ಬಾಕಿ ಇರುತ್ತದೆ.</td></tr>
<tr><td>ಆ)</td><td>ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?</td><td>ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳನ್ನು 2023-24ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.</td></tr>
</table>

ಸಂಖ್ಯೆ: ಜಸಂಇ 107 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

<u>ಕರ್ನಾಟಕ ವಿಧಾನಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	114
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ	:	08.12.2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ)	ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಂಜಳ್ಳಿ ಕೆರೆ ಮತ್ತು ಸುತ್ತಮುತ್ತಲಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯು 2018-19 ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿದ್ದು, ಸದರಿ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು)	ರಾಯಚೂರು ತಾಲ್ಲೂಕು ಗುಂಜಳ್ಳಿ ಗ್ರಾಮದ ವಡ್ಡಗೇರಿ ಬಸಪ್ಪ ಕೆರೆಯನ್ನು ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆಯ ವಿವರವಾದ ಯೋಜನಾ ವರದಿಯ ರೂ.129.50 ಕೋಟಿಗಳ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಪರಿಶೀಲಿಸಿ, ಈಗಾಗಲೇ ಜಲಸಂಪನ್ಮೂಲ ಇಲಾಖೆಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳ ಅಧಿಕ ಕಾರ್ಯಭಾರದ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಕೈಬಿಡುವಂತೆ ಅಥವಾ ಮುಂದೂಡುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ, ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಂಜಳ್ಳಿ ಕೆರೆ ಮತ್ತು ಸುತ್ತಮುತ್ತಲಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.
ಆ)	2019-20 ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ಎಷ್ಟು ಅನುದಾನವನ್ನು ಮೀಸಲಿರಿಸಲಾಗಿದೆ;	
ಇ)	ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರವನ್ನು ನೀಡುವುದು)	

ಸಂಖ್ಯೆ:ಜಸಂಇ 151 ಎಂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 213
ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ.ಹೆಚ್.ಕೆ. (ಸಕಲೇಶಪುರ)
ಉತ್ತರಿಸುವ ದಿನಾಂಕ : 07/12/2020
ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಹಾಸನ ನಗರದಲ್ಲಿ ಸುಮಾರು 100 ವರ್ಷಗಳಷ್ಟು ಹಳೆಯದಾದ ಬಂದೀಖಾನೆ ಇದ್ದು, ಈ ಬಂದೀಖಾನೆಯ ಬದಲಿಗೆ ಹಾಸನ ನಗರದ ಹೊರವಲಯದ ಗಾಡೇನಹಳ್ಳಿ ಗ್ರಾಮದ ಸರ್ವೆ ನಂ.488ರಲ್ಲಿ ಹೊಸದಾಗಿ ಬಂದೀಖಾನೆ ನಿರ್ಮಿಸಲು 40 ಎಕರೆ ಜಮೀನನ್ನು ಮಂಜೂರು ಮಾಡಿರುವುದು ಹಾಗೂ 40 ಎಕರೆ ಜಾಗವು ಬಂದೀಖಾನೆ ಇಲಾಖೆಯ ವಶದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಆ)	ಹಾಗಿದ್ದಲ್ಲಿ, ಹೊಸ ಬಂದೀಖಾನೆ ನಿರ್ಮಿಸುವ ಜಾಗವನ್ನು ಬಂದೀಖಾನೆಯ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರು ಸ್ಥಳ ಪರಿಶೀಲನೆ ಮಾಡಿ ಬಂದೀಖಾನೆ ನಿರ್ಮಿಸಲು ಸೂಕ್ತ ಸ್ಥಳವೆಂದು ವರದಿ ನೀಡಿರುವುದು ನಿಜವೇ;	ಹೌದು
ಇ)	ಲೋಕೋಪಯೋಗಿ ಇಲಾಖೆಯಿಂದ ಹೊಸ ಬಂದೀಖಾನೆಯನ್ನು ನಿರ್ಮಿಸಲು ₹198.00 ಕೋಟಿ ರೂ.ಗಳ ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ, ಹೊಸ ಬಂದೀಖಾನೆಯನ್ನು ನಿರ್ಮಿಸುವ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	ಹೊಸ ಬಂದೀಖಾನೆ ನಿರ್ಮಾಣ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ ವತಿಯಿಂದ ಪಡೆಯಲಾಗಿದ್ದ ₹198.00 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ಅನುದಾನ ಬಿಡುಗಡೆ ಕೋರಿ ಕಾರಾಗೃಹ ಇಲಾಖೆಯಿಂದ ದಿನಾಂಕ:15-09-2018 ಹಾಗೂ 03-06-2019ರ ಪತ್ರದಲ್ಲಿ ಸ್ವೀಕೃತವಾದ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ:25-7-2019ರಲ್ಲಿ ಹೊಸ ಬಂದೀಖಾನೆಯ ವಸತಿಯೇತರ ಕಟ್ಟಡ ಮತ್ತು ರಸ್ತೆಗಳ ನಿರ್ಮಾಣಕ್ಕೆ ಸಲ್ಲಿಸಲಾಗಿರುವ ಅಂದಾಜು ವೆಚ್ಚವು ತುಂಬಾ ಹೆಚ್ಚಾಗಿರುವುದರಿಂದ, ವೆಚ್ಚವನ್ನು ಮರುಪರಿಶೀಲಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ತದನಂತರ, ಕಾರಾಗೃಹ ಇಲಾಖಾ ಮುಖ್ಯಸ್ಥರು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿ., ಇವರಿಂದ ಹೊಸ ಬಂದೀಖಾನೆಯ ವಸತಿಯೇತರ ಕಟ್ಟಡ ಮತ್ತು ರಸ್ತೆಗಳ ನಿರ್ಮಾಣಕ್ಕೆ ₹99.00 ಕೋಟಿ ವೆಚ್ಚದಲ್ಲಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಪಡೆದು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಈ)	ಸದರಿ ಅಂದಾಜಿಗೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯು ಅನುಮತಿ ನೀಡಿರುವುದು ನಿಜವೇ; ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿ., ಇವರಿಂದ ಹಾಸನದ ಹೊಸ ಬಂದೀಖಾನೆಯ ವಸತಿಯೇತರ ಕಟ್ಟಡ ಮತ್ತು ರಸ್ತೆಗಳ ನಿರ್ಮಾಣಕ್ಕೆ ₹99.00 ಕೋಟಿ ವೆಚ್ಚದಲ್ಲಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಪಡೆದು ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು ಪರಿಶೀಲನೆಯಲ್ಲಿದೆ.

ಸಂಖ್ಯೆ:ಹೆಚ್‌ಡಿ 185 ಪಿಆರ್‌ಎ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 286 & 313
2. ಸದಸ್ಯರ ಹೆಸರು : ಶ್ರೀ ಹೆಚ್.ಡಿ.ರೇವಣ್ಣ ; ಮತ್ತು ಶ್ರೀ ಕುಮಾರಸ್ವಾಮಿ ಹೆಚ್.ಕೆ.
3. ಉತ್ತರಿಸಬೇಕಾದ ದಿನಾಂಕ : 08–12–2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018–19 ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೆನರಸೀಪುರ, ಸಕಲೇಶಪುರ ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಹಲವು ಕಾಮಗಾರಿಗಳ ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ಗಳು ಅನುಮೋದನೆಗಾಗಿ ವಿವಿಧ ಹಂತದಲ್ಲಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು.
ಆ	ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018–19ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೇನರಸೀಪುರ ಸಕಲೇಶಪುರ, ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆದಿದ್ದು, ಹಲವು ಕಾಮಗಾರಿಗಳ ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್‌ಗಳ ಅನುಮೋದನೆಗಾಗಿ ವಿವಿಧ ಹಂತದಲ್ಲಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳನ್ನು ತಡೆಹಿಡಿದಿದ್ದು ಸರ್ಕಾರ ಕಾಮಗಾರಿ ಮುಂದುವರೆಸಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕಡತ ಮಂಡಿಸಿ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಜಲಸಂಪನ್ಮೂಲ ಇಲಾಖೆರವರಿಗೆ ನಿರ್ದೇಶನ ನೀಡಿರುವುದು ನಿಜವೇ; ಅವುಗಳನ್ನು ಮುಂದುವರೆಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೇಮಾವತಿ ಜಲಾಶಯ ಯೋಜನೆಯಡಿಯಲ್ಲಿ 2018–19ನೇ ಸಾಲಿನಲ್ಲಿ ಅನುಮೋದನೆಗೊಂಡಿರುವ ಹಾಸನ ಜಿಲ್ಲೆಯ ಹೊಳೇನರಸೀಪುರ, ಸಕಲೇಶಪುರ, ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ನೀರಾವರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಮಗಾರಿಗಳನ್ನು ಮುಂದುವರೆಸುವ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕಡತ ಮಂಡಿಸಿ ಎಂದು ಮಾನ್ಯ ಮುಖ್ಯಮಂತ್ರಿಯವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆರವರಿಗೆ ಸೂಚಿಸಿರುತ್ತಾರೆ. ಅದರಂತೆ, ಹೇಮಾವತಿ ಯೋಜನೆ ಅಡಿಯಲ್ಲಿ ಬರುವ ಹೊಳೆನರಸೀಪುರ, ಸಕಲೇಶಪುರ ಮತ್ತು ಅರಕಲಗೂಡು ವಿಧಾನ ಸಭಾಕ್ಷೇತ್ರ ವ್ಯಾಪ್ತಿಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿರುವ ಒಟ್ಟು 738 ಸಂಖ್ಯೆಯ ರೂ.348.45 ಕೋಟಿ ಮೊತ್ತದ Non-Grounded (Under Tender process) ಕಾಮಗಾರಿಗಳ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.
ಇ	ಮೇಲ್ಕಂಡ ತಡೆಹಿಡಿದಿರುವ ಕಾಮಗಾರಿಗಳ ಬಗ್ಗೆ ಕಾವೇರಿ ನೀರಾವರಿ ನಿಗಮದಿಂದ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿರುವುದು ನಿಜವೆ; ಹಾಗಿದ್ದಲ್ಲಿ, ತಡೆಹಿಡಿದಿರುವ ಟೆಂಡರ್ ನೋಟಿಫಿಕೇಷನ್‌ಗಳಲ್ಲಿನ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು. (ಪೂರ್ಣ ವಿವರ ನೀಡುವುದು).	

ಸಂಖ್ಯೆ:ಜಸಂಇ 157 ಎನ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 287

ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸಿಪುರ)

ಉತ್ತರಿಸುವ ದಿನಾಂಕ : 8/12/2020

ಉತ್ತರಿಸುವ ಸಚಿವರು : ಮಾನ್ಯ ಮುಖ್ಯ ಮಂತ್ರಿಯವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಹಾಸನ ನಗರದಲ್ಲಿ ಸುಮಾರು 100 ವರ್ಷಗಳಷ್ಟು ಹಳೆಯದಾದ ಬಂದೀಖಾನೆ ಇದ್ದು, ಈ ಬಂದೀಖಾನೆ ಬದಲಿಗೆ ಹಾಸನ ನಗರದ ಹೊರವಲಯದ ಗಾಡೇನ ಹಳ್ಳಿ ಗ್ರಾಮದ ಸರ್ವೆ ನಂ. 488 ರಲ್ಲಿ ಹೊಸದಾಗಿ ಬಂದೀಖಾನೆ ನಿರ್ಮಿಸಲು 40 ಎಕರೆ ಜಮೀನನ್ನು ಮಂಜೂರು ಮಾಡಿರುವುದು ಹಾಗೂ ಗಾಡೇನಹಳ್ಳಿ ಸರ್ವೆ ನಂ. 488 ರಲ್ಲಿ ಹೊಸದಾಗಿ ಬಂದೀಖಾನೆ ನಿರ್ಮಿಸಲು 40 ಎಕರೆ ಜಾಗವು ಬಂದೀಖಾನೆಯ ಇಲಾಖೆ ವಶದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಹೊಸ ಬಂದೀಖಾನೆ ನಿರ್ಮಿಸುವ ಜಾಗವನ್ನು ಬಂದೀಖಾನೆಯ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರು ಸ್ಥಳ ಪರಿಶೀಲನೆ ಮಾಡಿ ಬಂದೀಖಾನೆ ನಿರ್ಮಿಸಲು ಸೂಕ್ತ ಸ್ಥಳವೆಂದು ವರದಿ ನೀಡಿರುವುದು ನಿಜವೇ;	ಹೌದು
ಇ)	ಲೋಕೋಪಯೋಗಿ ಇಲಾಖೆಯಿಂದ ಹೊಸ ಬಂದೀಖಾನೆಯನ್ನು ನಿರ್ಮಿಸಲು 198.00 ಕೋಟಿ ರೂ.ಗಳ ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುವುದು ಹಾಗೂ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯು ಸದರಿ ಪ್ರಸ್ತಾವನೆಗೆ ಅನುಮತಿ ನೀಡಿದ ನಂತರ ಗೃಹ ಇಲಾಖೆಯಿಂದ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ ಹಾಸನ ನಗರದಲ್ಲಿ ಹೊಸದಾಗಿ ಬಂದೀಖಾನೆ ನಿರ್ಮಾಣ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಕೈಗೆತ್ತಿಕೊಳ್ಳಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು).	ಹೊಸ ಬಂದೀಖಾನೆ ನಿರ್ಮಾಣ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ ವತಿಯಿಂದ ಪಡೆಯಲಾಗಿದ್ದ ₹198.00 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ಅನುದಾನ ಬಿಡುಗಡೆ ಕೋರಿ ಕಾರಾಗೃಹ ಇಲಾಖೆಯಿಂದ ದಿನಾಂಕ:15-09-2018 ಹಾಗೂ 03-06-2019 ರ ಪತ್ರದಲ್ಲಿ ಸ್ವೀಕೃತವಾದ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ:25-7-2019ರಲ್ಲಿ ಹೊಸ ಬಂದೀಖಾನೆಯ ವಸತಿಯೇತರ ಕಟ್ಟಡ ಮತ್ತು ರಸ್ತೆಗಳ ನಿರ್ಮಾಣಕ್ಕೆ ಸಲ್ಲಿಸಲಾಗಿರುವ ಅಂದಾಜು ವೆಚ್ಚವು ತುಂಬಾ ಹೆಚ್ಚಾಗಿರುವುದರಿಂದ, ವೆಚ್ಚವನ್ನು ಮರುಪರಿಶೀಲಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ತದನಂತರ, ಕಾರಾಗೃಹ ಇಲಾಖಾ ಮುಖ್ಯಸ್ಥರು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿ., ಇವರಿಂದ ಹೊಸ ಬಂದೀಖಾನೆಯ ವಸತಿಯೇತರ ಕಟ್ಟಡ ಮತ್ತು ರಸ್ತೆಗಳ ನಿರ್ಮಾಣಕ್ಕೆ ₹99.00 ಕೋಟಿ ವೆಚ್ಚದಲ್ಲಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಪಡೆದು ದಿನಾಂಕ:27-11-2019ರಂದು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಸಂಖ್ಯೆ: ಹೆಚ್ ಡಿ 184 ಪಿಆರ್ ಎ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	292
ಸದಸ್ಯರ ಹೆಸರು	:	ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)
ಉತ್ತರಿಸಬೇಕಾದ ದಿನಾಂಕ	:	08.12.2020
ಉತ್ತರಿಸಬೇಕಾದ ಸಚಿವರು		ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಬೇಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಬೇಲೂರು ಉಪ ವಿಭಾಗ ಹಾಗೂ ಹಳೇಬಿಡು ಶಾಖಾ ಕಛೇರಿಯಿಂದ ಸಕಲೇಶಪುರ ವಿಭಾಗೀಯ ಕಛೇರಿಗೆ ಸುಮಾರು 65 ಕಿ.ಮೀ ಗೂ ಅಧಿಕ ಅಂತವಿದ್ದು, ಇದರಿಂದ ರೈತರು ಹಾಗೂ ಸಾರ್ವಜನಿಕರ ದಿನನಿತ್ಯದ ತುರ್ತು ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬೇಲೂರು ತಾಲ್ಲೂಕಿಗೆ ಹೊಸದಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ವಿಭಾಗೀಯ ಕಛೇರಿ ಮತ್ತು ಉಗ್ರಾಣ, ಹಳೇಬೀಡು ಗ್ರಾಮಕ್ಕೆ ಹಾಗೂ ಅರೇಹಳ್ಳಿ ಗ್ರಾಮಕ್ಕೆ ಉಪವಿಭಾಗ ಕಛೇರಿಗಳು, ಬಿಕ್ಕೋಡು, ಗಂಗೂರು, ಅಡಗೂಡು ಗ್ರಾಮಗಳಿಗೆ ಶಾಖಾ ಕಛೇರಿಗಳ ಮಂಜೂರಾತಿ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ವ್ಯಾಪ್ತಿಯಲ್ಲಿರುವ ಬೇಲೂರು ವಿಧಾನಸಭಾ ಕ್ಷೇತ್ರಕ್ಕೆ ವಿಭಾಗೀಯ ಕಛೇರಿ ಮತ್ತು ಉಗ್ರಾಣ ವನ್ನು ಹೊಸದಾಗಿ ರಚಿಸಲು ಪ್ರಸ್ತಾವನೆಗಳಿರುವುದಿಲ್ಲ. ಮುಂದುವರೆದಂತೆ, ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಹಳೇಬೀಡು ಗ್ರಾಮಕ್ಕೆ ಹಾಗೂ ಅರೇಹಳ್ಳಿ ಗ್ರಾಮಕ್ಕೆ ಉಪವಿಭಾಗ ಕಛೇರಿಗಳು, ಮತ್ತು ಬಿಕ್ಕೋಡು, ಗಂಗೂರು, ಅಡಗೂಡು ಗ್ರಾಮಗಳಿಗೆ ಶಾಖಾ ಕಛೇರಿಗಳನ್ನು ಹೊಸದಾಗಿ ರಚಿಸಲು ಪ್ರಸ್ತಾವನೆಗಳು ಪರಿಶೀಲನಾ ಹಂತದಲ್ಲಿದ್ದು, ಮುಂಬರುವ ಮಂಡಳಿ ಸಭೆಯಲ್ಲಿ ಮಂಡಿಸಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ಕ್ರಮ ತೆಗೆದುಕೊಳ್ಳಲಾಗುವುದು.
ಇ)	ಹಾಗಿದ್ದಲ್ಲಿ, ಸದರಿ ಕಛೇರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	

ಸಂಖ್ಯೆ: ಎನರ್ಜಿ 202 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 297
2. ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
3. ಉತ್ತರಿಸಬೇಕಾದ ದಿನಾಂಕ : 08.12.2020
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಎತ್ತಿನಹೊಳೆ ಬಯಲು ಸೀಮೆಯ ಕುಡಿಯುವ ನೀರಿನ ಯೋಜನೆಯ ಒಟ್ಟು ಮೊತ್ತ ವೆಷ್ಟು;	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಒಟ್ಟು ಅಂದಾಜು ಮೊತ್ತವು ರೂ.12,912.36 ಕೋಟಿಗಳಾಗಿರುತ್ತದೆ.
ಆ)	ಎಷ್ಟು ತಾಲ್ಲೂಕುಗಳಲ್ಲಿ ಸದರಿ ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಎಷ್ಟು ತಾಲ್ಲೂಕುಗಳಲ್ಲಿ ಕಾಮಗಾರಿಗಳು ಮುಂದುವರೆದಿದೆ; (ವಿವರ ನೀಡುವುದು)	ಯಾವುದೇ ತಾಲ್ಲೂಕುಗಳಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ.
ಇ)	ಈ ಯೋಜನೆಯ ಕಾಮಗಾರಿಗಳು ಪೂರ್ಣಗೊಳ್ಳಲು ಉಳಿಕೆ ಕಾಮಗಾರಿಗಳು ಯಾವುವು? (ವಿವರ ನೀಡುವುದು)	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಎರಡು ಹಂತದಲ್ಲಿ ಕೈಗೊಳ್ಳಲಾಗಿರುತ್ತದೆ. ✓ ಹಂತ-1- ಲಿಫ್ಟ್ ಕಾಮಗಾರಿ. ✓ ಹಂತ-2- ಮುಖ್ಯ ಗುರುತ್ವಾ ಕಾಲುವೆ ನಿರ್ಮಾಣ. ✓ ಬೈರಗೊಂಡ್ಲು ಜಲಾಶಯ ನಿರ್ಮಾಣ. ✓ ರಾಮನಗರ-ಟಿ.ಜಿ.ಹಳ್ಳಿ ಫೀಡರ್ ನಿರ್ಮಾಣ. ✓ ಮಧುಗಿರಿ ಫೀಡರ್ ನಿರ್ಮಾಣ. ✓ ಗೌರಿಬಿದನೂರು ಫೀಡರ್ ನಿರ್ಮಾಣ. ಈ ಕೆಳಕಂಡ ಕಾಮಗಾರಿಗಳ ಸರ್ವೇ ಕಾರ್ಯ ಪೂರ್ಣಗೊಂಡಿದ್ದು, ಅಂದಾಜುಗಳ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ✓ ಬೈರಗೊಂಡ್ಲು-ಕುಂದಾಣ ಲಿಫ್ಟ್. ✓ ಕೋಲಾರ ಫೀಡರ್ ನಿರ್ಮಾಣ. ✓ ಶ್ರೀನಿವಾಸಪುರ ಫೀಡರ್ ನಿರ್ಮಾಣ.

ಸಂಖ್ಯೆ: ಜಸಂಇ 108 ಡಬ್ಲ್ಯೂಎಲ್ಎ 2020

(ರಮೇಶ್ ಎಲ್. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 319
2. ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ.(ಆನೇಕಲ್)
3. ಉತ್ತರಿಸುವ ದಿನಾಂಕ : 08/12/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕಿಗೆ ಟ್ರಾಫಿಕ್ ಪೊಲೀಸ್ ಠಾಣೆ ಮತ್ತು ಮಹಿಳಾ ಪೊಲೀಸ್ ಠಾಣೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು) ;	ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ)	ಈ ತಾಲ್ಲೂಕಿಗೆ ಟ್ರಾಫಿಕ್ ಪೊಲೀಸ್ ಠಾಣೆ ಮತ್ತು ಮಹಿಳಾ ಪೊಲೀಸ್ ಠಾಣೆಯನ್ನು ಯಾವಾಗ ಮಂಜೂರು ಮಾಡಿ ಕಾರ್ಯಾರಂಭ ಗೊಳಿಸಲಾಗುವುದು (ಪೂರ್ಣ ವಿವರ ನೀಡುವುದು) ;	ಸರ್ಕಾರಿ ಆದೇಶ ಸಂಖ್ಯೆ:ಹೆಚ್‌ಡಿ/124/ಪಿಓಪಿ/2016, ದಿನಾಂಕ: 12.05.2016 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ (ಆನೇಕಲ್ ಸೇರಿದಂತೆ) ಮಹಿಳಾ ಪೊಲೀಸ್ ಠಾಣೆಯನ್ನು ಮಂಜೂರು ಮಾಡಲಾಗಿರುತ್ತದೆ. ಜಿಲ್ಲೆಗೊಂದರಂತೆ ಸ್ಥಾಪಿಸಲಾದ ಮಹಿಳಾ ಪೊಲೀಸ್ ಠಾಣೆಯು ಪ್ರಸ್ತುತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ಕಾರ್ಯನಿರ್ವಹಿಸುತ್ತಿದೆ.
ಇ)	ಈ ತಾಲ್ಲೂಕು ನೂರಾರು ಕೈಗಾರಿಕೆಗಳನ್ನು ಹೊಂದಿದ್ದು, ಲಕ್ಷಾಂತರ ಜನ ಕಾರ್ಮಿಕರು ಪ್ರಯಾಣಿಸುತ್ತಿರುವುದರಿಂದ ಟ್ರಾಫಿಕ್ ಮತ್ತು ಮಹಿಳಾ ಪೊಲೀಸ್ ಠಾಣೆ ಅಗತ್ಯವಾಗಿ ಮಂಜೂರು ಮಾಡಬೇಕೆಂಬ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ (ವಿವರ ನೀಡುವುದು) ?	ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ:ಹೆಚ್‌ಡಿ 127 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 321
2.	ಸದಸ್ಯರ ಹೆಸರು	: ಶ್ರೀ ಶಿವಣ್ಣ ಬಿ. (ಆನೇಕಲ್)
3.	ಉತ್ತರಿಸಬೇಕಾದ ದಿನಾಂಕ	: 08-12-2020
4.	ಉತ್ತರಿಸುವ ಸಚಿವರು	: ಮಾನ್ಯ ಮುಖ್ಯಮಂತ್ರಿಗಳು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2018ರ ಫೆಬ್ರುವರಿಯಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ವರೆಗೆ ಮೆಟ್ರೋ ರೈಲು ಸೇವೆ ವಿಸ್ತರಿಸುವ ಕುರಿತು ಪ್ರಸ್ತಾವನೆ ಇದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರನೀಡುವುದು)	2018ರ ಫೆಬ್ರುವರಿಯಲ್ಲಿ ಮಂಡಿಸಿದ ಮುಂಗಡ ಪತ್ರದಲ್ಲಿ ಬೊಮ್ಮಸಂದ್ರದಿಂದ ಅತ್ತಿಬೆಲೆ ವರೆಗೆ ಮೆಟ್ರೋ ರೈಲು ವಿಸ್ತರಿಸುವ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ.
ಆ)	ಈ ತಾಲ್ಲೂಕಿನ ನಾರಾಯಣ ಹೃದಯಾಲಯದಿಂದ ಅತ್ತಿಬೆಲೆ ವರೆಗೆ ವಿಪರೀತ ಜನದಟ್ಟಣೆ ಇರುವುದರಿಂದ ಮೆಟ್ರೋ ರೈಲು ಸೇವೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಪೂರ್ಣ ವಿವರ ನೀಡುವುದು)	ಮೆಟ್ರೋ ಯೋಜನೆಗಳಿಗಾಗಿ ಕೇಂದ್ರ ಸರ್ಕಾರವು ನಿಗಧಿಪಡಿಸಿದ ಮಾನದಂಡಗಳ ಪ್ರಕಾರ, ಈ ವಿಸ್ತರಣಾ ಮಾರ್ಗವು ಕಾರ್ಯಸಾಧ್ಯತೆ ಇರುವುದಿಲ್ಲ.
ಇ)	ಈ ತಾಲ್ಲೂಕಿನ ಅತ್ತಿಬೆಲೆಯ ಗಡಿಯು ತಮಿಳುನಾಡಿಗೆ ಹೊಂದಿಕೊಂಡಿದ್ದು, ನೂರಾರು ಕೈಗಾರಿಕೆಗಳಿದ್ದು, ಲಕ್ಷಾಂತರ ಕಾರ್ಮಿಕರು ಪ್ರಯಾಣಿಸುವುದರಿಂದ ಅತ್ಯಗತ್ಯವಾಗಿ ಅತ್ತಿಬೆಲೆವರೆಗೆ ಮೆಟ್ರೋ ಸೇವೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಪರಿಶೀಲನಾ ಹಂತದಲ್ಲಿದೆಯೇ (ವಿವರನೀಡುವುದು)?	ಅತ್ತಿಬೆಲೆ ವರೆಗೆ ಮೆಟ್ರೋ ಸೇವೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಕಡತ ಸಂಖ್ಯೆ: ನಅಇ 255 ಪಿ.ಆರ್.ಜೆ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 333
2. ಸದಸ್ಯರ ಹೆಸರು : ಶ್ರೀ ಮುನಿರತ್ನ (ರಾಜರಾಜೇಶ್ವರಿನಗರ)
3. ಉತ್ತರಿಸುವ ದಿನಾಂಕ : 08-12-2020
4. ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ಯೋಜನೆಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯಡಿಯಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೆ.ಆರ್.ಐ.ಡಿ.ಎಲ್ ವತಿಯಿಂದ 174 ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದು, ಸದರಿ ಕಾಮಗಾರಿಗಳಲ್ಲಿ 120 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಮುಂದುವರೆದು 16 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಇವುಗಳಲ್ಲಿ 12 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ. ಉಳಿದ 04 ಕಾಮಗಾರಿಗಳ ಪೈಕಿ 03 ಕಾಮಗಾರಿಗಳಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡಲಾಗಿದ್ದು, ಒಂದು ಕಾಮಗಾರಿಗೆ ಸಂಬಂಧಿಸಿದಂತೆ ಮರು ಟೆಂಡರ್ ಕರೆಯಲು ನಿರ್ದೇಶನ ನೀಡಲಾಗಿದೆ.
ಆ	ಬಂದಿದ್ದಲ್ಲಿ, ಈ ಯೋಜನೆಯಡಿಯಲ್ಲಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಇರುವ ಅಡೆ-ತಡೆಗಳೇನು;	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಘೋಷಣೆಯಾಗಿ ನೀತಿ ಸಂಹಿತೆ ಜಾರಿಯಲ್ಲಿ ಇದ್ದ ಕಾರಣ ಕಾಮಗಾರಿಗಳ ಪ್ರಗತಿ ವಿಳಂಬವಾಗಿರುತ್ತದೆ. ಪ್ರಸ್ತುತ ಉಪ ಚುನಾವಣಾ ಪ್ರಕ್ರಿಯೆಗಳು ಪೂರ್ಣಗೊಂಡಿರುವುದರಿಂದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
ಇ	ಪ್ರಸ್ತುತ ಕಾಮಗಾರಿಗಳು ಮತ್ತು ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಕಾಮಗಾರಿ ಪ್ರಾರಂಭಗೊಂಡ ದಿನದಿಂದ ಇಲ್ಲಿಯವರೆಗಿನ ಮಾಹಿತಿ, ಟೆಂಡರ್ ಸಿದ್ಧತೆ ಪ್ರಕ್ರಿಯೆ ಮತ್ತು ಕಾಮಗಾರಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಒದಗಿಸುವುದು?	ಕೆ.ಆರ್.ಐ.ಡಿ.ಎಲ್ ಮುಖಾಂತರ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳು ರಾಜರಾಜೇಶ್ವರಿನಗರ ಉಪ ಚುನಾವಣೆಯಿಂದ ಹಾಗೂ ಇತ್ತೀಚಿನ ದಿನಗಳಲ್ಲಿ ಸುರಿದ ಭಾರೀ ಮಳೆಯಿಂದ ಕಾಮಗಾರಿಯ ಪ್ರಗತಿ ವಿಳಂಬಗೊಂಡಿದ್ದು, ಸದರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಮುಂದುವರೆದು ಪ್ಯಾಕೇಜ್ ಅಡಿಯಲ್ಲಿ ಈಗಾಗಲೇ ಟೆಂಡರ್ ಕರೆದು ಕಾರ್ಯಾದೇಶ ನೀಡಲಾಗಿರುವ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಸಂಖ್ಯೆ: ನಅಇ 240 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 334
2. ಮಾನ್ಯ ಸದಸ್ಯರ ಹೆಸರು : ಶ್ರೀ ಮುನಿರತ್ನ (ರಾಜರಾಜೇಶ್ವರಿನಗರ)
3. ಉತ್ತರಿಸುವ ದಿನಾಂಕ : 08/12/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ವಾರ್ಡ್ ನಂ.160 ರಾಜರಾಜೇಶ್ವರಿನಗರವು 196 ಕಿ.ಮೀಟರ್ ವ್ಯಾಪ್ತಿ ಹೊಂದಿರುವುದರಿಂದ ರಾಜರಾಜೇಶ್ವರಿ ನಗರದಲ್ಲಿ ಸಂಚಾರ ಪೊಲೀಸ್ ಠಾಣೆ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;	ಬೆಂಗಳೂರು ನಗರ ಪೊಲೀಸ್ ವ್ಯಾಪ್ತಿಯಡಿ ಬರುವ ಪೊಲೀಸ್ ಠಾಣೆ ಮತ್ತು ಉಪ ವಿಭಾಗಗಳ ಪುನರ್ ವಿಂಗಡಣೆ, ಸೃಜನೆ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಸರ್ಕಾರದ ಆದೇಶ ಸಂಖ್ಯೆ : ಹೆಚ್.ಡಿ 99 ಪಿಓಪಿ 2020, ದಿನಾಂಕ:17.10.2020 ರಲ್ಲಿ ಆದೇಶವನ್ನು ಹೊರಡಿಸಲಾಗಿದ್ದು, ಸದರಿ ಸಮಿತಿಯಿಂದ ವರದಿ ಸ್ವೀಕೃತವಾದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.
ಆ)	ಹಾಗಿದ್ದಲ್ಲಿ, ರಾಜರಾಜೇಶ್ವರಿನಗರ ಸಂಚಾರ ಪೊಲೀಸ್ ಠಾಣೆ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು) ?	

ಸಂಖ್ಯೆ:ಹೆಚ್‌ಡಿ 128 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 345
2. ಮಾನ್ಯ ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್ (ಪುತ್ತೂರು)
3. ಉತ್ತರಿಸುವ ದಿನಾಂಕ : 08/12/2020
4. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರದಲ್ಲಿ ಪೊಲೀಸ್ ಆಯುಕ್ತರ ಕಛೇರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯು ಎರಡು ಒಂದೇ ಜಾಗದಲ್ಲಿ ಇದ್ದು, ಭೌಗೋಳಿಕವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಯವ್ಯಾಪ್ತಿ ಸುಮಾರು 100 ಕಿ.ಮೀ. ಗಳಿಗಿಂತಲೂ ಅಧಿಕ ವ್ಯಾಪ್ತಿಯಿದ್ದು ಭೌಗೋಳಿಕವಾಗಿ ಇತರೆ ತಾಲ್ಲೂಕುಗಳಿಗೆ ತುಂಬಾ ದೂರದಲ್ಲಿರುವುದರಿಂದ ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯನ್ನು ಪುತ್ತೂರು ತಾಲ್ಲೂಕಿನ ವ್ಯಾಪ್ತಿಗೆ ಸ್ಥಳಾಂತರ ಮಾಡಿ ಭೌಗೋಳಿಕ ಅಸಮತೋಲನೆಯನ್ನು ನಿವಾರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ ಹಾಗೂ ಕಡಬ ತಾಲ್ಲೂಕುಗಳ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿನ ಕಾನೂನು ಸುವ್ಯವಸ್ಥೆ ಹಿತದೃಷ್ಟಿಯಿಂದ ಪುತ್ತೂರಿನಲ್ಲಿ ಈಗಾಗಲೇ ಸಹಾಯಕ ಪೊಲೀಸ್ ಅಧೀಕ್ಷಕರ ಕಛೇರಿಯು ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿ ಬಂಟ್ವಾಳ ಹಾಗೂ ಬೆಳ್ತಂಗಡಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಬಂಟ್ವಾಳದಲ್ಲಿ ಪೊಲೀಸ್ ಉಪಾಧೀಕ್ಷಕರ ಕಛೇರಿಯು ಕಾರ್ಯನಿರ್ವಹಿಸುತ್ತಿದೆ. ಪೊಲೀಸ್ ಅಧೀಕ್ಷಕರ ಕಛೇರಿಯನ್ನು ಪುತ್ತೂರಿಗೆ ಸ್ಥಳಾಂತರಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು ?	ಉದ್ಭವಿಸುವುದಿಲ್ಲ

ಸಂಖ್ಯೆ:ಹೆಚ್‌ಡಿ 129 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 346
ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ : 08.12.2020
ಉತ್ತರಿಸುವವರು : ಮುಖ್ಯಮಂತ್ರಿಗಳು

	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳ ಇಲಾಖೆಯಿಂದ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಡಿಕೆಗೆ ಅನುಗುಣವಾಗಿ ಎಷ್ಟು ಎಕರೆ ಜಾಗವನ್ನು ಇದುವರೆಗೆ ಗುರುತಿಸಲಾಗಿದೆ;	ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕು, ಅರಿಯಡ್ಕ ಗ್ರಾಮದ ಸರ್ವೆ ನಂ.148/5ಎ1 ಹಾಗೂ 153/2ಬಿ–3ರಲ್ಲಿ ಹೊಸ ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಒಟ್ಟು 7.94 ಎಕರೆ ಸರ್ಕಾರಿ ಜಮೀನು ಗುರುತಿಸಲಾಗಿದೆ ದಿನಾಂಕ 11.11.2019 ರಂದು ಕೆಎಸ್ಎಸ್ಐಡಿಯಿಂದ ಹೊರಡಿಸಲಾದ ಬೇಡಿಕೆ ಸಮೀಕ್ಷೆಗೆ ಎದುರಾಗಿ ಒಟ್ಟು 32.00 ಎಕರೆ ಬೇಡಿಕೆ ಇರುತ್ತದೆ. ಆದರೆ ಸದರಿ ಜಮೀನು ಒತ್ತುವರಿಯಿಂದ ಕೂಡಿರುವುದರಿಂದ ಕೇವಲ 4–00 ಎಕರೆ ಮಾತ್ರ ಲಭ್ಯವಾಗುವುದಾಗಿ ಕಂದಾಯ ಇಲಾಖೆಯಿಂದ ತಿಳಿದು ಬಂದಿರುತ್ತದೆ. ಪುತ್ತೂರು ತಾಲ್ಲೂಕು, ಅರಿಯಡ್ಕ ಗ್ರಾಮದಲ್ಲಿ ಲಭ್ಯವಾಗಬಹುದಾದ 4–00 ಎಕರೆ ಜಮೀನು ಕೈಗಾರಿಕಾ ವಸಾಹತು ಸ್ಥಾಪನೆಗೆ ಸೂಕ್ತವಾಗುವುದಿಲ್ಲವೆಂಬ ಕಾರಣಕ್ಕಾಗಿ, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕು, ಆರ್ಯಾಪು ಗ್ರಾಮದ ಸರ್ವೆ ನಂ.26/2 30.37 ಎಕರೆ ಸರ್ಕಾರಿ ಜಮೀನು ಗುರುತಿಸಲಾಗಿದೆ. ಕೆಎಸ್ಎಸ್ಐಡಿಸಿಯಿಂದ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
ಆ)	ಸಣ್ಣ ಕೈಗಾರಿಕೆ ಆರಂಭಿಸಲು ಇದುವರೆಗೂ ಜಾಗ ಗುರುತಿಸದಿದ್ದಲ್ಲಿ ಜಾಗ ಗುರುತಿಸುವ ಪ್ರಕ್ರಿಯೆಯನ್ನು ಯಾವಾಗ ಪ್ರಾರಂಭಿಸಲಾಗುವುದು?	ಕೈಗಾರಿಕಾ ವಸಾಹತು ಸ್ಥಾಪನೆಗೆ ಜಾಗ ಗುರುತಿಸಲಾಗಿದೆ.

ಸಿಐ 144 ಸಿಎಸ್ಸಿ 2020

ಬಿಎಸ್ವೈ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 356
ಸದಸ್ಯರ ಹೆಸರು: ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸಬೇಕಾದ ದಿನಾಂಕ: 08/12/2020
ಉತ್ತರಿಸುವ ಸಚಿವರು: ಮುಖ್ಯಮಂತ್ರಿ

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಲೋಕಸೇವಾ ಆಯೋಗದಿಂದ 2017-18ರ ಅಧಿಸೂಚನೆಯ ಅಡಿಯಲ್ಲಿ ಆಯ್ಕೆಯಾದ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರುಗಳ ಅಭ್ಯರ್ಥಿಗಳಿಗೆ ಇದುವರೆವಿಗೂ ಆದೇಶವನ್ನು ನೀಡದೆ ತಡೆ ಹಿಡಿಯಲು ಕಾರಣವೇನು; ಮತ್ತು ಆದೇಶವನ್ನು ಯಾವಾಗ ನೀಡಲಾಗುವುದು;	ಕರ್ನಾಟಕ ಲೋಕಸೇವಾ ಆಯೋಗವು 2017-18ರ ಅಧಿಸೂಚನೆಯಂತೆ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ದಿನಾಂಕ: 02-06-2020ರಂದು ಪ್ರಕಟಿಸಿ ನೇಮಕಾತಿಯ ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳಿಗೆ ಕಳುಹಿಸಲಾಗಿದೆ, ಪ್ರಸ್ತುತ ರಾಜ್ಯದಲ್ಲಿ ಕೋವಿಡ್ -19ನಿಂದ ಉಂಟಾದ ಆರ್ಥಿಕ ನಿರ್ಭಂದಗಳ ಹಿನ್ನೆಲೆಯಲ್ಲಿ 2020-21ನೇ ಸಾಲಿನ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೂ ತಡೆ ಹಿಡಿಯಲಾಗಿದೆ.
ಆ)	ಈ ಅಭ್ಯರ್ಥಿಗಳು ಇತ್ತೀಚೆಗೆ ಸತ್ಯಾಗ್ರಹ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	- ಇಲ್ಲ.-

ಸಂಖ್ಯೆ.ಸಿಆಸುಇ 107 ಎಸ್‌ಎಲ್‌ಎ 2020

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 371
2 ಸದಸ್ಯರ ಹೆಸರು : ಶ್ರೀ ಭೀಮಾ ನಾಯ್ಕ್ ಎಸ್ (ಹಗರಿಬೊಮ್ಮನಹಳ್ಳಿ),
3 ಉತ್ತರಿಸುವ ದಿನಾಂಕ : 08.12.2020
4 ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಹಗರಿಬೊಮ್ಮನಹಳ್ಳಿ ಠಾಣೆಯ ವೃತ್ತ ನಿರೀಕ್ಷಕರ ಕರ್ತವ್ಯ ನಿರ್ಲಕ್ಷ್ಯದಿಂದ ಕ್ಷೇತ್ರದಲ್ಲಿ ಅಕ್ರಮ ಚಟುವಟಿಕೆಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹಗರಿಬೊಮ್ಮನಹಳ್ಳಿ ವೃತ್ತ ವ್ಯಾಪ್ತಿಯಲ್ಲಿ ಅಕ್ರಮ ಚಟುವಟಿಕೆಗಳ ಮಾಹಿತಿಯನ್ನು ಕಾಲಕಾಲಕ್ಕೆ ಸಂಗ್ರಹಿಸಿ, ದಾಳಿ ಮಾಡಿ 2020ನೇ ಸಾಲಿನಲ್ಲಿ ಅಕ್ರಮ ಜೂಜಾಟ, ಮಟ್ಕಾ ಮತ್ತು ಅಕ್ರಮ ಮರಳು ಗಣಿಗಾರಿಕೆ, ಅಕ್ರಮ ಮದ್ಯ ಮಾರಾಟ ಇತರೆ (ಗಾಂಜಾ) ಎನ್.ಡಿ.ಪಿ.ಎಸ್. ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.
<table>
<tr><th>ಸಿಪಿಐ ಹಗರಿಬೊಮ್ಮನಹಳ್ಳಿ ವೃತ್ತ</th><th>ಪಿ.ಎಸ್.ಐ ಹಗರಿಬೊಮ್ಮನಹಳ್ಳಿ</th><th>ಪಿ.ಎಸ್.ಐ. ತಂಬ್ರಹಳ್ಳಿ ಠಾಣೆ</th></tr>
<tr><td>27</td><td>43</td><td>35</td></tr>
<tr><td colspan="3">ಒಟ್ಟು 105</td></tr>
</table>
</td></tr>
<tr><td>ಆ)</td><td>ಸದರಿ ವೃತ್ತ ನಿರೀಕ್ಷಕರು ವಾಸ್ತವ ಪರಿಸ್ಥಿತಿಯನ್ನು ಅವಲೋಕಿಸದೇ ರಾಜಕೀಯ ಒತ್ತಡಕ್ಕೆ ಮಣಿದು ಏಕಪಕ್ಷೀಯವಾಗಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಮಾನ್ಯ ಶಾಸಕರಾದ ಶ್ರೀ ಭೀಮಾ ನಾಯ್ಕ ಎಸ್. ರವರು ಹಗರಿಬೊಮ್ಮನಹಳ್ಳಿ ಠಾಣೆಯ ವೃತ್ತ ನಿರೀಕ್ಷಕರ ವಿರುದ್ಧ ಸಲ್ಲಿಸಲಾಗಿದ್ದ ದೂರು ಅರ್ಜಿಯು ಪ್ರಸ್ತುತ ವಿಚಾರಣಾ ಹಂತದಲ್ಲಿರುತ್ತದೆ.</td></tr>
<tr><td>ಇ)</td><td>ಸದರಿ ಅಧಿಕಾರಿಯ ವಿರುದ್ಧ ಈಗಾಗಲೇ ದೂರು ಸಲ್ಲಿಸಲಾಗಿದ್ದು, ಪ್ರಸ್ತುತ ದೂರಿನ ವಿಚಾರಣೆ ಯಾವ ಹಂತದಲ್ಲಿದೆ?</td></tr>
</table>

ಸಂಖ್ಯೆ: ಒಇ 79 ಪಿಇಎಂ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	61
ಮಾನ್ಯ ಸದಸ್ಯರ ಹೆಸರು	:	ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸುವ ದಿನಾಂಕ	:	08.12.2020
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿರುವ ಖಾಸಗಿ ಅನುದಾನಿತ ಶಾಲಾ/ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಕಾಲ್ಪನಿಕ ವೇತನ ಬಡ್ತಿ ಸಮಸ್ಯೆಯು ಇದುವರೆವಿಗೂ ಇತ್ಯರ್ಥವಾಗದೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಹಾಗಿದ್ದಲ್ಲಿ, ಸದರಿ ನೌಕರರುಗಳಿಗೆ ಕಾಲ್ಪನಿಕ ವೇತನ ಬಡ್ತಿಯನ್ನು ನೀಡುವ ಸಂಬಂಧ ಮುಂದಿನ ಆಯವ್ಯಯದಲ್ಲಿ ಘೋಷಣೆ ಮಾಡಲಾಗುವುದೇ;	ಅನುದಾನ ಸಂಹಿತೆಯ ಪ್ರಕಾರ ಅನುದಾನಕ್ಕೊಳಪಟ್ಟ ಸಿಬ್ಬಂದಿಗೆ ಅನುದಾನ ದೊರೆತ ದಿನಾಂಕದಿಂದ ಮಾತ್ರ ಕನಿಷ್ಠ ವೇತನ ನಿಗದಿ ಮಾಡಬೇಕು ಹಾಗೂ ಹಿಂದಿನ ಸೇವಾವಧಿಯನ್ನು ಯಾವುದೇ ಸೇವಾ ಸೌಲಭ್ಯಕ್ಕೆ ಪರಿಗಣಿಸುವಂತಿಲ್ಲ. ಈ ಸಂಬಂಧ ಸರ್ಕಾರವು ದಿನಾಂಕ:01.06.1995ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014ನ್ನು ಜಾರಿಗೆ ತಂದಿದೆ. ಈ ಅಧಿನಿಯಮವನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಪ್ರಶ್ನಿಸಿದುವ ರಿಟ್ ಅರ್ಜಿಗಳಾದ 21216/2014 ಮತ್ತು 14307/2014 ಮತ್ತು ತತ್ಸಂಬಂಧದ ಪ್ರಕರಣಗಳಲ್ಲಿ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ:10.07.2015ರಂದು ನೀಡಿದ ತೀರ್ಪಿನಲ್ಲಿ ಸದರಿ ಅಧಿನಿಯಮವನ್ನು " struck down " ಮಾಡಿರುತ್ತದೆ. ಮೇಲಿನ ಮಾನ್ಯ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅಪೀಲ್ ಸಂಖ್ಯೆ:2476/2015 ಮತ್ತು 2467/2015ನ್ನು ದಾಖಲಿಸಿದೆ. ಮೇಲಿನ ರಿಟ್ ಅರ್ಜಿಗಳಲ್ಲಿ ನೀಡಿದ ತೀರ್ಪಿಗೆ ದಿನಾಂಕ:27.11.2015ರಂದು ತಡೆಯಾಜ್ಞೆ ನೀಡಿರುತ್ತದೆ. ಸದರಿ ತಡೆಯಾಜ್ಞೆಯು ಪ್ರಸ್ತುತ ಜಾರಿಯಲ್ಲಿದ್ದು, ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ.
ಇ	ಸದರಿ ನೌಕರರುಗಳಿಗೆ ಕಾಲ್ಪನಿಕ ವೇತನ ಬಡ್ತಿಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಇಲ್ಲವಾದಲ್ಲಿ, ಈ ನೌಕರರುಗಳಿಗೆ ಕಾಲ್ಪನಿಕ ವೇತನ ಬಡ್ತಿಯನ್ನು ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು?(ವಿವರ ನೀಡುವುದು)	

		ಹಾಲಿ ನೀಡಲಾಗುತ್ತಿರುವ ವೇತನಕ್ಕೆ ಅನುದಾನ ರಹಿತ ಅವಧಿಯನ್ನು ಪರಿಗಣನೆಗೆ ತೆಗೆದುಕೊಂಡು ವೇತನವನ್ನು ಪರಿಷ್ಕರಿಸಿದಲ್ಲಿ ಹೆಚ್ಚುವರಿಯಾಗಿ ವಾರ್ಷಿಕವಾಗಿ ರೂ.359.87/- ಕೋಟಿಗಳ ಅನುದಾನವು ಬೇಕಾಗುತ್ತದೆ. ಆದರೆ ಅವರಿಗೆ ಹಿಂಬಾಕಿ ಹಾಗು ಪಿಂಚಣಿಗಾಗಿ ತಗಲುವ ಅಂದಾಜು ವೆಚ್ಚವು ಪ್ರಸ್ತಾಪಿತ ರೂ.359.87/-ಕೋಟಿಗಳಲ್ಲಿ ಒಳಗೊಂಡಿರುವುದಿಲ್ಲ. ಸದರಿ ಮೊತ್ತವಾದ ರೂ.359.87/-ಕೋಟಿ ಒಂದು ವರ್ಷಕ್ಕೆ ಬೇಕಾದ ಹೆಚ್ಚುವರಿ ಮೊತ್ತವಾಗುತ್ತದೆ. ಈ ಅನುಕೂಲ ಪಡೆಯುವ ಸಿಬ್ಬಂದಿ ಪೂರ್ಣ ಸೇವಾವಧಿಯಲ್ಲಿ ಪಡೆಯುವ ಮೊತ್ತದ ಒಟ್ಟು ಮೊತ್ತದ ಲೆಕ್ಕಾಚಾರ ಇಲಾಖೆಗಳಲ್ಲಿ ಇನ್ನು ಆಗಿರುವುದಿಲ್ಲ ಹಾಗೆಯೇ ನಿವೃತ್ತಿ ಸೌಲಭ್ಯಗಳ ಒಟ್ಟಾರೆ ಆರ್ಥಿಕ ಹೊರೆ ರೂ.1637.61/-ಕೋಟಿಗಳಾಗಿದ್ದು ಇದರ ವರ್ಷವಾರು ಆರ್ಥಿಕ ಹೊರೆ ಸಹ ಲೆಕ್ಕಹಾಕಿರುವುದಿಲ್ಲ . ಈ ಎರಡೂ ಮೊತ್ತಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಅನುದಾನರಹಿತ ಸೇವಾವಧಿಯ ಸಂಬಂಧ ನೀಡಬೇಕಾದ ವೇತನ ಬಾಕಿ ಮೊತ್ತ ರೂ.3083.54 ಕೋಟಿಗಳೆಂದು ಅಂದಾಜಿಸಲಾಗಿದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ವಾಸ್ತವ ಅಂಕಿ ಅಂಶಗಳನ್ನು ಪ್ರತಿ ಶಿಕ್ಷಣ ಸಂಸ್ಥೆವಾರು ಮತ್ತು ಸಿಬ್ಬಂದಿವಾರು ಕ್ರೋಢೀಕರಿಸುವ ಕ್ರಮದ ಹಂತದಲ್ಲಿದ್ದು, ಪ್ರಸ್ತುತದಲ್ಲಿ ನಿರ್ದಿಷ್ಟ ನಿಲುವನ್ನು ತಳೆದಿರುವುದಿಲ್ಲ.

ಸಂ: ಇಪಿ ೩೭೯ ಎಸ್‌ಇಎಸ್ ೨೦೨೦

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	73
ಮಾನ್ಯ ಸದಸ್ಯರ ಹೆಸರು	:	ಶ್ರೀ ಉಮಾನಾಥ್ ಎ. ಕೋಟ್ಯಾನ್ (ಮೂಡಬಿದ್ರೆ)
ವಿಷಯ	:	ಪ್ರವಾಸೋದ್ಯಮ ಅಭಿವೃದ್ಧಿ
ಉತ್ತರಿಸುವ ದಿನಾಂಕ	:	08.12.2020
ಉತ್ತರಿಸುವವರು	:	ಮುಖ್ಯ ಮಂತ್ರಿ

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರವು ಅನುಷ್ಠಾನಗೊಳಿಸಲಿರುವ ಯೋಜನೆಗಳ ರೂಪುರೇಷೆಗಳು ಯಾವುವು; ಗಣನೀಯ ಪ್ರಮಾಣದಲ್ಲಿ ಕರಾವಳಿ ಪ್ರದೇಶವು ಇರುವುದರಿಂದ ಗರಿಷ್ಠ ಪ್ರಮಾಣದಲ್ಲಿ ಕರಾವಳಿ ಪ್ರದೇಶ ಪ್ರವಾಸೋದ್ಯಮ ವಲಯವನ್ನು ಅಭಿವೃದ್ಧಿಪಡಿಸುವ ದಿಶೆಯಲ್ಲಿ ಸರ್ಕಾರದ ಮುಂದಿರುವ ಕ್ರಿಯಾಯೋಜನೆಗಳು ಯಾವುವು;	ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿಗಾಗಿ ಇಲಾಖೆಯಿಂದ ಕೋಸ್ಟಲ್ ಮಾಸ್ಟರ್ ಪ್ಲಾನ್ ಅನ್ನು ಸಮಾಲೋಚಕ ಸಂಸ್ಥೆಯಾದ ಮೆ: ಐ.ಪಿ.ಇ. ಗ್ಲೋಬಲ್ ಲಿಮಿಟೆಡ್, ನವದೆಹಲಿ ಸಂಸ್ಥೆಯಿಂದ ಸಿದ್ಧಪಡಿಸಲಾಗಿದೆ.
ಆ)	ಕರಾವಳಿ ಪ್ರದೇಶವನ್ನು ಹೊಂದಿರುವ ಇತರೆ ರಾಜ್ಯಗಳು ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮ ಕ್ಷೇತ್ರವನ್ನು ಬೆಳೆಸಲು ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಿ ಅಂತಹವುಗಳನ್ನು ರಾಜ್ಯದಲ್ಲಿ ಜಾರಿಗೆ ತರುವ ಕುರಿತು ಸರ್ಕಾರದ ಮುಂದಿರುವ ಪ್ರಸ್ತಾವನೆಗಳೇನು;	ರಾಜ್ಯದ 320 ಕಿ.ಮೀ ಉದ್ದದ ಕಡಲ ತೀರಗಳಲ್ಲಿ ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಗಾಗಿ ಇಲಾಖೆಯಿಂದ ಕೋಸ್ಟಲ್ ಮಾಸ್ಟರ್ ಪ್ಲಾನ್ ಅನ್ನು ಸಮಾಲೋಚಕ ಸಂಸ್ಥೆಯಾದ ಮೆ: ಐ.ಪಿ.ಇ ಗ್ಲೋಬಲ್ ಲಿಮಿಟೆಡ್, ನವದೆಹಲಿ ಸಂಸ್ಥೆಯಿಂದ ಸಿದ್ಧಪಡಿಸಲಾಗಿದೆ. ಕರಾವಳಿ ತೀರದ ಪ್ರವಾಸಿ ತಾಣಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದು.
ಇ)	ಪ್ರವಾಸೋದ್ಯಮದ ಜೊತೆಗೆ ಉದ್ಯೋಗ ಸೃಷ್ಟಿಯನ್ನೂ ವೃದ್ಧಿಸುವ ಕರಾವಳಿ ಪ್ರವಾಸೋದ್ಯಮಕ್ಕೆ ನೂತನ ಆಯಾಮವನ್ನು ನೀಡುವ ಮೂಲಕ ಮಾದರಿ ಪ್ರವಾಸೋದ್ಯಮ ರಾಜ್ಯವನ್ನಾಗಿ ಮಾಡಲು ಸರ್ಕಾರದ ಕ್ರಮಗಳೇನು;	ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ಜೊತೆಗೆ ಉದ್ಯೋಗವನ್ನು ಸೃಷ್ಟಿಸುವ ಸಂಬಂಧ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. 2020-25ರ ನೂತನ ಪ್ರವಾಸೋದ್ಯಮ ನೀತಿಯಲ್ಲಿ ಕರಾವಳಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರವಾಸೋದ್ಯಮದಲ್ಲಿ ಆಸಕ್ತಿ ಹೊಂದಿರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಪ್ರವಾಸೋದ್ಯಮ ಇಲಾಖೆಯಿಂದ ಸಹಾಯಧನ ಹಾಗೂ ಇತರೆ ಉತ್ತೇಜನ ನೀಡಲು ಅವಕಾಶ ಕಲ್ಪಿಸಲಾಗಿದೆ. 2. ಪ್ರವಾಸೋದ್ಯಮ ಅಭಿವೃದ್ಧಿ, ಬಂಡವಾಳ ಹೂಡಿಕೆಗಳು ಮತ್ತು ನಿರುದ್ಯೋಗಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿಯ ಮೂಲಕ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಗೆ ಒತ್ತು ನೀಡಲು ಕ್ರಮವಹಿಸಲಾಗುವುದು. 3. 2020-25ರ ನೂತನ ಪ್ರವಾಸೋದ್ಯಮ ನೀತಿಯಲ್ಲಿ ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಕೇಂದ್ರೀಕೃತ ಪ್ರವಾಸಿತಾಣಗಳೆಂದು ಗುರುತಿಸಲಾಗಿದೆ.

..2/-

ಈ)	ಮೂಡಬಿದರೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸಸಿಹಿತ್ಲು ಕರಾವಳಿ ತೀರದಲ್ಲಿ ಕೈಗೊಂಡ ಅಭಿವೃದ್ಧಿ ಕ್ರಮಗಳು ಹಾಗೂ ಸಕಾಲಿಕವಾಗಿ ಅವುಗಳ ಅನುಷ್ಠಾನದ ಕುರಿತ ವಿವರಗಳೇನು?	ದಕ್ಷಿಣ ಕನ್ನಡ ಜಿಲ್ಲೆ ಕಡಲ ತೀರದಲ್ಲಿ ಸರ್ಫಿಂಗ್ ಸ್ಕೂಲ್, ಕ್ಲಬ್ ಹೌಸ್, ಶೌಚಾಲಯ, ಪಾರ್ಕಿಂಗ್ ಮುಂತಾದ ಪ್ರವಾಸಿ ಸೌಲಭ್ಯಗಳನ್ನು ರೂ.**10.00** ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಸರ್ಕಾರದ ಅನುಮೋದನೆ ಪಡೆಯಲಾಗಿದೆ. ಸದರಿ ಕಾಮಗಾರಿಯ ಸಂಬಂಧ ಲೋಕೋಪಯೋಗಿ ಇಲಾಖೆ, ಮಂಗಳೂರುರವರು ರೂ.10.00 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ದಿನಾಂಕ: 14-02-2020ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಆಡಳಿತಾತ್ಮಕ ಅನುಮೋದನೆಯಲ್ಲಿ ಸಿ.ಆರ್.ಜೆಡ್. ಅನುಮತಿ ಪಡೆದು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ ಹಾಗೂ ರೂ.5.00 ಕೋಟಿಗಳನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗಕ್ಕೆ ಬಿಡುಗಡೆ ಮಾಡಲಾಗಿದೆ.

ಸಂಖ್ಯೆ: ಟಿಓಆರ್ 241 ಟಿಡಿವಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 96

2) ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್ ಎನ್

3) ಉತ್ತರಿಸಬೇಕಾದ ದಿನಾಂಕ : 08.12.2020

4) ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ದೇವನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಕುಸಿತ ಕಂಡುಬಂದಿರುತ್ತದೆ. ಅಂತರ್ಜಲ ನಿರ್ದೇಶನಾಲಯದಿಂದ ಪ್ರತಿ ಮಾಹೆಯಾನ್ನ ದಾಖಲಿಸಿದ ಬಾವಿ / ಕೊಳವೆಬಾವಿಗಳ ಅಂತರ್ಜಲ ಸ್ಥಿರ ಜಲಮಟ್ಟದ ಮಾಪನದಂತೆ 2015 ರಿಂದ 2019ರ ವರೆಗಿನ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ವಾರ್ಷಿಕ ಸರಾಸರಿ ಅಂತರ್ಜಲ ಸ್ಥಿರಮಟ್ಟದ ವ್ಯತ್ಯಾಸದಂತೆ ಕುಸಿತ ಕಂಡು ಬಂದಿರುತ್ತದೆ. ದೇವನಹಳ್ಳಿ ತಾಲ್ಲೂಕಿನ ಸರಾಸರಿ ಅಂತರ್ಜಲ ಸ್ಥಿರಮಟ್ಟದ ವಿವರ ಈ ಕೆಳಕಂಡಂತಿದೆ.

ತಾಲ್ಲೂಕು	2015	2016	2017	2018	2019	ಅಂತರ್ಜಲ ಸ್ಥಿರ ಜಲಮಟ್ಟದ ವ್ಯತ್ಯಾಸದಂತೆ 2015-2019	
						ಏರಿಕೆ	ಇಳಿಕೆ
ದೇವನಹಳ್ಳಿ	32.52	30.57	32.02	32.54	35.30		2.78
ದೊಡ್ಡ ಬಳ್ಳಾಪುರ	34.47	27.99	27.76	24.94	35.58		1.10

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಆ	ಹಾಗಿದ್ದಲ್ಲಿ, ಕುಸಿದಿರುವ ಅಂತರ್ಜಲ ಅಭಿವೃದ್ಧಿಗಾಗಿ ಮಂಜೂರಾಗಿದ್ದ ಪಿಕಪ್ ಡ್ಯಾಂ/ ಚೆಕ್ ಡ್ಯಾಂ ನಿರ್ಮಾಣದ ಅಭಿವೃದ್ಧಿಗಾಗಿ ಬಿಡುಗಡೆಯಾಗಿದ್ದ ಅನುದಾನವನ್ನು ತಡೆಹಿಡಿದಿರುವುದರಿಂದ ಅಭಿವೃದ್ಧಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; (ಮಾಹಿತಿ ನೀಡುವುದು)	ರಾಜ್ಯದಲ್ಲಿ ಕುಸಿಯುತ್ತಿರುವ ಅಂತರ್ಜಲ ಅಭಿವೃದ್ಧಿ ಕಾಮಗಾರಿಗಳನ್ನು ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನಾಧರಿಸಿ ಹಾಗೂ ಇಲಾಖೆಯಲ್ಲಿ ಹಾಲಿ ಇರುವ ಕಾರ್ಯಭಾರವನ್ನು ಗಮನದಲ್ಲಿರಿಸಿಕೊಂಡು ಯೋಜನೆಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.
ಇ	ಬಂದಿದ್ದಲ್ಲಿ, ತಡೆಹಿಡಿದಿರುವ ಈ ಅನುದಾನ ಬಿಡುಗಡೆ ಮಾಡಲು ಸರ್ಕಾರ	

	ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿಯನ್ನು ನೀಡುವುದು)	

ಸಂಖ್ಯೆ: ಸನೀಇ 222 ವಿಸವಿ 2020.

(ಜೆ.ಸಿ ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನಾ ಹಾಗೂ ಸಣ್ಣ ನೀರಾವರಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 105
ಸದಸ್ಯರ ಹೆಸರು	: ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವ ದಿನಾಂಕ	: 08.12.2020
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಇಂಡಿ ಶಾಖಾ ಕಾಲುವೆಯ (ಐ.ಬಿ.ಸಿ) ಕಾಮಗಾರಿಯನ್ನು ಸುಮಾರು 20 ರಿಂದ 25 ವರ್ಷಗಳ ಹಿಂದೆ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನಾರಾಯಣಪುರ ಎಡದಂಡೆ ಕಾಲುವೆಯ ಜಾಲದಡಿಯಲ್ಲಿ ಬರುವ ಇಂಡಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 64.00 ಅನ್ನು ಕೃ.ಮೇ.ಯೋ. ಹಂತ-1, ಫೇಸ್-1 ರಡಿ ಅನುಷ್ಠಾನಗೊಳಿಸಿ, ಸುಮಾರು 25 ವರ್ಷಗಳಿಂದ ನೀರು ಹರಿಸಲಾಗುತ್ತಿದೆ.
ಆ)	ಸದರಿ ಕಾಲುವೆಯಲ್ಲಿ Extension Renovation and Modernization of Indi Branch Canal from CH ಕಿ.ಮೀ. 0.00 ರಿಂದ 64.00 ರವರೆಗೆ ಕಾಮಗಾರಿ ಕೈಗೊಂಡಿದ್ದು, ಕಿ.ಮೀ. 64 ರಿಂದ 172 ರವರೆಗೆ ERM ಕಾಮಗಾರಿ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಈಗಾಗಲೇ ಕೇಂದ್ರ ಸರ್ಕಾರದ ಎ.ಐ.ಬಿ.ಪಿ ಸಹಾಯಧನದಲ್ಲಿ ಡಿಸೆಂಬರ್ 2013 ರಲ್ಲಿ ಅನುಮೋದನೆಗೊಂಡಿರುವ ರೂ.3752.18 ಕೋಟಿ ಅಂದಾಜು ಮೊತ್ತದ ನಾರಾಯಣಪುರ ಎಡದಂಡೆ ಕಾಲುವೆ ಜಾಲದ ಆಧುನೀಕರಣ (NLBC-ERM) ಯೋಜನೆಯಡಿ ಇಂಡಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 64.00 ಮತ್ತು ವಿತರಣಾ ಕಾಲುವೆ 1 ರಿಂದ 13 ರವರೆಗೆ ಆಧುನೀಕರಣ ಕಾಮಗಾರಿ ಪೂರ್ಣಗೊಳಿಸಿ, ಕಾಲುವೆ ಜಾಲಕ್ಕೆ ನೀರು ಹರಿಬಿಡಲಾಗಿರುತ್ತದೆ. ಅದಲ್ಲದೇ, AIBP-PMKSY ಯೋಜನೆಯಡಿ ಕೈಗೆತ್ತಿಕೊಂಡಿರುವ SCADA Phase-II ರಡಿ ಇಂಡಿ ಶಾಖಾ ಕಾಲುವೆ ಕಿ.ಮೀ 0.00 ರಿಂದ 172.00 ಕಿ.ಮೀ ರವರೆಗೆ ಕಾಲುವೆ ಜಾಲಗಳ (ವಿತರಣಾ ಕಾಲುವೆ ಮತ್ತು ಲ್ಯಾಟರಲ್‌ಗಳಿಗಾಗಿ) ಸ್ವಯಂಚಾಲಿತ SCADA ಗೇಟ್‌ಗಳನ್ನು ಅಳವಡಿಸುವ ಕಾಮಗಾರಿ ಈಗಾಗಲೇ ಗುತ್ತಿಗೆ ವಹಿಸಿ ಪ್ರಾರಂಭಿಸಲಾಗಿರುತ್ತದೆ. ಕಾಮಗಾರಿ ಪ್ರಗತಿಯಲ್ಲಿದೆ. ಮುಂದುವರೆದು, ಇಂಡಿ ಶಾಖಾ ಕಾಲುವೆ ಕಿ.ಮೀ 64.00 ರಿಂದ 172.00 ಕಿ.ಮೀ ರವರೆಗಿನ ಕಾಮಗಾರಿಯು ಕೃ.ಮೇ.ಯೋ. ಹಂತ-1, ಫೇಸ್-2 ರಡಿ ಬರುವುದರಿಂದ ಕೇಂದ್ರ ಸಹಾಯಧನದ ಎ.ಐ.ಬಿ.ಪಿ-ಪಿಎಂಕೆಎಸ್‌ವೈ ಅಡಿ 2013 ರಲ್ಲಿ ಅನುಮೋದನೆಗೊಂಡ NLBC-ERM ಯೋಜನಾ ವರದಿಯಲ್ಲಿ ಸೇರ್ಪಡೆಗೊಂಡಿರುವುದಿಲ್ಲ.
ಇ)	ಈ ಕಾಲುವೆಯ ಜಾಲದಲ್ಲಿ ವಿತರಣಾ ಕಾಲುವೆ ಮತ್ತು ಸೀಳು ಕಾಲುವೆಗಳು ಪದೇ ಪದೇ ದುರಸ್ತಿಗೆ/ಒಡೆದು ಹೋಗುತ್ತಿರುವುದರಿಂದ ನಾಲೆಯ ಕೊನೆಯ ಭಾಗದವರೆಗೆ ನೀರು ತಲುಪದೇ ಜಾನುವಾರುಗಳು ಕುಡಿಯುವ ನೀರಿಗಾಗಿ ತೀವ್ರ ಕಷ್ಟಕರ ಪರಿಸ್ಥಿತಿಯನ್ನು ಎದುರಿಸುತ್ತಿರುವುದನ್ನು ಸರ್ಕಾರ	ಇಂಡಿ ಶಾಖಾ ಕಾಲುವೆಯ ಕಿ.ಮೀ. 64.00 ರಿಂದ 172.00 ಕಿ.ಮೀ ರವರೆಗೆ ಕಾಲುವೆ ಜಾಲದಲ್ಲಿ ಲೈನಿಂಗ್ ಹಾಳಾಗಿದ್ದು, ಕಾಲುವೆಯ ನಿಗದಿತ ಸೆಕ್ಷನ್ ಇರದೇ ಇದ್ದು, ಕಟ್ಟಡಗಳ ಮೂಲಕ ನೀರಿನ ಸೋರಿಕೆ ಹಾಗೂ ಹಲವು ಕಡೆಯಲ್ಲಿ ಅನಧಿಕೃತವಾಗಿ ಅಳವಡಿಸಿದ ಪಂಪ್‌ಸೆಟ್ ಗಳ ಮೂಲಕ ನೀರನ್ನು ಎತ್ತುತ್ತಿರುವುದರಿಂದ ಕಾಲುವೆಯ ಕೊನೆಯ ಅಂಚಿನ ಭಾಗದ ರೈತರಿಗೆ ಹಾಗೂ ಜನ-ಜಾನುವಾರುಗಳಿಗೆ ನೀರು ಪೂರೈಸುವಲ್ಲಿ ವ್ಯತ್ಯಯವಾಗುತ್ತಿದೆ.

	ಗಮನಿಸಿದೆಯೇ;	ಇಂಡಿ ಶಾಖಾ ಕಾಲುವೆಯಡಿಯಲ್ಲಿ ಪ್ರತೀ ವರ್ಷ ಕ್ಲೋಜರ್ ಅವಧಿ ಹಾಗೂ ವಿಶೇಷ ದುರಸ್ಥಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದರಿಂದ ಸಮರ್ಪಕ ನೀರು ನಿರ್ವಹಣೆ ಮತ್ತು ಕಾಲುವೆಗೆ ಅನಧಿಕೃತವಾಗಿ ಅಳವಡಿಸಿದ ಪಂಪ್‌ಸೆಟ್‌ಗಳನ್ನು ತೆರವುಗೊಳಿಸುವ ಮೂಲಕ ಈ ಕಾಲುವೆಯ ಕೊನೆಯ ಭಾಗದವರೆಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಈ)	ಹಾಗಿದ್ದಲ್ಲಿ, ಕಿ.ಮೀ. 64 ರಿಂದ 172 ರವರೆಗೆ ERM ಕಾಮಗಾರಿ ಕೈಗೊಳ್ಳಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಇಂಡಿ ಶಾಖಾ ಕಾಲುವೆ ಕಿ.ಮೀ. 64.00 ರಿಂದ 172.00 ಕಿ.ಮೀ ರವರೆಗೆ ಹಾಗೂ ಅದರಡಿ ಬರುವ ವಿತರಣಾ ಕಾಲುವೆಗಳ ಜಾಲದಡಿ ಸಮರ್ಪಕ ನೀರು ನಿರ್ವಹಣೆ ಕಾಲುವೆ ಅಂಚಿನವರೆಗೆ ನೀರು ಹರಿಸಲು ಹಾಗೂ ಸದರಿ ಕಾಲುವೆಯ ಕೊನೆಯ ಭಾಗದವರೆಗೂ ನೀರು ಹರಿದು ಜನ-ಜಾನುವಾರುಗಳಿಗೆ ಕುಡಿಯುವ ನೀರನ್ನು ಒದಗಿಸುವ ಉದ್ದೇಶದಿಂದ ನೀರು ಬಳಕೆ ಸಾಮರ್ಥ್ಯ (Water Use efficiency) ಹೆಚ್ಚಿಸಲು ಇಂಡಿ ಶಾಖಾ ಕಾಲುವೆ ಕಿ.ಮೀ. 64.00 ರಿಂದ 172.00 ಕಿ.ಮೀ ರವರೆಗೆ ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆ ಜಾಲಗಳ ಸಮಗ್ರ ಆಧುನೀಕರಣಕ್ಕಾಗಿ ರೂ.1240.85 ಕೋಟಿ ಮೊತ್ತದ ಅಂದಾಜು ಪ್ರಸ್ತಾವನೆ ತಯಾರಿಸಿದ್ದು, ಈಗಾಗಲೇ ದಿನಾಂಕ:31.01.2020 ರಂದು ಜರುಗಿದ ನಿಗಮದ ತಾಂತ್ರಿಕ ಉಪ ಸಮಿತಿ 16ನೇ ಸಭೆಯಲ್ಲಿ ಚರ್ಚಿಸಿ, ಮಂಡಳಿ ಸಭೆಗೆ ಮಂಡಿಸಲು ಶಿಫಾರಸ್ಸು ಮಾಡಲಾಗಿರುತ್ತದೆ. ಅದರಂತೆ ಪ್ರಸ್ತಾವನೆಯನ್ನು ಮುಂಬರುವ ನಿಗಮದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಮಂಡಿಸಿ, ತದನಂತರ ಕ್ರಮ ಜರುಗಿಸಲಾಗುವುದು.
ಉ)	ಹೊಂದಿದ್ದಲ್ಲಿ ಯಾವಾಗ ERM ಕಾಮಗಾರಿ ಪ್ರಾರಂಭಿಸಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು;	
ಊ)	ಸದರಿ ಕಾಲುವೆಯ ಕೊನೆಯ ಭಾಗದವರೆಗೂ ನೀರು ಹರಿದು ಜನ ಜಾನುವಾರುಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುವುದೇ?	

ಸಂಖ್ಯೆ: ಜಸಂಇ 116 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 293
2. ಸದಸ್ಯರ ಹೆಸರು : ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
3. ಉತ್ತರಿಸಬೇಕಾದ ದಿನಾಂಕ : 08.12.2020
4. ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ	ಕರ್ನಾಟಕ ಹಾಗೂ ಗೋವಾ ರಾಜ್ಯಗಳ ನಡುವೆ ಕಳಸಾ ಬಂಡೂರಿ ಯೋಜನೆಯ ವಿವಾದವು ಎಂದಿನಿಂದ ಪ್ರಾರಂಭವಾಗಿದೆ; (ಮಾಹಿತಿ ನೀಡುವುದು)	ಕಳಸಾ-ಬಂಡೂರಾ ನಾಲಾ ಯೋಜನೆಯ ವಿವಾದವು 2002ರಿಂದ ಪ್ರಾರಂಭವಾಗಿದೆ. 7.56 ಟಿ.ಎಂ.ಸಿ. ನೀರಿನ ಪ್ರಮಾಣವನ್ನು ಮಹದಾಯಿ ಪಾತ್ರದಿಂದ, ಮಲಪ್ರಭಾ ಜಲಾಶಯಕ್ಕೆ ತಿರುವುಗೊಳಿಸಲು ದಿನಾಂಕ:30.04.2002ರ ಪತ್ರದಲ್ಲಿ ನೀಡಿದ್ದ ತಾತ್ವಿಕ ತಿರುವಳಿಯನ್ನು ಗೋವಾ ಸರ್ಕಾರವು ದಿನಾಂಕ 09.07.2002ರ ಪತ್ರದಲ್ಲಿ, ಆಕ್ಷೇಪಿಸಿ ನ್ಯಾಯಾಧಿಕರಣವನ್ನು ರಚಿಸುವಂತೆ ದೂರು ಸಲ್ಲಿಸಿತು. ಸದರಿ ಆಕ್ಷೇಪಣೆಯ ಮೇರೆಗೆ ಕೇಂದ್ರ ಜಲ ಸಂಪನ್ಮೂಲ ಇಲಾಖೆಯು ದಿನಾಂಕ:19.09.2002ರಲ್ಲಿ "ತಾತ್ವಿಕ ತೀರುವಳಿ" ಯನ್ನು ತಡೆಹಿಡಿಯಿತು. ಗೋವಾ ರಾಜ್ಯವು ಸರ್ವೋಚ್ಚ ನ್ಯಾಯಾಲಯದಲ್ಲಿ ದಿನಾಂಕ:15.09.2006 ರಂದು ದಾವೆಯನ್ನು (O.S.4/2006) ಹೂಡಿ, ಕರ್ನಾಟಕವು ಮಹದಾಯಿ ಕಣಿವೆಯಲ್ಲಿ ಯಾವುದೇ ತಿರುವು ಯೋಜನೆಗಳನ್ನು ಕೈಗೊಳ್ಳದಂತೆ ತಡೆಯಲು ಕೋರಿತ್ತು. ದಿನಾಂಕ:16.11.2010 ರಂದು ಭಾರತ ಸರ್ಕಾರದ ಜಲ ಸಂಪನ್ಮೂಲ ಮಂತ್ರಾಲಯವು, ಮಹದಾಯಿ ಜಲ ವಿವಾದ ನ್ಯಾಯಾಧಿಕರಣವನ್ನು ರಚಿಸಿ, ಅಧಿಸೂಚನೆ ಹೊರಡಿಸಿತು.
ಆ	ಸದರಿ ಯೋಜನೆಯ ವಿವಾದವು ಪ್ರಸ್ತುತ ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು)	ಮಹದಾಯಿ ಜಲ ವಿವಾದ ನ್ಯಾಯಧಿಕರಣವು ದಿನಾಂಕ 14.08.2018 ರಂದು ನೀಡಿರುವ ವರದಿ/ತೀರ್ಪಿನಲ್ಲಿ ರಾಜ್ಯಕ್ಕೆ 13.42 ಟಿಎಂಸಿ ನೀರಿನ ಹಂಚಿಕೆ ಮಾಡಿದ್ದು, ಇದರಲ್ಲಿ ಕಳಸಾ-ಬಂಡೂರಾ ನಾಲಾ ಯೋಜನೆಗೆ 3.9 ಟಿಎಂಸಿ ನೀರಿನ ಹಂಚಿಕೆಯಾಗಿದೆ. ಸದರಿ ವರದಿ/ತೀರ್ಪುನ್ನು ದಿನಾಂಕ:27.02.2020ರಂದು ಕೇಂದ್ರ ಸರ್ಕಾರವು ಗೆಜೆಟ್ ಪ್ರಕಟಣೆ ಮಾಡಿದೆ. ಕಳಸಾ-ಬಂಡೂರಾ ನಾಲಾ ಯೋಜನೆಗೆ ಸಕ್ಷಮ ಪ್ರಾಧಿಕಾರಗಳ ತಿರುವಳಿಗಳನ್ನು ಪಡೆದು ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು. ಮಹದಾಯಿ ನ್ಯಾಯಾಧಿಕರಣದ ದಿನಾಂಕ:14.08.2018ರ ವರದಿ/ತೀರ್ಪಿನ ಕುರಿತು ಕಣಿವೆ ರಾಜ್ಯಗಳಾದ ಗೋವಾ, ಮಹಾರಾಷ್ಟ್ರ, ಕರ್ನಾಟಕ ಮತ್ತು ಕೇಂದ್ರ ಸರ್ಕಾರವು ವಿವರಣೆಯನ್ನು ಕೋರಿ ಅಂತರ ರಾಜ್ಯ ಕಾಯ್ದೆ 1956 ರ ಸೆಕ್ಷನ್

		5(3)ರ ಅಡಿಯಲ್ಲಿ ಅರ್ಜಿಯನ್ನು ನ್ಯಾಯಾಧಿಕರಣದ ಮುಂದೆ ಸ್ಪಷ್ಟೀಕರಣ, ವಿವರಣೆ ಹಾಗೂ ಮಾರ್ಗದರ್ಶನ ಕೋರಿ ಅರ್ಜಿಗಳನ್ನು ದಾಖಲಿಸಿರುತ್ತವೆ. ಸರ್ವೋಚ್ಛ ನ್ಯಾಯಾಲಯದ ಮುಂದೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳು ಮಹದಾಯಿ ಜಲ ವಿವಾದ ನ್ಯಾಯಾಧಿಕರಣ ದಿನಾಂಕ:14.08.2018ರ ವರದಿ/ತೀರ್ಪಿನ ಅಂಶಗಳ ಬಗ್ಗೆ, ವಿಶೇಷ ಮೇಲ್ಮನವಿ ಅರ್ಜಿಗಳನ್ನು ಸಲ್ಲಿಸಿರುತ್ತವೆ. ನ್ಯಾಯಾಧಿಕರಣದ ಮುಂದೆ ಸಲ್ಲಿಸಲಾಗಿರುವ ರೆಫರೆನ್ಸ್ ಪಿಟಿಷನ್ ಗಳು ಮತ್ತು ಸರ್ವೋಚ್ಛ ನ್ಯಾಯಾಲಯದ ಮುಂದೆ ಸಲ್ಲಿಸಿರುವ ವಿಶೇಷ ಅನುಮತಿ ಅರ್ಜಿಗಳು ಇತ್ಯರ್ಥವಾಗಬೇಕಾಗಿದೆ.
ಇ	ವಿವಾದದ ಸಂಬಂಧ ನ್ಯಾಯಾಲಯದಲ್ಲಿನ ಮೊಕದ್ದಮೆ ಇತ್ಯರ್ಥಕ್ಕಾಗಿ ಇಲ್ಲಿಯವರೆಗೆ ರಾಜ್ಯ ಸರ್ಕಾರಕ್ಕೆ ಆಗಿರುವ ವೆಚ್ಚ ಮೊತ್ತವೆಷ್ಟು? (ವಿವರ ನೀಡುವುದು)	ಮಹದಾಯಿ ನದಿ ಜಲ ವಿವಾದದ ಸಂಬಂಧದಲ್ಲಿ ಇದುವರೆವಿಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯ ಹಾಗೂ ನ್ಯಾಯಾಧಿಕರಣಕ್ಕೆ ಕಾನೂನು ತಂಡದ ವೆಚ್ಚವು ರೂ. 24,50,74,219/-(ಇಪ್ಪತ್ತನಾಲ್ಕು ಕೋಟಿಗಳು ಐವತ್ತು ಲಕ್ಷ ಎಪ್ಪತ್ತನಾಲ್ಕು ಸಾವಿರದ ಇನ್ನೂರಾ ಹತ್ತೊಂಬತ್ತು) ಗಳಾಗಿರುತ್ತದೆ.

ಸಂಖ್ಯೆ: ಜಸಂಇ 27 ಕೃವಿಇ 2020

(ರಮೇಶ್ ಲ. ಜಾರಕಿಹೊಳಿ)

ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 308

ಸದಸ್ಯರ ಹೆಸರು : ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)

ಉತ್ತರಿಸಬೇಕಾದ ದಿನಾಂಕ : 08.12.2020

ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	2020-21 ನೇ ಸಾಲಿನ ಆಯವ್ಯಯದಲ್ಲಿ ಜಲಸಂಪನ್ಮೂಲ ಇಲಾಖೆಗೆ ನಿಗದಿಪಡಿಸಲಾದ ಅನುದಾನ ಎಷ್ಟು; ಈ ಬಾಬ್ತು ಕಡಿತಗೊಳಿಸಲಾದ ಅನುದಾನವೆಷ್ಟು; (ವಿವರಗಳನ್ನು ನೀಡುವುದು)	2020-21 ನೇ ಸಾಲಿನ ಆಯವ್ಯಯದಲ್ಲಿ ಜಲ ಸಂಪನ್ಮೂಲ ಇಲಾಖೆಗೆ (ಭಾರಿ ಮತ್ತು ಮಧ್ಯಮ ನೀರಾವರಿ) ರೂ. 18677.61 ಕೋಟಿ ಅನುದಾನ ಹಂಚಿಕೆಯಾಗಿದ್ದು, ರೂ. 3638.50 ಕೋಟಿ ಅನುದಾನ ಕಡಿತಗೊಳಿಸಿ, ರೂ.15039.11 ಕೋಟಿ ಪರಿಷ್ಕೃತ ಅನುದಾನವನ್ನು (R.E) ಹಂಚಿಕೆ ಮಾಡಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ.	2020-21 ನೇ ಸಾಲಿನ ಆರ್ಥಿಕ ವರ್ಷದಲ್ಲಿ 2 ನೇ ತ್ರೈಮಾಸಿಕದವರೆಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು; ಖರ್ಚು ಮಾಡಲಾದ ಅನುದಾನವೆಷ್ಟು? (ವಿವರಗಳನ್ನು ಒದಗಿಸುವುದು)	2020-21 ನೇ ಸಾಲಿನ ಆರ್ಥಿಕ ವರ್ಷದಲ್ಲಿ 2 ನೇ ತ್ರೈಮಾಸಿಕದವರೆಗೆ ಜಲ ಸಂಪನ್ಮೂಲ ಇಲಾಖೆಗೆ (ಭಾರಿ ಮತ್ತು ಮಧ್ಯಮ ನೀರಾವರಿ) ರೂ.5538.61 ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.6142.95 ಕೋಟಿ (ಪ್ರಾರಂಭಿಕ ಶಿಲ್ಕು ಒಳಗೊಂಡಿರುತ್ತದೆ) ವೆಚ್ಚ ಮಾಡಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
- ✓ 9 ಪಂಪ್‌ಹೌಸ್‌ಗಳ ಪೈಕಿ ಪಂಪ್‌ಹೌಸ್ ಸಂ. 1,2,6,7,8&9 ಕಾಮಗಾರಿಗಳು ಪೂರ್ಣಗೊಂಡಿದ್ದು, ಪಂಪ್‌ಹೌಸ್ ಸಂ. 3,4,5 ರ ಕಾಮಗಾರಿಗಳು ಪ್ರಗತಿಯಲ್ಲಿವೆ.

- ✓ 4 ವಿತರಣಾ ತೊಟ್ಟಿಗಳ ಪೈಕಿ ವಿತರಣಾ ತೊಟ್ಟಿ ಸಂ. 1, 2 & 4ರ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ ವಿತರಣಾ ತೊಟ್ಟಿ 3ರ ಕಾಮಗಾರಿಯು ಮುಕ್ತಾಯ ಹಂತದಲ್ಲಿದೆ.

- ✓ ಒಟ್ಟು 126.31 ಕಿ.ಮೀ ಉದ್ದದ ಏರು ಕೊಳವೆಯ ಪೈಕಿ, ಇದುವರೆಗೆ 98.025 ಕಿ.ಮೀ ಏರು ಕೊಳವೆ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.

- ✓ 400/220ಕೆ.ವಿ ವಿದ್ಯುತ್ ಸ್ಥಾವರ ಮತ್ತು ಸಬ್ ಸ್ಟೇಷನ್ ಕಾಮಗಾರಿಗಳು ಕ್ರಮವಾಗಿ ಶೇ.90 % ಮತ್ತು ಶೇ.75% ರಷ್ಟು ಪೂರ್ಣಗೊಂಡಿವೆ.

- ✓ ವಿದ್ಯುತ್ ವಿತರಣಾ ಕಾಮಗಾರಿಯು ಪ್ರಗತಿಯಲ್ಲಿದೆ.

- ✓ ಒಟ್ಟಾರೆ ಮೊದಲನೇ ಹಂತದ ಏತ ಕಾಮಗಾರಿಗಳು ಮತ್ತು ವಿದ್ಯುತ್ ಕಾಮಗಾರಿಗಳನ್ನು ಪೂರ್ಣಗೊಳಿಸಿ 2021ರ ಮುಂಗಾರಿನಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲು ಯೋಜಿಸಲಾಗಿದೆ.

ಎರಡನೇ ಹಂತ: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಎರಡನೇ ಹಂತದಲ್ಲಿ ಸಕಲೇಶಪುರ ತಾಲ್ಲೂಕಿನ ಹರವನಹಳ್ಳಿ ವಿತರಣಾ ತೊಟ್ಟಿಯಿಂದ 259.00 ಕಿ.ಮೀ ಉದ್ದದ ಗುರುತ್ವ ಕಾಲುವೆಯನ್ನು (ಮಾರ್ಗದ ಮಧ್ಯದಲ್ಲಿ ಸುಮಾರು 10.47 ಕಿ.ಮೀ ಉದ್ದದ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಿಸುವುದು.

- ✓ ಎರಡನೇ ಹಂತದ ಗುರುತ್ವ ಕಾಲುವೆಯ ಪೂರ್ಣ ಉದ್ದಕ್ಕೆ ಕಾಮಗಾರಿಗಳನ್ನು ಗುತ್ತಿಗೆ ವಹಿಸಲಾಗಿದ್ದು, ಕಿ.ಮೀ 0.00 ರಿಂದ ಕಿ.ಮೀ 240.00 ವರೆಗಿನ ಕಾಮಗಾರಿಗಳು ಪ್ರಗತಿಯಲ್ಲಿದೆ (ಕಿ.ಮೀ 199.620 ನಿಂದ 210.090 ಕಿ.ಮೀ ವರೆಗಿನ ಬೃಹತ್ ಮೇಲ್ಗಾಲುವೆ ಒಳಗೊಂಡಂತೆ).

- ✓ ಕಿ.ಮೀ 240.00 ರಿಂದ ಕಿ.ಮೀ 260.00 ರ ವರೆಗಿನ ಕಾಮಗಾರಿಗಳಿಗೆ ಗುತ್ತಿಗೆ ವಹಿಸಲಾಗಿದ್ದು, ಪ್ರಾರಂಭಿಕ ಹಂತದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

- ✓ 0.00ಕಿ.ಮೀ ನಿಂದ 33.00 ಕಿ.ಮೀ ವರೆಗಿನ ಗುರುತ್ವಾ ಕಾಲುವೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಮುಂಗಾರು 2021 ರಲ್ಲಿ ವೇದಾವತಿ ವ್ಯಾಲಿಗೆ ನೀರು ಹರಿಸಲು ಯೋಜಿಸಲಾಗಿದೆ.

...2

ಫೀಡರ್ ಕಾಲುವೆ ಕಾಮಗಾರಿಗಳು

✓ ಎತ್ತಿನಹೊಳೆ ಗುರುತ್ವ ಕಾಲುವೆಯ ಸರಪಳಿ 244.90 ಕಿ.ಮೀ ನಿಂದ ಹೊರಡುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ನೆಲಮಂಗಲ ತಾಲ್ಲೂಕಿನ 2 ಕೆರೆಗಳನ್ನು ತುಂಬಿಸುವ ರಾಮನಗರ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ ತುಮಕೂರು, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಕುಡಿಯುವ ನೀರಿಗಾಗಿ 1.163 ಟಿ.ಎಂ.ಸಿ ಮತ್ತು ಈ ಭಾಗದ 79 ಸಣ್ಣ ನೀರಾವರಿ ಕೆರೆಗಳಿಗೆ 1.476 ಟಿ.ಎಂ.ಸಿ. ನೀರನ್ನು ಒದಗಿಸುವ ಮಧುಗಿರಿ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ 0.506 ಟಿ.ಎಂ.ಸಿ ಮತ್ತು ಗೌರಿಬಿದನೂರು, ಕೊರಟಗೆರೆ, ಮಧುಗಿರಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ 107 ಸಣ್ಣ ನೀರಾವರಿ ಕೆರೆಗಳಿಗೆ 1.320 ಟಿ.ಎಂ.ಸಿ. ನೀರನ್ನು ಒದಗಿಸುವ ಗೌರಿಬಿದನೂರು ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

- **ಪ್ರಸ್ತುತ ಪ್ರಗತಿಯಲ್ಲಿರುವ ಎತ್ತಿನಹೊಳೆ ಯೋಜನೆಯಡಿಯಲ್ಲಿನ ಕಾಮಗಾರಿಗಳನ್ನು 2022-23 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.**

- **ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿ, ಭೈರಗೊಂಡ್ಲು ಜಲಾಶಯದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕುಗಳಿಗೆ ನೀರೊದಗಿಸುವ ಕುಂದಾಣ ಲಿಫ್ಟ್ ಕಾಮಗಾರಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಫೀಡರ್ ಕಾಲುವೆ ಕಾಮಗಾರಿಗಳನ್ನು ಭೈರಗೊಂಡ್ಲು ಜಲಾಶಯ ನಿರ್ಮಾಣದ ಭೂಸ್ವಾಧೀನ ಸಮಸ್ಯೆ ಇತ್ಯರ್ಥಗೊಂಡ ನಂತರ ಕೈಗೊಳ್ಳಲು ಯೋಜಿಸಲಾಗಿದೆ.**

- **ಒಟ್ಟಾರೆ ಎತ್ತಿನಹೊಳೆ ಯೋಜನೆಗೆ ನವೆಂಬರ್ 2020ರ ಅಂತ್ಯಕ್ಕೆ ರೂ.7719.24 ಕೋಟಿ ಸಂಚಿತ ವೆಚ್ಚ ಮಾಡಲಾಗಿದೆ.**

******

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	380
ಸದಸ್ಯರ ಹೆಸರು	:	ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)
ಉತ್ತರಿಸಬೇಕಾದ ದಿನಾಂಕ	:	08-12-2020
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬೆಂಗಳೂರು ಮಹಾನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ ಟೆಂಡರ್ ಶ್ಯೂರ್ ಅಡಿ ಎಷ್ಟು ಅಂತರದ, ಯಾವ ಯಾವ ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.	ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ, ಟೆಂಡರ್ ಶ್ಯೂರ್ ಅಡಿ ಸುಮಾರು 29.54ಕಿ.ಮೀ ಉದ್ದ (ಅಂತರ)ವನ್ನು ಒಳಗೊಂಡಂತೆ 36 ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ವಿವರಗಳನ್ನು **ಅನುಬಂಧ-ಅ** ರಲ್ಲಿ ನೀಡಿದೆ
ಆ	ಸದರಿ ರಸ್ತೆಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗುತ್ತಿರುವ ಹಣವೆಷ್ಟು;	ಸದರಿ 36 ರಸ್ತೆಗಳ ಅಭಿವೃದ್ಧಿಗಾಗಿ ಒಟ್ಟು ರೂ.481.65 ಕೋಟಿ ವೆಚ್ಚ ಮಾಡಲಾಗುತ್ತಿದೆ.
ಇ	ಎಷ್ಟು ಪ್ಯಾಕೇಜ್‌ಗಳಡಿ ಯೋಜನೆಗಳನ್ನು ನಿರ್ವಹಿಸಲಾಗುತ್ತಿದೆ;	ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಫೇಸ್-ಎ-7 ಪ್ಯಾಕೇಜ್‌ಗಳಲ್ಲಿ 20 ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಮತ್ತು ಫೇಸ್-ಬಿ- 6 ಪ್ಯಾಕೇಜ್‌ಗಳಲ್ಲಿ 16 ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
ಈ	ಈ ರಸ್ತೆಗಳ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕಾಗಿದೆ;	ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಎಲ್ಲಾ ರಸ್ತೆ ಕಾಮಗಾರಿಗಳನ್ನು ಏಪ್ರಿಲ್-2021 ರೊಳಗೆ ಪೂರ್ಣಗೊಳಿಸಲಾಗುವುದು.
ಉ	ಕಾಮಗಾರಿ ಪೂರ್ಣಗೊಳಿಸುವಲ್ಲಿನ ವಿಳಂಬಕ್ಕೆ ಕಾರಣಗಳೇನು? (ಮಾಹಿತಿ ನೀಡುವುದು)	ಕಾಮಗಾರಿ ಪೂರ್ಣಗೊಳಿಸುವಲ್ಲಿನ ವಿಳಂಬಕ್ಕೆ ಕಾರಣಗಳು; • ಕೋವಿಡ್-19 ರ ಲಾಕ್‌ಡೌನ್ ನಿಂದ ಸುಮಾರು 3 ರಿಂದ 6 ತಿಂಗಳವರೆಗೆ ಸಾಮಗ್ರಿಗಳ ಮತ್ತು ಕಾರ್ಮಿಕರ ಅಲಭ್ಯತೆಯಿಂದ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗಿರುತ್ತದೆ. • ಬೆಸ್ಕಾಂ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಸ್‌ಎನ್‌ಎಲ್ ಉಪಯುಕ್ತತೆಗಳ ಸ್ಥಳಾಂತರ. • ಯೋಜನಾ ಸಮಾಲೋಚಕರಿಂದ ಜಿಎಫ್‌ಸಿ (GFC) ಸರ್ವೆ ಮತ್ತು ವಿನ್ಯಾಸ ನೀಡುವಿಕೆಯಲ್ಲಿ ಕಾಲಾವಕಾಶ ತೆಗೆದುಕೊಂಡಿರುತ್ತದೆ. • ಕಾಮಗಾರಿಗಳನ್ನು ಪ್ರಾರಂಭಿಸಲು ಪೋಲೀಸ್ ಅನುಮತಿ ಪತ್ರ ನೀಡುವಿಕೆಯಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ ಎಲ್ಲಾ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಏಪ್ರಿಲ್ 2021 ರೊಳಗೆ ಪೂರ್ಣಗೊಳಿಸಲಾಗುವುದು.

ಸಂಖ್ಯೆ:ನಅಇ 322 ಸಿಎಸ್‌ಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮಾನ್ಯ ಮುಖ್ಯಮಂತ್ರಿಗಳು

ಅನುಬಂಧ - ಅ

ಕಛೇರಿ ಹೆಸರು: ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳ ವಿವರ

ರೂ.ಕೋಟಿಗಳಲ್ಲಿ

ಕ್ರ. ಸಂ	ಫೇಸ್, ಪ್ಯಾಕೇಜ್	ಯೋಜನೆಯ ಹೆಸರು	ರಸ್ತೆಯ ಉದ್ದ (ಅಂತರ) ಕಿ.ಮೀ	ಪರಿಷ್ಕೃತ ಯೋಜನಾ ವೆಚ್ಚ	ಪ್ರಸ್ತುತ ಹಂತ
1	2	3	4	5	6
1	ಫೇಸ್ - ಎ, ಪ್ಯಾಕೇಜ್-1	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 1 1. ಕಮರ್ಷಿಯಲ್ ಸ್ಟ್ರೀಟ್-ಕಾಮರಾಜ್ ರಸ್ತೆಯಿಂದ ಜುಮ್ಮಾ ಮಸೀದಿ ರಸ್ತೆವರೆಗೆ (ಬೌರಿಂಗ್ ಆಸ್ಪತ್ರೆಯ ಹತ್ತಿರ)	0.458	35.93	ಕಾಮಗಾರಿ ಪ್ರಗತಿಯಲ್ಲಿದೆ
2		2. ಕಾಮರಾಜ್ ರಸ್ತೆ- ಎಂ ಜಿ ರಸ್ತೆಯಿಂದ ಕಮರ್ಷಿಯಲ್ ಸ್ಟ್ರೀಟ್ ವರೆಗೆ ಮತ್ತು ಸೇಂಟ್ ಜಾನ್ಸ್ ಚರ್ಚ್ ರಸ್ತೆವರೆಗೆ	1.829		
3	ಫೇಸ್ - ಎ, ಪ್ಯಾಕೇಜ್-2	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 2 1. ಹಲಸೂರು ರಸ್ತೆ- ಡಿಕನ್ಸನ್ ರಸ್ತೆಯಿಂದ ಕೆನ್ಸಿಂಗ್ಟನ್ ರಸ್ತೆಯವರೆಗೆ	0.585	29.27	ಕಾಮಗಾರಿ ಪ್ರಗತಿಯಲ್ಲಿದೆ
4		2. ಡಿಕನ್ಸನ್ ರಸ್ತೆ- ಎಂ ಜಿ ರಸ್ತೆಯಿಂದ ಕಾಮರಾಜ್ ರಸ್ತೆಯವರೆಗೆ	1.2		
5	ಫೇಸ್ - ಎ, ಪ್ಯಾಕೇಜ್-3	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 3 1. ಇನ್‌ಫೆಂಟ್ರಿ ರಸ್ತೆ- ಅಲಿ ಅಸ್ಕರ್ ರಸ್ತೆಯಿಂದ ಸಫಿನಾ ಪ್ಲಾಜಾ ಕಾಂಪ್ಲೆಕ್ಸ್ ವರೆಗೆ (ಮುಖ್ಯ ಗಾರ್ಡ್ ಕ್ರಾಸ್ ರಸ್ತೆ)	1.647	53.26	ಕಾಮಗಾರಿ ಪ್ರಗತಿಯಲ್ಲಿದೆ
6		2. ಸೆಂಟ್ರಲ್ ಸ್ಟ್ರೀಟ್ ಎಂ ಜಿ ರಸ್ತೆಯಿಂದ ಶಿವಾಜಿನಗರ ಬಸ್ ನಿಲ್ದಾಣ (ಟಿಟಿಎಂಸಿ) ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ (ಬಾಳೆಕುಂದ್ರಿ) ಜಂಕ್ಷನ್ ವರೆಗೆ	0.842		
7		3. ಬೋರಿಂಗ್ ಆಸ್ಪತ್ರೆ ರಸ್ತೆ - ಮುಖ್ಯ ಗಾರ್ಡ್ ಕ್ರಾಸ್ ರಸ್ತೆಯಿಂದ ಎಚ್‌ಎಸ್‌ಐಎಸ್ ಘೋಷಾ ಆಸ್ಪತ್ರೆವರೆಗೆ	0.836		
8	ಫೇಸ್ - ಎ, ಪ್ಯಾಕೇಜ್-4	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 4 1. ಮಿಲ್ಲರ್ಸ್ ರಸ್ತೆ - ಚಾಲುಕ್ಯ ವೃತ್ತದಿಂದ ಕಂಟೋನ್ಮೆಂಟ್ ವರೆಗೆ ಕ್ವೀನ್ಸ್ ರಸ್ತೆ ಮೂಲಕ	1.305	39.98	ಕಾಮಗಾರಿ ಪ್ರಗತಿಯಲ್ಲಿದೆ
9		2. ರಾಜ್ ಭವನ ರಸ್ತೆ- ಮಿನ್ಸ್ಕ್ ಚೌಕದಿಂದ ಬಸವೇಶ್ವರ ವೃತ್ತದವರೆಗೆ	0.92		

ಕ್ರ. ಸಂ	ಫೇಸ್, ಪ್ಯಾಕೇಜ್	ಯೋಜನೆಯ ಹೆಸರು	ರಸ್ತೆಯ ಉದ್ದ (ಅಂತರ) ಕಿ.ಮೀ	ಪರಿಷ್ಕೃತ ಯೋಜನಾ ವೆಚ್ಚ	ಪ್ರಸ್ತುತ ಹಂತ
1	2	3	4	5	6
10	ಫೇಸ್ - ಎ, ಪ್ಯಾಕೇಜ್-5	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 5 1. ಮೆಕ್‌ಗ್ರಾತ್ ರಸ್ತೆ- ಬ್ರಿಗೇಡ್ ರಸ್ತೆಯಿಂದ ರಿಚ್ಮಂಡ್ ರಸ್ತೆವರೆಗೆ	0.46	27.25	ಕಾಮಗಾರಿ ಪ್ರಗತಿಯಲ್ಲಿದೆ
11		2. ಕಾನ್ವೆಂಟ್ ರಸ್ತೆ- ರಿಚ್ಮಂಡ್ ರಸ್ತೆಯಿಂದ ರೆಸಿಡೆನ್ಸಿ ರಸ್ತೆಯವರೆಗೆ	0.422		
12		3. ಹೇಯ್ಸ್ ರಸ್ತೆ- ರಿಚ್ಮಂಡ್ ರಸ್ತೆಯಿಂದ ರೆಸಿಡೆನ್ಸಿ ರಸ್ತೆಯವರೆಗೆ	0.31		
13		4. ವುಡ್ ಸ್ಟ್ರೀಟ್- ಮ್ಯೂಸಿಯಂ ರಸ್ತೆಯಿಂದ ರಿಚ್ಮಂಡ್ ರಸ್ತೆಯವರೆಗೆ	0.28		
14		5. ಕ್ಯಾಸಲ್ ಸ್ಟ್ರೀಟ್ - ಮ್ಯೂಸಿಯಂ ರಸ್ತೆಯಿಂದ ರಿಚ್ಮಂಡ್ ರಸ್ತೆಯವರೆಗೆ	0.38		
15		6. ಟೇಟ್ ಲೇನ್ - ರಿಚ್ಮಂಡ್ ರಸ್ತೆಯಿಂದ ಕ್ಯಾಸಲ್ ಸ್ಟ್ರೀಟ್ ವರೆಗೆ	0.13		
16	ಫೇಸ್ ಎ , ಪ್ಯಾಕೇಜ್-6	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 6 1. ಕಸ್ತೂರ್ಬಾ ರಸ್ತೆ- ಸಿದ್ದಲಿಂಗಯ್ಯ ವೃತ್ತದಿಂದ ಮಿನ್ಸ್ಕ ಚೌಕಕ್ಕೆ ಕ್ವೀನ್ಸ್ ಪ್ರತಿಮೆ (ಎಂ ಜಿ ರಸ್ತೆ)	0.735	45.75	ಕಾಮಗಾರಿ ಪ್ರಗತಿಯಲ್ಲಿದೆ
17		2. ಕ್ವೀನ್ಸ್ ರಸ್ತೆ- ಎಂ ಜಿ ರಸ್ತೆಯಿಂದ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದವರೆಗೆ	1.827		
18	ಫೇಸ್ ಎ , ಪ್ಯಾಕೇಜ್-7	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಎ ಪ್ಯಾಕೇಜ್ 7 1. ರಾಜಾ ರಾಮ್ ಮೋಹನ್ ರಾಯ್ ರಸ್ತೆ - ರಿಚ್ಮಂಡ್ ಸರ್ಕಲ್ ನಿಂದ ಹಡ್ಸನ್ ಸರ್ಕಲ್ ವರೆಗೆ	1	39.97	ಕಾಮಗಾರಿ ಪ್ರಗತಿಯಲ್ಲಿದೆ
19		2. ಲಾವೆಲ್ಲೆ ರಸ್ತೆ - ಎಂ.ಜಿ.ರೋಡ್‌ನಿಂದ ರಿಚ್ಮಂಡ್ ಸರ್ಕಲ್ ವರೆಗೆ	1.376		
20		3. ಬ್ರಿಗೇಡ್ ರಸ್ತೆ - ಎಂ.ಜಿ.ರೋಡ್‌ನಿಂದ ವಾರ್ ಮೆಮೋರಿಯಲ್ ಜಂಕ್ಷನ್‌ವರೆಗೆ	0.32		

ಕ್ರ. ಸಂ	ಫೇಸ್, ಪ್ಯಾಕೇಜ್	ಯೋಜನೆಯ ಹೆಸರು	ರಸ್ತೆಯ ಉದ್ದ (ಅಂತರ) ಕಿ.ಮೀ	ಪರಿಷ್ಕೃತ ಯೋಜನಾ ವೆಚ್ಚ	ಪ್ರಸ್ತುತ ಹಂತ
1	2	3	4	5	6
21	ಫೇಸ್ ಬಿ , ಪ್ಯಾಕೇಜ್-1	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 1 1. ಸೇಂಟ್ ಜಾನ್ಸ್ ರಸ್ತೆ - ಕೆನ್ಸಿಂಗ್ಟನ್ ರಸ್ತೆಯಿಂದ ಸೇಂಟ್ ಜಾನ್ಸ್ ಚರ್ಚ್ ರಸ್ತೆಯವರೆಗೆ	1.1	44.29	ಕಾಮಗಾರಿ ಪ್ರಗತಿಯಲ್ಲಿದ
22		2. ಸೇಂಟ್ ಜಾನ್ಸ್ ಚರ್ಚ್ ರಸ್ತೆ (ಹೊಸ ಬಂಬೂ ಬಜಾರ್ ರಸ್ತೆ ಪ್ರೊಮಿನೇಡ್ ರಸ್ತೆವರೆಗೆ)	1.58		
23	ಫೇಸ್ ಬಿ , ಪ್ಯಾಕೇಜ್-2	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 2 1. ಮಿಲ್ಲರ್ಸ್ ರಸ್ತೆ ವಿಸ್ತರಣೆ (ಮಿಲ್ಲರ್ಸ್ ರಸ್ತೆ ಅಂಡರ್‌ಪಾಸ್‌ನಿಂದ ಹೈನ್ಸ್ ಸರ್ಕಲ್ ವರೆಗೆ)	1.14	43.42	ಕಾಮಗಾರಿ ಪ್ರಗತಿಯಲ್ಲಿದ
24		2. ಕಂಟೋನ್ಮೆಂಟ್ ರಸ್ತೆ (ಮಿಲ್ಲರ್ಸ್ ರಸ್ತೆಯಿಂದ ಕ್ವೀನ್ಸ್ ರಸ್ತೆಯವರೆಗೆ)	0.57		
25		3. ಎಚ್.ಕೆ.ಪಿ ರಸ್ತೆ (ಕ್ವೀನ್ಸ್ ರಸ್ತೆಯಿಂದ ರಸ್ಸೆಲ್ ಮಾರ್ಕೆಟ್ ವರೆಗೆ)	0.9		
26	ಫೇಸ್ ಬಿ, ಪ್ಯಾಕೇಜ್-3	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 3 1. ಜುಮ್ಮಾ ಮಸೀದಿ ರಸ್ತೆ - ಬೌರಿಂಗ್ ಆಸ್ಪತ್ರೆ ರಸ್ತೆಯಿಂದ ರಸ್ಸೆಲ್ ಮಾರ್ಕೆಟ್ ವರೆಗೆ	0.57	16.94	ಕಾಮಗಾರಿ ಪ್ರಗತಿಯಲ್ಲಿದ
27		2. ಚಾಂದನಿ ಚೌಕ್ ರಸ್ತೆ - ಎಚ್.ಕೆ.ಪಿ ರಸ್ತೆಯಿಂದ ಶಿವಾಜಿ ರಸ್ತೆವರೆಗೆ	0.45		
28	ಫೇಸ್ ಬಿ , ಪ್ಯಾಕೇಜ್-4	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 4 1. ಸೇತು ರಾವ್ ರಸ್ತೆ (ಮೈಸೂರು ರಸ್ತೆ ಜಂಕ್ಷನ್‌ನಿಂದ ಜಿ. ಪಿ ರಸ್ತೆವರೆಗೆ)	0.26	29.37	ಕಾಮಗಾರಿ ಪ್ರಗತಿಯಲ್ಲಿದ
29		2. ಸೇತು ರಾವ್ ಕ್ರಾಸ್ ರಸ್ತೆ (ಅಯ್ಯಂಗಾರ್ ರಸ್ತೆಯಿಂದ ಸೇತು ರಾವ್ ರಸ್ತೆ ಜಂಕ್ಷನ್ ವರೆಗೆ)	0.18		
30		3. ಎನ್‌ಆರ್ ರಸ್ತೆ (ಎಸ್‌ಜೆಪಿ ರಸ್ತೆ ಜಂಕ್ಷನ್‌ನಿಂದ ಕಚ್ಚೇರಿ ರಸ್ತೆ ಜಂಕ್ಷನ್‌ವರೆಗೆ)	0.48		
31		4. ಎಸ್‌ಜೆಪಿ ರಸ್ತೆ (ಕೆಆರ್ ಮಾರ್ಕೆಟ್ ವೃತ್ತದಿಂದ ಎನ್‌ಆರ್ ರಸ್ತೆ ಜಂಕ್ಷನ್‌ವರೆಗೆ)	0.81		

ಕ್ರ. ಸಂ	ಫೇಸ್, ಪ್ಯಾಕೇಜ್	ಯೋಜನೆಯ ಹೆಸರು	ರಸ್ತೆಯ ಉದ್ದ (ಅಂತರ) ಕಿ.ಮೀ	ಪರಿಷ್ಕೃತ ಯೋಜನಾ ವೆಚ್ಚ	ಪ್ರಸ್ತುತ ಹಂತ
1	2	3	4	5	6
32	ಫೇಸ್ ಬಿ, ಪ್ಯಾಕೇಜ್-5	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 5 1. ರೇಸ್ ಕೋರ್ಸ್ ರಸ್ತೆ (ಪ್ಯಾಲೇಸ್ ರಸ್ತೆಯಿಂದ ಹರೇ ಕೃಷ್ಣ ರಸ್ತೆಯವರೆಗೆ)	0.66	48.92	ಕಾಮಗಾರಿ ಪ್ರಗತಿಯಲ್ಲಿದೆ
33		2. ರಾಜ್‌ಭವನ್ ರಸ್ತೆ (ಮಿಲ್ಲರ್ಸ್ ರಸ್ತೆ ಇಂಟರ್ ಸೆಕ್ಷನ್ ನಿಂದ ಅಲಿ ಅಸ್ಕರ್ ರಸ್ತೆ)	0.48		
34		3. ಪ್ಯಾಲೇಸ್ ರಸ್ತೆ (ಮಿಲ್ಲರ್ಸ್ ರಸ್ತೆ ಇಂಟರ್ ಸೆಕ್ಷನ್ ನಿಂದ ಬಸವೇಶ್ವರ	1.91		
35	ಫೇಸ್ ಬಿ, ಪ್ಯಾಕೇಜ್-6	ಸ್ಮಾರ್ಟ್ ಟೆಂಡರ್ ಶ್ಯೂರ್ ರಸ್ತೆಗಳು ಫೇಸ್ ಬಿ ಪ್ಯಾಕೇಜ್ 6 1. ಅವೆನ್ಯೂ ರಸ್ತೆ - ಮೈಸೂರು ಬ್ಯಾಂಕ್ ವೃತ್ತದಿಂದ ಎಸ್‌ಜೆಪಿ ರಸ್ತೆವರೆಗೆ	1.02	27.30	ಕಾಮಗಾರಿ ಪ್ರಗತಿಯಲ್ಲಿದೆ
36		2. ರೀನಿಯಸ್ ಸ್ಟ್ರೀಟ್ - ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆಯಿಂದ ಲ್ಯಾಂಗ್‌ಫೋರ್ಡ್ ರಸ್ತೆಯವರೆಗೆ	0.57		
		ಒಟ್ಟು ಮೊತ್ತ	29.542	481.65	

ವ್ಯವಸ್ಥಾಪಕ ನಿರ್ದೇಶಕರ ಪರವಾಗಿ,
ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್.
5/12/2020

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	386
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ. (ಉಡುಪಿ)
ಉತ್ತರಿಸಬೇಕಾದ ದಿನಾಂಕ	:	08.12.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
1	ಉಡುಪಿ ಪವರ್ ಕಾರ್ಪೊರೇಷನ್ ಲಿ. ಕಂಪನಿಯಿಂದ ಈ ಜಿಲ್ಲೆಯ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ; (ವೃಂದವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಉಡುಪಿ ಪವರ್ ಕಾರ್ಪೊರೇಷನ್ ಲಿ. ಕಂಪನಿಯಿಂದ ಉಡುಪಿ ಜಿಲ್ಲೆಯ ನಾಗರಿಕರಿಗೆ ನೀಡಿರುವ ಉದ್ಯೋಗದ ವೃಂದವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
ಆ)	ಸದರಿ ಕಂಪನಿಯು ಡಾ: ಸರೋಜಿನಿ ಮಹಿಷಿ ವರದಿಯನ್ನು ಪಾಲಿಸಿದೆಯೇ;	ಉಡುಪಿ ಪವರ್ ಕಾರ್ಪೊರೇಷನ್ ಲಿ. ಕಂಪನಿಯು ಡಾ॥ ಸರೋಜಿನಿ ಮಹಿಷಿ ವರದಿಯನ್ನು ಪಾಲಿಸುವ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಂಡಿದ್ದು ಆದರೆ ಸದರಿ ಕಂಪನಿಯು ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಉಷ್ಣ ವಿದ್ಯುತ್ ಸ್ಥಾವರ ವಾಗಿದ್ದು ಇದಕ್ಕೆ ಉನ್ನತ ತಂತ್ರಜ್ಞಾನದ ಕೌಶಲ್ಯ ವಿರುವ ಮ್ಯಾನ್ ಪವರ್ ಅವಶ್ಯಕತೆ ಇರುವುದರಿಂದ ಸ್ಥಳೀಯವಾಗಿ ಅಗತ್ಯ ಮ್ಯಾನ್ ಪವರ್ ಸಿಗದೇ ಇರುವುದರಿಂದ ಕಂಪನಿಯು ಬೇರೆ ಪ್ರದೇಶದ ಜನರನ್ನು ಆಯ್ಕೆ ಮಾಡಿಕೊಳ್ಳುವ ಅನಿವಾರ್ಯತೆ ಇರುತ್ತದೆ ಎಂದು ಯುಪಿಸಿಎಲ್ ಕಂಪನಿಯವರು ತಿಳಿಸಿರುತ್ತಾರೆ. ದಿನಾಂಕ 30.09.2020 ರಲ್ಲಿದ್ದಂತೆ, ಕನ್ನಡಿಗರು ಹಾಗೂ ಕನ್ನಡೇತರರ ನೌಕರರ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಇ)	ಅದಾನಿ ಉಡುಪಿ ಪವರ್ ಕಾರ್ಪೊರೇಷನ್ ಲಿ. ಕಂಪನಿಯಲ್ಲಿ ಪ್ರಸ್ತುತ ಎಷ್ಟು ಉದ್ಯೋಗಿಗಳಿದ್ದಾರೆ; (ವೃಂದವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಅದಾನಿ ಉಡುಪಿ ಪವರ್ ಕಾರ್ಪೊರೇಷನ್ ಲಿ.ಕಂಪನಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ವೃಂದವಾರು ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ.
ಈ)	ಸದರಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉದ್ಯೋಗಿಗಳ ಪೈಕಿ ರಾಜ್ಯದವರ ಸಂಖ್ಯೆ ಎಷ್ಟು; ಉಡುಪಿ ಜಿಲ್ಲೆಯವರ ಸಂಖ್ಯೆ ಎಷ್ಟು ಹಾಗೂ ಇತರ ರಾಜ್ಯದವರ ಸಂಖ್ಯೆ ಎಷ್ಟು? (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಅದಾನಿ ಉಡುಪಿ ಪವರ್ ಕಾರ್ಪೊರೇಷನ್ ಲಿ. ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ಪೈಕಿ ರಾಜ್ಯದ, ಉಡುಪಿ ಜಿಲ್ಲೆಯ ಹಾಗೂ ಇತರೆ ರಾಜ್ಯಗಳ ಉದ್ಯೋಗಿಗಳ ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಎನರ್ಜಿ 195 ಪಿಪಿಎಂ 2020

ಬಿ.ಎಸ್.ವೈ

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

386

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ರಘುಪತಿ ಭಟ್.ಕೆ. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 386ಕ್ಕೆ ಅನುಬಂಧ-1

ಉಡುಪಿ ಪವರ್ ಕಾರ್ಪೊರೇಷನ್ ಲಿ. ಕಂಪನಿಯಿಂದ ಉಡುಪಿ ಜಿಲ್ಲೆಯ ನಾಗರಿಕರಿಗೆ ನೀಡಿರುವ ಉದ್ಯೋಗದ ವೃಂದವಾರು ವಿವರಗಳು

ರೆಗ್ಯುಲರ್/ ಕಾಂಟ್ರಾಕ್ಟ್	ಮ್ಯಾನೇಜರ್ (Group A)	ಎಕ್ಸಿಕ್ಯುಟಿವ್ (Group B)	ಸ್ಟಾಫ್ ಹುದ್ದೆಗಳು (Group C)	ಸಬ್ ಸ್ಟಾಫ್ ಹುದ್ದೆಗಳು (Group D)	ಒಟ್ಟು
ಉಡುಪಿ ಜಿಲ್ಲೆ					
[illegible]	4	27	17	24	**72**
[illegible]	3	26	177	163	**369**
ಒಟ್ಟು ಮೊತ್ತ	**7**	**53**	**194**	**187**	**441**

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ರಘುಪತಿ ಭಟ್.ಕೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 386ಕ್ಕೆ ಅನುಬಂಧ-2

ಅದಾನಿ ಉಡುಪಿ ಪವರ್ ಕಾರ್ಪೋರೇಷನ್ ಸಂಸ್ಥೆಯಲ್ಲಿ ದಿನಾಂಕ 30.09.2020 ರಲ್ಲಿದ್ದಂತೆ ಕಾರ್ಯನಿರ್ವಹಿಸುತ್ತಿರುವ ಕನ್ನಡಿಗರು ಹಾಗೂ ಕನ್ನಡೇತರರ ನೌಕರರ ವಿವರಗಳು

	On Roll Contract Employees	Managerial Cadre				Executive Cadre				Staff Cadre				Sub Staff Cadre				Total			
		Kannadigas	Others Total	Total	%age Kannadigas	Kannadigas	Others Total	Total	%age Kannadigas	Kannadigas	Others Total	Total	%age Kannadigas	Kannadigas	Others Total	Total	%age Kannadigas	Kannadigas	Others Total	Total	%age Kannadigas
a	Direct Employees on Rolls of UPCL	10	9	19	52.63	74	132	206	35.92	32	9	41	78.05	27	1	28	96.43	143	151	294	48.64
b	Contract Employees and Employees on Contractors Roll	4	8	12	33.33	40	70	110	36.36	308	189	497	61.97	313	71	384	81.51	665	338	1003	66.3
	Total	14	17	31	45.16	114	202	316	36.08	340	198	538	63.2	340	72	412	82.52	808	489	1297	62.3

386

ವಿಧಾನ ಸಭೆಯ ಮಾನ್ಯಸದಸ್ಯರಾದ ಶ್ರೀ ರಘುಪತಿ ಭಟ್.ಕೆ. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 386ಕ್ಕೆ

ಅನುಬಂಧ–3

ಅದಾನಿ ಉಡುಪಿ ಪವರ್ ಕಾರ್ಪೋರೇಷನ್ ಲಿ. ಕಂಪನಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ವೃಂದವಾರು ವಿವರಗಳು:

ಕ್ರಮ ಸಂಖ್ಯೆ	ರೆಗ್ಯುಲರ್/ ಕಾಂಟ್ರಾಕ್ಟ್	ಮ್ಯಾನೇಜರ್ (Group A)	ಎಕ್ಸಿಕ್ಯುಟಿವ್ (Group B)	ಸ್ಟಾಫ್ ಹುದ್ದೆಗಳು (Group C)	ಸಬ್ ಸ್ಟಾಫ್ ಹುದ್ದೆಗಳು (Group D)	ಒಟ್ಟು
1	ರೆಗ್ಯುಲರ್	19	204	41	28	294
2	ಕಾಂಟ್ರಾಕ್ಟ್	12	110	497	384	1003
ಒಟ್ಟು		31	316	540	419	1297

ದಿನಾಂಕ 30–09–2020 ರಲ್ಲಿ ಇದ್ದಂತೆ

ವಿಧಾನ ಸಭೆಯ ಮಾನ್ಯಸದಸ್ಯರಾದ ಶ್ರೀ ರಘುಪತಿ ಭಟ್.ಕೆ. ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 386ಕ್ಕೆ

ಅನುಬಂಧ–4

ಅದಾನಿ ಉಡುಪಿ ಪವರ್ ಕಾರ್ಪೋರೇಷನ್ ಲಿ. ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳ ಪೈಕಿ ರಾಜ್ಯದ, ಉಡುಪಿ ಜಿಲ್ಲೆಯ ಹಾಗೂ ಇತರೆ ರಾಜ್ಯಗಳ ಉದ್ಯೋಗಿಗಳ ವಿವರಗಳು:

ದಿನಾಂಕ 30–09–2020 ರಲ್ಲಿ ಇದ್ದಂತೆ

ರೆಗ್ಯುಲರ್/ ಕಾಂಟ್ರಾಕ್ಟ್	ಉಡುಪಿ ಜಿಲ್ಲೆ	ಕರ್ನಾಟಕ ಇತರೆ ಜಿಲ್ಲೆಗಳಿಂದ	ಕರ್ನಾಟಕವನ್ನು ಹೊರತುಪಡಿಸಿ ಇತರೆ ರಾಜ್ಯಗಳಿಂದ	ಒಟ್ಟು
ರೆಗ್ಯುಲರ್	72	71	151	294
ಕಾಂಟ್ರಾಕ್ಟ್	369	302	332	1003
ಒಟ್ಟು	441	373	483	1297

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 388
ಮಾನ್ಯ ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)
ವಿಷಯ : 'ಪ್ರವಾಸೋದ್ಯಮಕ್ಕೆ ಉತ್ತೇಜನ'
ಉತ್ತರಿಸುವ ದಿನಾಂಕ : 08.12.2020
ಉತ್ತರಿಸುವವರು : ಮುಖ್ಯ ಮಂತ್ರಿ

*****

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಕರಾವಳಿ ಭಾಗದಲ್ಲಿರುವ ಕಡಲ ಕಿನಾರೆಗಳು (ಬೀಚ್) ದೇಶ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು, ಈ ಕಡಲ ಕಿನಾರೆಗಳನ್ನು ಅಭಿವೃದ್ಧಿ ಪಡಿಸಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಹಾಕಿಕೊಂಡ ಯೋಜನೆಗಳು ಯಾವುವು; (ಸಂಪೂರ್ಣ ವಿವರಗಳನ್ನು ಒದಗಿಸುವುದು)	ರಾಜ್ಯವು 320 ಕಿ.ಮೀ ಉದ್ದದ ಕಡಲ ತೀರವನ್ನು ಹೊಂದಿದ್ದು, ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಇಲಾಖೆಯಿಂದ ಕೋಸ್ಟಲ್ ಮಾಸ್ಟರ್ ಪ್ಲಾನ್ ಅನ್ನು ಸಮಾಲೋಚಕ ಸಂಸ್ಥೆಯಾದ ಮೆ: ಐ.ಪಿ.ಇ ಗ್ಲೋಬಲ್ ಲಿಮಿಟೆಡ್, ನವದೆಹಲಿ ಸಂಸ್ಥೆಯಿಂದ ಸಿದ್ಧಪಡಿಸಲಾಗಿದೆ. ಕರಾವಳಿ ತೀರಗಳನ್ನು ಅನುದಾನದ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಪ್ರವಾಸಿತಾಣಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದು. 2020-25ರ ನೂತನ ಪ್ರವಾಸೋದ್ಯಮ ನೀತಿಯಲ್ಲಿ ಕರಾವಳಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರವಾಸೋದ್ಯಮದಲ್ಲಿ ಆಸಕ್ತಿ ಹೊಂದಿರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಕೇಂದ್ರೀಕೃತ ಪ್ರವಾಸಿ ತಾಣಗಳೆಂದು ಗುರುತಿಸಿ ಪ್ರವಾಸೋದ್ಯಮ ಇಲಾಖೆಯಿಂದ ಸಹಾಯಧನ ಹಾಗೂ ಇತರೆ ಉತ್ತೇಜನ ನೀಡಲು ಅವಕಾಶ ಕಲ್ಪಿಸಲಾಗಿದೆ.
ಆ)	ಕಳೆದ 2018ನೇ ಇಸವಿಯಿಂದ ಈವರೆಗೆ ಉಡುಪಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಕಡಲ ಕಿನಾರೆ (ಬೀಚ್)ಗಳನ್ನು ಅಭಿವೃದ್ಧಿಪಡಿಸಲು ಮಂಜೂರಾದ ಅನುದಾನ ಎಷ್ಟು; ಈ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ; (ಮಂಜೂರಾದ ಅನುದಾನ ಮೊತ್ತ, ಕಾಮಗಾರಿಗಳ ಹೆಸರು ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು).	ಉಡುಪಿ ಜಿಲ್ಲೆಯ ಕಡಲ ತೀರಗಳ ಅಭಿವೃದ್ಧಿಗಾಗಿ ಬಂಡವಾಳ ವೆಚ್ಚಗಳು ಹಾಗೂ ಕೆ.ಟಿ.ವಿ.ಜಿ. ಶಿಫಾರಸ್ಸುಗಳ ಅಡಿಯಲ್ಲಿ 2018 ರಿಂದ ಈವರೆಗೆ ಮಂಜೂರಾದ ಅನುದಾನ ಮತ್ತು ಬಿಡುಗಡೆಯಾದ ಅನುದಾನ ಹಾಗೂ ಪೂರ್ಣಗೊಂಡಿರುವ, ಪ್ರಗತಿಯಲ್ಲಿರುವ ಹಾಗೂ ಪ್ರಾರಂಭಿಸಬೇಕಾಗಿರುವ ಕಾಮಗಾರಿಗಳ ವಿವರವನ್ನು ಅನುಬಂಧ 1 ಮತ್ತು 2ರಲ್ಲಿ ಒದಗಿಸಿದೆ.

..2..

ಇ)	ಪ್ರಸ್ತುತ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ; ಎಷ್ಟು ಪ್ರಗತಿಯಲ್ಲಿದೆ? (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಪೈಕಿ 1. ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ – 8, 2. ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ – 1, 3. ಪ್ರಾರಂಭಿಸ ಬೇಕಾಗಿರುವ ಕಾಮಗಾರಿಗಳ ಸಂಖ್ಯೆ –11.
		ಕಾಮಗಾರಿಗಳ ವಿವರಗಳನ್ನು ಅನುಬಂಧ 1 ಮತ್ತು 2ರಲ್ಲಿ ಒದಗಿಸಿದೆ.

ಸಂಖ್ಯೆ: ಟಿಒಆರ್ 247 ಟಿಡಿವಿ 2020

ಬಿಎಸ್

(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ.

ಅನುಬಂಧ–1

ಉಡುಪಿ ಜಿಲ್ಲೆಯ ಕಡಲ ತೀರಗಳ ಅಭಿವೃದ್ಧಿಗಾಗಿ ಬಂಡವಾಳ ವೆಚ್ಚಗಳ ಅಡಿಯಲ್ಲಿ 2018 ರಿಂದ ಈವರೆಗೆ ಮಂಜೂರಾದ ಅನುದಾನ ಮತ್ತು ಬಿಡುಗಡೆಯಾದ ಅನುದಾನ ಹಾಗೂ ಕಾಮಗಾರಿಗಳ ವಿವರ

ರೂ.ಲಕ್ಷಗಳಲ್ಲಿ

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ/ ಯೋಜನೆ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಈವರೆವಿಗೂ ಬಿಡುಗಡೆ ಮಾಡಿರುವ ಅನುದಾನ	ಷರಾ
1	2	3	4	5	6	7
	ಉಡುಪಿ ಜಿಲ್ಲೆ					
	ಕುಂದಾಪುರ ತಾಲ್ಲೂಕು					
1	ತ್ರಾಸಿ ಮರವಂತೆ ಕಡಲ ತೀರದಲ್ಲಿ Marine drive Works	2018–19	25.00	ಲೋಕೋಪಯೋಗಿ ಇಲಾಖೆ	25.00	ಕಾಮಗಾರಿ ಪ್ರಾರಂಭವಾಗಿರುವುದಿಲ್ಲ.
2	ಕುಂದಾಪುರ ತಾಲ್ಲೂಕು ಕುಂದಾಪುರದ ಕೋಡಿ ಕಡಲ ತೀರ ಅಭಿವೃದ್ಧಿ.	2019–20	25.00	ಕೆ.ಆರ್.ಐ.ಡಿ.ಎಲ್	8.00	ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಕಾಮಗಾರಿ ಪ್ರಾರಂಭಿಸಲು ಬಾಕಿ ಇದೆ.
3	ಕುಂದಾಪುರ ತಾಲ್ಲೂಕು ಕೋಟೇಶ್ವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಳೆಅಳಿವೆ ಕಡಲ ತೀರ ಅಭಿವೃದ್ಧಿ.	2019–20	25.00	ಲೋಕೋಪಯೋಗಿ ಇಲಾಖೆ	8.00	ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಕಾಮಗಾರಿ ಪ್ರಾರಂಭಿಸಲು ಬಾಕಿ ಇದೆ. ಟೆಂಡರ್ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ.
	ಬೈಂದೂರು ತಾಲ್ಲೂಕು					
4	ಉಡುಪಿ ಜಿಲ್ಲೆ, ಬೈಂದೂರು ತಾಲ್ಲೂಕಿನ ಕರಿಮಂಜೇಶ್ವರ ಗ್ರಾಮದ ಹೊಸಹಿತ್ಲು ಸಮುದ್ರ ಕಿನಾರೆ ಬಳಿ ಕುಟೀರ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಹೈ ಮಾಸ್ಟ್ ದೀಪ ಅಳವಡಿಕೆ ಹೀಗೆ ಹಲವಾರು ಮೂಲಭೂತ ಸೌಕರ್ಯಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.	2018–19	15.00	ಲೋಕೋಪಯೋಗಿ ಇಲಾಖೆ	10.00	ಕಾಮಗಾರಿ ಪ್ರಾರಂಭಿಸಲಾಗಿದೆ
	ಬ್ರಹ್ಮಾವರ ತಾಲ್ಲೂಕು					
5	ಬ್ರಹ್ಮಾವರ ತಾಲ್ಲೂಕು ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಡಿ-ಕನ್ಯಾಣ ಕಡಲ ತೀರ ಅಭಿವೃದ್ಧಿ.	2019–20	25.00	ಲೋಕೋಪಯೋಗಿ ಇಲಾಖೆ	8.00	ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಕಾಮಗಾರಿ ಪ್ರಾರಂಭಿಸಲು ಬಾಕಿ ಇದೆ. ಟೆಂಡರ್ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ.
6	ಬ್ರಹ್ಮಾವರ ತಾಲ್ಲೂಕು ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೋಡಿ ಬೇಂಗ್ರೆ ಕಡಲ ತೀರ ಅಭಿವೃದ್ಧಿ.	2019–20	35.00	ಲೋಕೋಪಯೋಗಿ ಇಲಾಖೆ	12.00	ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಕಾಮಗಾರಿ ಪ್ರಾರಂಭಿಸಲು ಬಾಕಿ ಇದೆ. ಟೆಂಡರ್ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ.

ರೂ.ಲಕ್ಷಗಳಲ್ಲಿ

ಕ್ರ. ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ/ ಯೋಜನೆ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಈವರೆವಿಗೂ ಬಿಡುಗಡೆ ಮಾಡಿರುವ ಅನುದಾನ	ಷರಾ
1	2	3	4	5	6	7
	ಕಾಪು ತಾಲ್ಲೂಕು					
7	ಪಡುಬಿದ್ರೆ ಕಡಲ ತೀರದಲ್ಲಿ ಪುರುಷರ ಶೌಚಾಲಯ ನಿರ್ಮಾಣ	2018-19	29.00	ಲೋಕೋಪಯೋಗಿ ಇಲಾಖೆ	29.00	ಕಾಮಗಾರಿ ಪ್ರಾರಂಭಿಸಬೇಕಾಗಿದೆ
8	End point ಬೀಚ್‌ನ ನಿವೇಶನ ನೆಲ ಸಮತಟ್ಟುಗೊಳಿಸುವ ಕಾಮಗಾರಿ	2018-19	26.50	ಕೆ.ಆರ್.ಐ.ಡಿ.ಎಲ್	26.50	ಕಾಮಗಾರಿ ಪೂರ್ಣಗೊಂಡಿದೆ
9	ನಿವೇಶನದ ಪೂರ್ವಭಾಗದ ಹೊಳೆಯ ಬದಿ RCC ತಡೆಗೋಡೆ ಕಾಮಗಾರಿ	2018-19	40.00	ಕೆ.ಆರ್.ಐ.ಡಿ.ಎಲ್	40.00	ಕಾಮಗಾರಿ ಪೂರ್ಣಗೊಂಡಿದೆ
10	ಬೀಚ್‌ನ ಬಳಿದ್ವಿಚಕ್ರ ವಾಹನ ನಿಲುಗಡೆಗೆ ಫ್ಲಾಟ್ ಫಾರ್ಮ್ ನಿರ್ಮಿಸುವ ಕಾಮಗಾರಿ	2018-19	32.00	ಕೆ.ಆರ್.ಐ.ಡಿ.ಎಲ್	32.00	ಕಾಮಗಾರಿ ಪೂರ್ಣಗೊಂಡಿದೆ
11	ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು	2018-19	4.70	ಕೆ.ಆರ್.ಐ.ಡಿ.ಎಲ್	4.70	ಕಾಮಗಾರಿ ಪೂರ್ಣಗೊಂಡಿದೆ
12	ಸೋಲಾರ್ ಪ್ಯಾನಲ್ ಅಳವಡಿಸಲು ಶೆಡ್ ನಿರ್ಮಿಸುವಕಾಮಗಾರಿ	2018-19	44.50	ಕೆ.ಆರ್.ಐ.ಡಿ.ಎಲ್	44.50	ಕಾಮಗಾರಿ ಪೂರ್ಣಗೊಂಡಿದೆ
13	ಸಾಮಾನ್ಯ ವಾಹನ ನಿಲುಗಡೆ ನಿರ್ಮಿಸಲು	2018-19	12.30	ಕೆ.ಆರ್.ಐ.ಡಿ.ಎಲ್	12.30	ಕಾಮಗಾರಿ ಪೂರ್ಣಗೊಂಡಿದೆ
14	ಸೋಲಾರ್ ಘಟಕ ಹಾಗೂ SLRM ಘಟಕಕ್ಕಾಗಿ ಫ್ಲಾಟ್ ಫಾರಂ ನಿರ್ಮಾಣ ಕಾಮಗಾರಿ	2018-19	2.50	ಕೆ.ಆರ್.ಐ.ಡಿ.ಎಲ್	2.50	ಕಾಮಗಾರಿ ಪ್ರಾರಂಭಿಸಬೇಕಾಗಿದೆ
15	ಬ್ಲೂ ಫ್ಲ್ಯಾಗ್ ಸರ್ಟಿಫಿಕೇಶನ್‌ಯೋಜನೆ ನಿಗಧಿಯಾಗಿರುವ ಅಳಿವೆ ಪ್ರದೇಶದಲ್ಲಿ ಹರಿಯುವ ಕಾಮಿನಿ ನದಿಗೆ ತಡೆಗೋಡೆ ನಿರ್ಮಾಣ	2018-19	50.00	ಸಣ್ಣ ನೀರಾವರಿ ಇಲಾಖೆ	50.00	ಕಾಮಗಾರಿ ಪೂರ್ಣಗೊಂಡಿದೆ
16	ಜಲಸಾಹಸ ಕ್ರೀಡೆಗಳನ್ನು ಕಾಮಿನಿ ನದಿಯಲ್ಲಿ ನಡೆಸಲು ಫ್ಲೋಟಿಂಗ್ ಜೆಟ್ಟಿ ನಿಮಾಣ ಕಾಮಗಾರಿ	2018-19	50.00	ಬಂದರು ಮತ್ತು ಮೀನುಗಾರಿಕೆ ಇಲಾಖೆ	50.00	ಗ್ರ್ಯಾನೈಟ್ ತಡೆಗೋಡೆ ನಿರ್ಮಾಣ ಬದಲಿ ಕಾಮಗಾರಿಗೆ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲಾಗಿದೆ.
17	5.88 ಎಕರೆ ಜಮೀನಿನ ಪಕ್ಕದಲ್ಲಿ ಹರಿಯುವ ಕಾಮಿನಿ ನದಿಯಲ್ಲಿ ಹಿಟಾಚಿ, ಜೆ.ಸಿ.ಬಿ., ಕೂಲಿ ಆಳುಗಳಿಂದ ಕಳೆ ಗಿಡ ಕಲ್ಲುಗಳನ್ನು ತೆಗೆಯುವುದು ಹಾಗೂ ನದಿಯಲ್ಲಿ ಹೂಳು ತೆಗೆದು ಜಾಗ ಮಟ್ಟ ಮಾಡುವುದು.	2018-19	6.00	ಲೋಕೋಪಯೋಗಿ ಇಲಾಖೆ	6.00	ಕಾಮಗಾರಿ ಪೂರ್ಣಗೊಂಡಿದೆ
18	ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ಕ್ಷೇತ್ರದ ಪಡುಬಿದ್ರಿ ನಡಿಪಟ್ನ ಬೀಚ್ ರಸ್ತೆಯ ಎಂಡ್ ಪಾಯಿಂಟ್‌ನಲ್ಲಿ ಸಂಪರ್ಕ ಸೇತುವೆ ಹಾಗೂ ಕೂಡು ರಸ್ತೆ ನಿರ್ಮಾಣ.	2019-20	75.00	ಲೋಕೋಪಯೋಗಿ ಇಲಾಖೆ	25.00	ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾಮಗಾರಿ ಪ್ರಾರಂಭಿಸಲು ಬಾಕಿ ಇದೆ. ಟೆಂಡರ್ ಪ್ರಕ್ರಿಯೆ ಬಾಕಿ ಇರುತ್ತದೆ.
	ಉಡುಪಿ ಜಿಲ್ಲೆಯ ಒಟ್ಟು		**522.50**		**393.50**	

ಅನುಬಂಧ-2

ಉಡುಪಿ ಜಿಲ್ಲೆಯ ಕಡಲ ತೀರಗಳ ಅಭಿವೃದ್ಧಿಗಾಗಿ ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಶಿಫಾರಸ್ಸುಗಳಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಯ ವಿವರ	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಈವರೆಗೂ ಬಿಡುಗಡೆ ಮಾಡಿರುವ ಅನುದಾನ	ಷರಾ
	ಕುಂದಾಪುರ ತಾಲ್ಲೂಕು					
1	ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತ್ರಾಸಿ ಮರವಂತ ಕಡಲ ತೀರದಲ್ಲಿ ಪ್ರವಾಸಿ ಮಂದಿರ ನವೀಕರಣ, ಸ್ವಾಗತ ಪೋರ್ಚ್, ಲ್ಯಾಂಡ್ ಸ್ಕೇಪಿಂಗ್, ಇಂಟರ್‌ಲಾಕ್ ಪೇವರ್ಸ್, 2 - ಲೈಫ್ ಗಾರ್ಡ್ ವಾಚ್ ಟವರ್, ಹಳೆಯ ಮತ್ತು ನೂತನ ಶೌಚಾಲಯಗಳ ನವೀಕರಣ, ಫುಡ್ ಕಿಯಾಸ್ಕ್, ಓಪನ್ ಏರ್ ಥಿಯೇಟರ್, ವಾಚ್‌ಟವರ್ ಒಳಗೊಂಡ ಸ್ವಾಗತದ್ವಾರ, ಸಿ.ಸಿ. ಟಿವಿ ಫೆಸಿಲಿಟಿ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸುವುದು.	2019-20	500.00	ಕೆ.ಟಿ.ಐ.ಎಲ್. ಬೆಂಗಳೂರು	0.00	ದಿ: 11.03.2020ರ ಸರ್ಕಾರದ ಆದೇಶದಂತೆ ಈ ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಮ: ಕೆ.ಟಿ.ಐ.ಎಲ್. ಸಂಸ್ಥೆಗೆ ದಿ: 27.08.2020ರಂದು ಪತ್ರ ಬರೆಯಲಾಗಿದೆ. ಕೆ.ಟಿ.ಐ.ಎಲ್.ನಿಂದ ಸಮಾಲೋಚಕರ ಆಯ್ಕೆಗಾಗಿ ಟೆಂಡರ್ ಕರೆದಿದ್ದು, ಆರ್ಥಿಕ ಬಿಡ್ ತೆರೆದಿರುವುದಾಗಿ ತಿಳಿದುಬಂದಿರುತ್ತದೆ. **ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ.**
	ಉಡುಪಿ ತಾಲ್ಲೂಕು					
2	ಉಡುಪಿ ಜಿಲ್ಲೆಯ ಸೈಂಟ್ ಮೇರೀಸ್ ಐಲ್ಯಾಂಡ್ ಬಳಿ ಫೆರ್ರಿ ಜೆಟ್ಟಿ ನಿರ್ಮಿಸುವುದು.	2019-20	420.00	ಲೋಕೋಪಯೋಗಿ ಇಲಾಖೆ	140.00	ದಿನಾಂಕ: 31.12.2019ರ ಸರ್ಕಾರದ ಆದೇಶದಂತೆ ಅಂದಾಜು ಪಟ್ಟಿಗೆ ದಿನಾಂಕ: 31.12.2019ರಂದು ಇಲಾಖೆಯಿಂದ ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲ ಕಂತಿನ ಅನುದಾನ ರೂ.140.00 ಲಕ್ಷಗಳನ್ನು ಲೋ.ಇ.ಗೆ ಬಿಡುಗಡೆ ಮಾಡಲಾಗಿದೆ. ಸಿ.ಆರ್.ಝಡ್ ಅನುಮೋದನೆ ಪಡೆಯಲು ವಿನ್ಯಾಸ ಹಾಗೂ ಅಂದಾಜು ಪಟ್ಟಿಗಳನ್ನು ಲೋ.ಇ.ಯಿಂದ ತಯಾರಿಸಲಾಗುತ್ತಿದೆ. **ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ.**
	ಒಟ್ಟು ಮೊತ್ತ		**920.00**		**140.00**	

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 358

ಉತ್ತರಿಸಬೇಕಾಗಿದ್ದ ದಿನಾಂಕ : 08.12.2020

ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದುನ್ಯಾಮಗೌಡ (ಜಮಖಂಡಿ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರಸಂ	ಪ್ರಶ್ನೆ	ಉತ್ತರ
ಅ	ವಿವಿಧ ಕ್ರೀಡೆಗಳಿಗಾಗಿ ಗುತ್ತಿಗೆ ಆಧಾರದ ಮೇಲೆ ಮಾಸಿಕ ರೂ.40,000/- ಗೌರವಧನದನ್ವಯ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರನ್ನು ಗುತ್ತಿಗೆ ಅವಧಿ ಮುಗಿದ ನಂತರ ಪ್ರತಿ ವರ್ಷ ರದ್ದು ಮಾಡಿ ಪುನಃ ಸಂದರ್ಶನ ಮಾಡಿ ಪುನಃ ಆಯ್ಕೆ ಮಾಡುವ ಪ್ರಕ್ರಿಯೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ	ಕಳೆದ ವರ್ಷ ಎಲ್ಲಾ ತರಬೇತುದಾರರು ಎಲ್ಲಾ ಪ್ರಕ್ರಿಯೆ ಮುಗಿಸಿದ್ದರೂ ಮರಳಿ ಕೆಲಸಕ್ಕೆ ಹಾಜರಾಗಲು ಎಂಟು ತಿಂಗಳವರೆಗೆ ಕಾಯುತ್ತಿರುವುದು ನಿಜವೇ;	ಇಲ್ಲ.
ಇ	ಹಾಗಿದ್ದಲ್ಲಿ ತರಬೇತಿ ವಿದ್ಯಾರ್ಥಿಗಳಿಗೆ ತರಬೇತಿ ಪಡೆಯಲು ಅನಾನುಕೂಲವಾಗುವುದಿಲ್ಲವೇ:	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಈ	ಹಾಗಿದ್ದಲ್ಲಿ ಒಂದು ವಾರದಲ್ಲಿ ಎಲ್ಲಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ;	ಸರ್ಕಾರದ ಮಾರ್ಗಸೂಚಿಗಳನ್ವಯ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.
ಉ	ಇದರಿಂದ ತರಬೇತುದಾರರು 8 ತಿಂಗಳುಗಳಿಂದ ವೇತನವಿಲ್ಲದೆ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸರ್ಕಾರದ ಆದೇಶ ಸಂಖ್ಯೆ ಯುಸೇಇ 24 ಯುಇಸೇ 2019; ದಿನಾಂಕ: 17-06-2019ರಲ್ಲಿ ತರಬೇತುದಾರರ ಮತ್ತು ತಾಂತ್ರಿಕ ಸಿಬ್ಬಂದಿಗಳ ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಮಾತ್ರ ಸಂಚಿತ ವೇತನ ಆಧಾರದ ಮೇಲೆ ಆಯ್ಕೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿತ್ತು. ಅದರಂತೆ ನಿಯಮಾನುಸಾರ ಸರ್ಕಾರದ ಮಾರ್ಗಸೂಚಿಗಳನ್ವಯ ಪ್ರಕ್ರಿಯೆಯನ್ನು ದಿನಾಂಕ: 11-10-2019 ರಂದು ಪೂರ್ಣಗೊಳಿಸಿದ್ದು, ಆಯ್ಕೆಗೊಂಡ ತರಬೇತುದಾರರಿಗೆ ದಿನಾಂಕ: 11-10-2019 ರಂದೇ ನೇಮಕಾತಿ ಆದೇಶ ನೀಡಲಾಗಿದೆ.

		ಸದರಿ ತರಬೇತುದಾರರನ್ನು ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ನೇಮಕ ಮಾಡಿದ್ದು, ಸದರಿ ಅವಧಿಯು ದಿನಾಂಕ:15-10-2020 ರಂದು ಮುಗಿದಿದ್ದು, ನಿಯಮಾನುಸಾರ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿರುತ್ತದೆ.

ವೈಎಸ್ ಡಿ-/ಇಬಿಬಿ/122/2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 79

ಉತ್ತರಿಸಬೇಕಾದ ದಿನಾಂಕ : 08.12.2020

ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಪ್ರಶ್ನೆ	ಉತ್ತರ
ಅ) 1920ರಲ್ಲಿ ನಡೆದ ಒಲಂಪಿಕ್ಸ್ ನಲ್ಲಿ ಭಾರತದ ಪರವಾಗಿ ಸ್ಪರ್ಧಿಸಿದ್ದ ಮೊದಲ (Athlete) ಯಾರು, ಅವರು ಯಾವ ರಾಜ್ಯದವರು (ವಿವರ ನೀಡುವುದು)	1920ರಲ್ಲಿ ನಡೆದ ಒಲಂಪಿಕ್ಸ್ ನಲ್ಲಿ ಭಾರತದ ಪರವಾಗಿ ಭಾಗವಹಿಸಿದ ಕ್ರೀಡಾಪಟುಗಳ ಅಧಿಕೃತ ವಿವರಗಳನ್ನು ನೀಡುವಂತೆ ಭಾರತೀಯ ಒಲಂಪಿಕ್ ಸಂಸ್ಥೆ ಹಾಗೂ ಕರ್ನಾಟಕ ಒಲಂಪಿಕ್ ಸಂಸ್ಥೆಯನ್ನು ಕೋರಲಾಗಿರುತ್ತದೆ. ಈ ಮಾಹಿತಿ ಬಂದ ನಂತರ ಅಧಿಕೃತವಾಗಿ ಭಾಗವಹಿಸಿರುವ ಬಗ್ಗೆ ವಿವರ ನೀಡಲು ಸಾಧ್ಯವಾಗುತ್ತದೆ.
ಆ) ಬೆಳಗಾವಿಯ ಪವನಾಂಜನೆಯ ಎಂಬ ಬಿರುದು ಪಡೆದ ದಿ. ಶ್ರೀ ಪಡೆಪ್ಪಾ ಧರೆಪ್ಪಾ ಚೌಗುಲೆ ಇವರು ಭಾರತದ ಪ್ರಥಮ Athlete ಎಂದು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಇತಿಹಾಸಕಾರರ ಸಂಘಟನೆ ಸ್ಮರಣಿಕೆಯಲ್ಲಿ ಉಲ್ಲೇಖಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬೆಳಗಾವಿಯ ಪವನಾಂಜನೆಯ ಎಂಬ ಬಿರುದು ಪಡೆದ ದಿ. ಶ್ರೀ ಪಡೆಪ್ಪಾ ಧರೆಪ್ಪಾ ಚೌಗುಲೆ ಇವರು ಭಾರತದ ಪ್ರಥಮ ಕ್ರೀಡಾಪಟು ಎಂದು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಇತಿಹಾಸಕಾರರ ಸಂಘಟನೆ ಸ್ಮರಣಿಕೆಯಲ್ಲಿ ಉಲ್ಲೇಖಿಸದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಇ) ಬಂದಿದ್ದಲ್ಲಿ, ತಪ್ಪಾಗಿ ದಾಖಲಿಸಿದ ಬೇರೆಯವರ ಹೆಸರಿನ ಬದಲಿಗೆ ತಿದ್ದುಪಡಿ ಮಾಡಿ ದಿ|| ಶ್ರೀ ಪಡೆಪ್ಪಾ ಇವರ ಹೆಸರನ್ನು ದಾಖಲಿಸುವ ಉದ್ದೇಶವು ಸರ್ಕಾರಕ್ಕೆ ಇದೆಯೇ, ಇದ್ದಲ್ಲಿ ಯಾವಾಗ ಮಾಡಲಾಗುವುದು.	ಭಾರತೀಯ ಒಲಂಪಿಕ್ ಸಂಸ್ಥೆ ಹಾಗೂ ಕರ್ನಾಟಕ ಒಲಂಪಿಕ್ ಸಂಸ್ಥೆಯಿಂದ ಮಾಹಿತಿ ಕೋರಿದ್ದು, ವಿವರಗಳನ್ನು ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.
ಈ) ಈ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಅಗತ್ಯ ತಿದ್ದುಪಡಿಗೆ ಕ್ರಮ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಇದ್ದಲ್ಲಿ ಯಾವಾಗ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.	ಭಾರತೀಯ ಒಲಂಪಿಕ್ ಸಂಸ್ಥೆ ಹಾಗೂ ಕರ್ನಾಟಕ ಒಲಂಪಿಕ್ ಸಂಸ್ಥೆಯಿಂದ ಮಾಹಿತಿ ಕೋರಿದ್ದು, ವಿವರಗಳನ್ನು ಪಡೆದು ಪರಿಶೀಲಿಸಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
ಉ) ದಿ. ಶ್ರೀ ಪಡೆಪ್ಪಾ ಧರೆಪ್ಪಾ ಚೌಗುಲೆ ಇವರ ಸಾಧನೆಗೆ 100 ವರ್ಷಗಳು ತುಂಬಿದ್ದು, ಈ ಕುರಿತು ಶತಮಾನದ ಸಂಭ್ರಮೋತ್ಸವ ಆಚರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಹಾಗಿದ್ದಲ್ಲಿ ಯಾವಾಗ ಆಚರಿಸಲಾಗುವುದು.	ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಊ) ಇದುವರೆಗೆ ಪವನಾಂಜನೆಯ ದಿ. ಶ್ರೀ ಪಡೆಪ್ಪಾ ಧರೆಪ್ಪಾ ಚೌಗುಲೆ ಇವರು ಮಾಡಿರುವ ಸಾಧನೆಯನ್ನು ಗುರುತಿಸುವ ಕಾರ್ಯವನ್ನು ಯಾರಾದರೂ ಮಾಡಿದ್ದಾರೆಯೇ, ಹಾಗಿದ್ದಲ್ಲಿ ಯಾರು ಮಾಡಿದ್ದಾರೆ.? (ವಿವರ ನೀಡುವುದು).	ಪರಿಶೀಲಿಸಲಾಗುವುದು.

ವೈಎಸ್ ಡಿ- ಇಬಿಬಿ/124/2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 323

2. ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ. (ಆನೇಕಲ್)

3. ಉತ್ತರಿಸುವ ದಿನಾಂಕ : 08.12.2020

4. ಉತ್ತರಿಸುವ ಸಚಿವರು : ಮುಖ್ಯಮಂತ್ರಿ

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಗೆಜೆಟೆಡ್ ಪ್ರೋಬೇಷನರಿ 2015ನೇಯ ಸಾಲಿನ ಅಭ್ಯರ್ಥಿಗಳ ಅಂಕಗಳನ್ನು/ ದತ್ತಾಂಶಗಳನ್ನು ಹೊರಗುತ್ತಿಗೆ ಪಡೆದಿದ್ದ ಸಾಫ್ಟ್ ವೇರ್ ಸೇವಾ ಪೂರಕೈದಾರ ಕಂಪನಿಯ (TCS ION Company) ಸರ್ವರ್ ಮತ್ತು ಡೇಟಾಬೇಸ್ (MUSQL) ನಿಂದ ಮತ್ತೊಂದು ಸಂಸ್ಥೆಯ (NIC- Center for E-governance) ಹೊಸ ಸರ್ವರ್ ಮತ್ತು ಡೇಟಾಬೇಸ್ (MUSQL) ಏಕೆ ವರ್ಗಾಹಿಸಲಾಯಿತು; (ಪೂರ್ಣ ವಿವರ ನೀಡುವುದು)	ವರ್ಗಾಯಿಸಿರುವುದಿಲ್ಲ. ಇದು ಸತ್ಯಕ್ಕೆ ದೂರವಾಗಿದ್ದು, ಯಾವುದೇ ಹುರುಳಿರುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.
ಆ)	2015 ನೇ ಸಾಲಿನ ಗೆಜೆಟೆಡ್ ಪ್ರೋಬೇಷನ್ ಅಭ್ಯರ್ಥಿಗಳಿಗೆ ಅಂಕಗಳ ಪಟ್ಟಿಯನ್ನು ಡಿಜಿಟಲ್ ಮೌಲ್ಯ ಮಾಪನ ಹೊರಗುತ್ತಿಗೆ ಪಡೆದಿದ್ದ ಸಾಫ್ಟವೇರ್ ಸೇವಾ ಪೂರಕೈದಾರ ಕಂಪನಿಯ (TCS ION Company) ಡೇಟಾಬೇಸ್ (MUSQL) ನಿಂದ ನೀಡಲು ಏಕೆ ಸಾಧ್ಯವಾಗಿಲ್ಲ; (ಪೂರ್ಣ ಮಾಹಿತಿ ನೀಡುವುದು)	ಟಿ.ಸಿ.ಎಸ್. ಸಂಸ್ಥೆಯೊಂದಿಗಿನ ಒಪ್ಪಂದ ಕೇವಲ ಅಭ್ಯರ್ಥಿಗಳ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲು ತಂತ್ರಾಂಶವನ್ನು ಒದಗಿಸುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.
ಇ)	ಒಂದು ನಿಗದಿತ ಪರೀಕ್ಷೆಯ ಮೌಲ್ಯ ಮಾಪನಕ್ಕೆ ನಿರ್ದಿಷ್ಟ ಪಡಿಸಿದ್ದ ಸಂಸ್ಥೆಯಿಂದ ಮೌಲ್ಯ ಮಾಪನ ಮಾಡಿಸದೇ ಬೇರೊಂದು ಸಂಸ್ಥೆಯಿಂದ ಮೌಲ್ಯ ಮಾಪನ ಮಾಡಿಸಿದರೆ ಪರೀಕ್ಷಾ ಮೌಲ್ಯ ಮಾಪನದ ಪಾವಿತ್ರ್ಯತೆಗೆ ಕುಂದು ಉಂಟಾಗುವುದಿಲ್ಲವೇ; ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? (ಪೂರ್ಣ ವಿವರ ನೀಡುವುದು)	ಆಯೋಗವು 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿ ಸಂಬಂಧ ಹೊರಡಿಸಲಾದ ದಿನಾಂಕ: 12.05.2017ರ ಅಧಿಸೂಚನೆಯಲ್ಲಿ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ (Digital Evaluation) ಮಾಡಲಾಗುವುದು ಎಂದು ಅಧಿಸೂಚಿಸಿದೆ. ಈ ಅಧಿಸೂಚನೆಯನ್ನು ದಿನಾಂಕ: 25.05.2017ರ ಕರ್ನಾಟಕ ರಾಜ್ಯ ಪತ್ರದಲ್ಲಿಯೂ ಸಹ ಪ್ರಕಟಿಸಲಾಗಿರುತ್ತದೆ. ಆಯೋಗದಿಂದ ನಿರ್ದಿಷ್ಟಪಡಿಸಿದ ಸಂಸ್ಥೆಯಾದ ಟಿ.ಸಿ.ಎಸ್. ಸಂಸ್ಥೆಯಿಂದಲೇ ಸರ್ಕಾರದಿಂದ 4ಜಿ ವಿನಾಯಿತಿ (4G Exemption) ಪಡೆದು ಮೌಲ್ಯಮಾಪನ ಮಾಡಿಸಲಾಗಿರುತ್ತದೆ. ಆದ್ದರಿಂದ ಬೇರೊಂದು ಸಂಸ್ಥೆಯಿಂದ ಮೌಲ್ಯಮಾಪನ ಮಾಡಿಸಲಾಗಿರುವುದಿಲ್ಲ. ಇದು ಸತ್ಯಕ್ಕೆ ದೂರವಾಗಿದ್ದು, ಯಾವುದೇ ಹುರುಳಿರುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗವು ತಿಳಿಸಿರುತ್ತದೆ.

ಸಂಖ್ಯೆ: ಸಿಆಸುಇ 103 ಎಸ್‌ಎಸ್‌ಸಿ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	370
ಮಾನ್ಯ ಸದಸ್ಯರ ಹೆಸರು	ಶ್ರೀ ಭೀಮಾ ನಾಯ್ಕ ಎಸ್ (ಹಗರಿಬೊಮ್ಮನಹಳ್ಳಿ)
ಉತ್ತರಿಸಬೇಕಾದ ದಿನಾಂಕ	08-12-2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸ್ಥಳೀಯ ಶಾಸಕರ ಗಮನಕ್ಕೆ ತರದೇ ಎಂ.ಎಸ್.ಐ.ಎಲ್ ಮಳಿಗೆಗಳನ್ನು ಪ್ರಾರಂಭ ಮಾಡಲು ಸರ್ಕಾರ ಮುಂದಾಗಿರುವುದು ನಿಜವೇ;	ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 15 ಇಎಫ್‌ಎಲ್ 2015 ದಿ:23.09.2016 ರಲ್ಲಿ ರಾಜ್ಯದ 220 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 4 ಸನ್ನದುಗಳಂತೆ ಒಟ್ಟು 880, ಯಾದಗಿರಿ ಜಿಲ್ಲೆಯ ನಾಲ್ಕೂ ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 5 ರಂತೆ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್ 11-ಸಿ ಸನ್ನದುಗಳನ್ನು ಷರತ್ತುಗಳೊಂದಿಗೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಮಂಜೂರಾತಿ ನೀಡಲು ಸರ್ಕಾರವು ಅನುಮತಿ ನೀಡಿರುತ್ತದೆ. ಈ ಪೈಕಿ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 04 ಸಿಎಲ್-11ಸಿ ಸನ್ನದುಗಳನ್ನು ಮಂಜೂರು ಮಾಡಲು ಕೋಟಾ ಹಂಚಿಕೆಯಾಗಿದ್ದು, ಈ ಪೈಕಿ ಬಾಚಿಗೊಂಡನಹಳ್ಳಿ ಗ್ರಾಮ, ಮಲ್ಲನಾಯಕನಹಳ್ಳಿ ಮತ್ತು ಮರಿಯಮ್ಮನಹಳ್ಳಿ ಎಂಬ ಮೂರು ಸ್ಥಳಗಳಿಗೆ ಈಗಾಗಲೇ ಸಿಎಲ್-11ಸಿ ಸನ್ನದುಗಳನ್ನು ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗಿರುತ್ತದೆ. ಅಬಕಾರಿ ಆಯುಕ್ತರ ಸುತ್ತೋಲೆ ಸಂಖ್ಯೆ: ಇಸಿಐ/01/ಎಂಎಸ್‌ಐಎಲ್/ 2016 ದಿನಾಂಕ:07.11.2016 ರಲ್ಲಿ ಸಿಎಲ್-11ಸಿ ಸನ್ನದು ಸ್ಥಳ ಆರಿಸುವಾಗ ಸ್ಥಳೀಯ ಶಾಸಕರ ಹಾಗೂ ಜನಪ್ರತಿನಿಧಿಗಳ ಅಭಿಪ್ರಾಯಕ್ಕೆ ಮನ್ನಣೆ ನೀಡಬೇಕೆಂಬ ಸೂಚನೆಯನ್ನು ಸರ್ಕಾರದ ಪತ್ರ ಸಂಖ್ಯೆ: ಆಇ 22 ಇಎಫ್‌ಎಲ್ 2019. ದಿನಾಂಕ:30.03.2020 ರಲ್ಲಿ ಕೈಬಿಡುವಂತೆ ನಿರ್ದೇಶಿಸಲಾಗಿರುತ್ತದೆ.

ಆ)	ಹಾಗಿದ್ದಲ್ಲಿ, ಈ ಹಿಂದೆ ಮಳಿಗೆಗಳನ್ನು ಶಾಸಕರು ಸೂಚಿಸಿದ ಸ್ಥಳಗಳಲ್ಲಿ ತೆರೆಯಲಾಗುತ್ತಿದ್ದು, ಈ ಬಾರಿ ಇಲಾಖೆಯ ವರದಿ ಮೇಲೆ ಮಳಿಗೆಗಳನ್ನು ಪ್ರಾರಂಭ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಾದ ಕ್ರಮವೇ? (ವಿವರ ನೀಡುವುದು)	ಎಂ.ಎಸ್.ಐ.ಎಲ್ ಸಂಸ್ಥೆಯವರಿಗೆ ಸಿಎಲ್-11ಸಿ ಸನ್ನದು ಮಂಜೂರು ಮಾಡುವ ಪೂರ್ವದಲ್ಲಿ ಉದ್ದೇಶಿತ ಸನ್ನದು ಸ್ಥಳವು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 5 ರಡಿಯಲ್ಲಿ ಆಕ್ಷೇಪಣಾ ರಹಿತ ಸ್ಥಳದಲ್ಲಿದೆಯೇ/ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ಮುಕ್ತವಾಗಿರುತ್ತದೆಯೇ? ಹಾಗೂ ಸದರಿ ಸನ್ನದು ಮಂಜೂರಾತಿ ಕುರಿತು ಸಾರ್ವಜನಿಕರಿಂದಾಗಲೀ ಅಥವಾ ಸ್ಥಳೀಯ ಶಾಸಕರಿಂದಾಗಲೀ ಯಾವುದಾದರೂ ದೂರುಗಳು ಸ್ವೀಕೃತವಾಗಿರುತ್ತದೆಯೇ? ದೂರು ದಾಖಲಾಗಿದ್ದಲ್ಲಿ, ದೂರುದಾರರಿಗೆ ಹಿಂಬರಹ ನೀಡಲಾಗಿದೆಯೇ ಎಂಬ ಬಗ್ಗೆ ದೃಢಪಡಿಸಿಕೊಂಡ ನಂತರದಲ್ಲಿಯೇ ಸಿಎಲ್-11ಸಿ ಸನ್ನದುಗಳನ್ನು ಮಂಜೂರು ಮಾಡಲು ಪೂರ್ವಾನುಮತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಇ 106 ಇಎಲ್‌ಕ್ಯೂ 2020

(ಹೆಚ್.ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	72
ಮಾನ್ಯ ಸದಸ್ಯರ ಹೆಸರು	ಶ್ರೀ ಉಮಾನಾಥ.ಎ ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	08.12.2020
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಯವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ನಿಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಖ್ಯಾ ವಿವರ ನೀಡುವುದು)	ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 1519 ವಿದ್ಯಾರ್ಥಿ (ಬಾಲಕರು) ಹಾಗೂ 919 ಬಾಲಕಿಯರ (ವಿದ್ಯಾರ್ಥಿನಿಯರ) ಹೀಗೆ ಒಟ್ಟು 2438 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಜಿಲ್ಲಾವಾರು ವಿದ್ಯಾರ್ಥಿನಿಲಯಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸದರಿ ಹಾಸ್ಟೆಲ್ ಸೌಲಭ್ಯವನ್ನು ಬೇಡಿಕೆಗನುಗುಣವಾಗಿ ಒದಗಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು; ಸದರಿ ಜಿಲ್ಲೆಯಲ್ಲಿ ಬೇಡಿಕೆ ಸಲ್ಲಿಸಿರುವ ಮತ್ತು ಸೌಲಭ್ಯ ನೀಡಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು; (ವಿವರ ನೀಡುವುದು)	ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ, 3 ಬಾಲಕರ ಹಾಗೂ 2 ಬಾಲಕಿಯರ ಒಟ್ಟು 5 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಮಂಜೂರಾತಿಗೆ ಪ್ರಸ್ತಾವನೆ ಸ್ವೀಕೃತವಾಗಿದ್ದು ಆರ್ಥಿಕ ಇಲಾಖೆಯು ಈ ತರಹದ ಪ್ರಸ್ತಾವನೆಗಳನ್ನು ಪುರಸ್ಕರಿಸಲು ಸಾಧ್ಯವಿಲ್ಲ, ಆದ್ದರಿಂದ ಮುಂದಿನ ಆರ್ಥಿಕ ವರ್ಷದ ಆಯವ್ಯಯ ತಯಾರಿಕೆ ಸಮಯದಲ್ಲಿ ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕೆ ಆಯವ್ಯಯ ಒದಗಿಸಿಕೊಂಡು ನಂತರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಅಭಿಪ್ರಾಯಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ 2019-20ನೇ ಸಾಲಿಗೆ ಸಂಬಂಧಿಸಿದಂತೆ, ಅರ್ಜಿ ಸಲ್ಲಿಸಿರುವ ಮತ್ತು ಪ್ರವೇಶಾತಿ ಪಡೆದ ನಿಲಯಾರ್ಥಿಗಳ ವಿವರ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ಪ್ರವೇಶಾತಿ ವಿವರ	
		ಪ್ರವೇಶ ಕೋರಿ ಬಂದ ಅರ್ಜಿಗಳ ಸಂಖ್ಯೆ	ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ
1	ಬಂಟ್ವಾಳ	711	558
2	ಬೆಳ್ತಂಗಡಿ	1437	1026
3	ಮಂಗಳೂರು	3136	2341
4	ಪುತ್ತೂರು	720	579
5	ಸುಳ್ಯ	907	725
	ಒಟ್ಟು	**6911**	**5229**

...2

		ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆಯನುಸಾರ ವಿದ್ಯಾಸಿರಿ ಯೋಜನೆಯಡಿ ಪ್ರತಿ ಮಾಹೆ ರೂ.1500/- ರಂತೆ ಗರಿಷ್ಠ 10 ತಿಂಗಳಿಗೆ ರೂ.15,000/- ಗಳ ವಿದ್ಯಾರ್ಥಿವೇತನ ನೀಡಲಾಗುತ್ತದೆ.
ಇ)	ಈ ಜಿಲ್ಲೆಗೆ ಮಂಜೂರಾಗಿರುವ, ನಿರ್ಮಾಣ ಹಂತದಲ್ಲಿರುವ ನೂತನವಾಗಿ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲಿರುವ ಹಿಂದುಳಿದ ವರ್ಗಗಳ ಹಾಸ್ಟೆಲ್ ಗಳ ಕುರಿತಾದ ವಿವರಗಳೇನು;	ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ, ಒಟ್ಟು 11 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು ಮಂಜೂರಾಗಿದ್ದು, ಎಲ್ಲಾ 11 ಕಟ್ಟಡಗಳ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿದ್ದು, ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.
ಈ)	ಗ್ರಾಮೀಣ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಸೌಲಭ್ಯ ನೀಡಿಕೆಯಲ್ಲಿ ಆದ್ಯತೆ ನೀಡಲು ಸರ್ಕಾರದ ಕ್ರಮಗಳೇನು?	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳನ್ನು ಗ್ರಾಮೀಣ ಭಾಗದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅನುಕೂಲಕ್ಕಾಗಿ ಸ್ಥಾಪಿಸಲಾಗಿರುತ್ತದೆ. ಸದರಿ ವಿದ್ಯಾರ್ಥಿನಿಲಯಗಳಲ್ಲಿ ಈ ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ಹಾಗೂ ಆರ್ಥಿಕ ಅರ್ಹತೆಯ ಆಧಾರದ ಮೇಲೆ ಪ್ರವೇಶಾವಕಾಶವನ್ನು ಕಲ್ಪಿಸಲಾಗುತ್ತಿದೆ.

ಸಂಖ್ಯೆ:ಹಿಂವಕ 682 ಬಿಎಂಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಅನುಬಂಧ-1

ವಿಧಾನಸಭಾ ಸದಸ್ಯರಾದ ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.72 ಕ್ಕೆ

ಕ್ರ. ಸಂ.	ಜಿಲ್ಲೆಯ ಹೆಸರು	ವಿದ್ಯಾರ್ಥಿನಿಲಯಗಳ ವಿವರ		
		ಬಾಲಕರು	ಬಾಲಕಿಯರ	ಒಟ್ಟು
1	ಬಾಗಲಕೋಟೆ	54	28	82
2	ಬೆಂಗಳೂರು (ಗ್ರಾ)	21	11	32
3	ಬೆಂಗಳೂರು (ನಗರ)	25	26	51
4	ಬೆಳಗಾವಿ	114	42	156
5	ಬಳ್ಳಾರಿ	77	38	115
6	ಬೀದರ್	56	21	77
7	ಚಾಮರಾಜನಗರ	17	14	31
8	ಚಿಕ್ಕಬಳ್ಳಾಪುರ	38	20	58
9	ಚಿಕ್ಕಮಗಳೂರು	52	48	100
10	ಚಿತ್ರದುರ್ಗ	64	37	101
11	ದಕ್ಷಿಣ ಕನ್ನಡ	30	43	73
12	ದಾವಣಗೆರೆ	46	34	80
13	ಧಾರವಾಡ	37	30	67
14	ಗದಗ್	37	25	62
15	ಹಾಸನ	79	37	116
16	ಹಾವೇರಿ	47	28	75
17	ಕಲಬುರಗಿ	85	43	128
18	ಕೊಡಗು	22	16	38

19	ಕೋಲಾರ	37	23	60
20	ಕೊಪ್ಪಳ	43	24	67
21	ಮಂಡ್ಯ	72	37	109
22	ಮೈಸೂರು	62	30	92
23	ರಾಯಚೂರು	45	23	68
24	ರಾಮನಗರ	31	16	47
25	ಶಿವಮೊಗ್ಗ	69	63	132
26	ತುಮಕೂರು	72	41	113
27	ಉಡುಪಿ	21	20	41
28	ಉತ್ತರ ಕನ್ನಡ	58	43	101
29	ವಿಜಯಪುರ	65	36	101
30	ಯಾದಗಿರಿ	43	22	65
	ಒಟ್ಟು	**1519**	**919**	**2438**

ಅನುಬಂಧ-2

ವಿಧಾನಸಭಾ ಸದಸ್ಯರಾದ ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.72 ಕ್ಕೆ

ಕ್ರ.ಸಂ	ವಿದ್ಯಾರ್ಥಿನಿಲಯದ ವಿವರ	ಕಾಮಗಾರಿ ಮಂಜೂರಾದ ವರ್ಷ	ನಿರ್ಮಾಣ ಏಜೆನ್ಸಿ	ನಿರ್ಮಾಣದ ಹಂತ
1	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸುಂಕದಕಟ್ಟೆ ಮಂಗಳೂರು (BCWD450)	2015-16	ನಿರ್ಮಿತಿ ಕೇಂದ್ರ, ಎನ್.ಐ.ಟಿ.ಕೆ ಸುರತ್ಕಲ್	ಕಿಟಕಿ ಬಾಗಿಲು ಜೋಡಣೆ, ಪೈಟಿಂಗ್, ಪ್ಲಂಬಿಂಗ್, ಫ್ಲೋರಿಂಗ್ ಮತ್ತು ಎಲೆಕ್ಟ್ರಿಕ್ ಕಾಮಗಾರಿ ಪ್ರಗತಿಯಲ್ಲಿದೆ.
2	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಬಿ.ಸಿ ರೋಡ್, ಬಂಟ್ವಾಳ ತಾಲ್ಲೂಕು (BCWD 1849)	2019-20	ನಿರ್ಮಿತಿ ಕೇಂದ್ರ, ಎನ್.ಐ.ಟಿ.ಕೆ ಸುರತ್ಕಲ್	ನೆಲ ಸಮತಟ್ಟು ಕಾಮಗಾರಿ ಪ್ರಗತಿಯಲ್ಲಿದೆ.
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಪುಂಜಾಲಕಟ್ಟೆ, ಬೆಳ್ತಂಗಡಿ ತಾಲ್ಲೂಕು (BCWD 440)	2019-20	ನಿರ್ಮಿತಿ ಕೇಂದ್ರ, ಎನ್.ಐ.ಟಿ.ಕೆ ಸುರತ್ಕಲ್	ನೆಲ ಸಮತಟ್ಟು ಕಾಮಗಾರಿ ಪೂರ್ಣಗೊಂಡಿದ್ದು, ಫೌಂಡೇಶನ್ ಕಾಮಗಾರಿ ಪ್ರಗತಿಯಲ್ಲಿದೆ.
4	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಮಡಂತ್ಯಾರು, ಬೆಳ್ತಂಗಡಿ ತಾಲೂಕು (BCWD 1859)	2019-20	ನಿರ್ಮಿತಿ ಕೇಂದ್ರ, ಎನ್.ಐ.ಟಿ.ಕೆ ಸುರತ್ಕಲ್	ಫೌಂಡೇಶನ್ ಕಾಮಗಾರಿ ಪೂರ್ಣಗೊಂಡಿದ್ದು, ಪಿಲ್ಲರ್ ಕಾಮಗಾರಿ ಪ್ರಗತಿಯಲ್ಲಿದೆ.
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಧರೆಗುಡ್ಡೆ, ಮಂಗಳೂರು ತಾಲೂಕು (BCWD 444)	2018-19	ಲೋಕೋಪಯೋಗಿ ಇಲಾಖೆ	ಪಿಲ್ಲರ್ ಕಾಮಗಾರಿ ಪೂರ್ಣಗೊಂಡಿದ್ದು, ಬೀಮ್ ಕಾಮಗಾರಿ ಪ್ರಗತಿಯಲ್ಲಿದೆ.
6	ಮೆಟ್ರಿಕ್ ನಂತರದ ಮಹಿಳೆಯರ ವಿದ್ಯಾರ್ಥಿ ನಿಲಯ, ವಾಮದಪದವು, ಬಂಟ್ವಾಳ ತಾಲೂಕು (BCWD 1850)	2017-18	KRIES	ಕಾಮಗಾರಿ ಅಂತಿಮ ಹಂತದಲ್ಲಿದೆ.
7	ಮೆಟ್ರಿಕ್ ನಂತರದ ಮಹಿಳೆಯರ ವಿದ್ಯಾರ್ಥಿ ನಿಲಯ, ಚೆನ್ನೈತ್ತೋಡಿ, ಬಂಟ್ವಾಳ ತಾಲೂಕು (BCWD 1852)	2017-18	KRIES	ಕಾಮಗಾರಿ ಅಂತಿಮ ಹಂತದಲ್ಲಿದೆ.

8	ಮೆಟ್ರಿಕ್ ನಂತರದ ಮಹಿಳೆಯರ ವಿದ್ಯಾರ್ಥಿ ನಿಲಯ, ಬೆಳ್ತಂಗಡಿ ಕೇಂದ್ರಸ್ಥಾನ, ಬೆಳ್ತಂಗಡಿ ತಾಲೂಕು (BCWD 1862)	2017-18	KRIES	ಕಟ್ಟಡ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಪ್ಲಾಸ್ಟರಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.
9	ಮೆಡಿಕಲ್ ಮತ್ತು ಇಂಜಿನಿಯರಿಂಗ್ ಮೆಟ್ರಿಕ್ ನಂತರದ ಮಹಿಳೆಯರ ವಿದ್ಯಾರ್ಥಿ ನಿಲಯ, ಮಂಗಳೂರು (BCWD 1875)	2017-18	ಕರ್ನಾಟಕ ಗೃಹ ಮಂಡಳಿ	ಕಟ್ಟಡದ ಲಿಂಟಲ್ ಕಾಮಗಾರಿ ಪ್ರಗತಿಯಲ್ಲಿದೆ
10	ವೃತ್ತಿಪರ ಮೆಟ್ರಿಕ್ ನಂತರದ ಮಹಿಳೆಯರ ವಿದ್ಯಾರ್ಥಿ ನಿಲಯ, ಬಿಜೈ(ವಿಭಜನೆ), ಮಂಗಳೂರು (BCWD 1873)	2017-18	ಕರ್ನಾಟಕ ಗೃಹ ಮಂಡಳಿ	ಕಟ್ಟಡದ ಮೂರನೇ ಮಹಡಿಯ ಮೇಲ್ಛಾವಣಿ ಕಾಮಗಾರಿ ಪ್ರಗತಿಯಲ್ಲಿದೆ
11	ಮೆಟ್ರಿಕ್ ನಂತರದ ಮಹಿಳೆಯರ ವಿದ್ಯಾರ್ಥಿ ನಿಲಯ, ವಿಶ್ವವಿದ್ಯಾನಿಲಯ ಆವರಣ, ಕೊಣಾಜೆ, ಮಂಗಳೂರು (BCWD 1880)	2017-18	ಕರ್ನಾಟಕ ಗೃಹ ಮಂಡಳಿ	ಕಟ್ಟಡದ ಪ್ಲಿಂಥ್ ಕಾಮಗಾರಿ ಪೂರ್ಣಗೊಂಡಿದ್ದು, ಬೀಮ್ ಕಾಮಗಾರಿ ಪ್ರಗತಿಯಲ್ಲಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 62

ಸದಸ್ಯರ ಹೆಸರು : ಶ್ರೀ ಐಹೊಳೆ ಡಿ.ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸಬೇಕಾದ ದಿನಾಂಕ : 08.12.2020

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯ ಸರ್ಕಾರಿ ನೌಕರರು ಹಾಗೂ ಕೇಂದ್ರ ಸರ್ಕಾರಿ ನೌಕರರ ವೇತನದಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಕೇಂದ್ರ ಸರ್ಕಾರಿ ನೌಕರರಿಗೆ ಸಮಾನವಾದ ವೇತನವನ್ನು ರಾಜ್ಯ ಸರ್ಕಾರಿ ನೌಕರರಿಗೂ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ರಾಜ್ಯ ಸರ್ಕಾರವು ಸಾಂಪ್ರದಾಯಿಕವಾಗಿ ಕೇಂದ್ರ ವೇತನ ಆಯೋಗಗಳ ಶಿಫಾರಸ್ಸು ಹಾಗೂ ಕೇಂದ್ರ ವೇತನ ಪರಿಷ್ಕರಣೆಯ ಅವಧಿಯನ್ನು ಅನುಸರಿಸದೇ ತನ್ನದೇ ಆದ ವೇತನ ಆಯೋಗಗಳ / ವೇತನ ಸಮಿತಿಗಳ ಶಿಫಾರಸ್ಸಿನ ಮೇರೆಗೆ ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಿಕೊಂಡು ಬಂದಿರುತ್ತದೆ. ಕೇಂದ್ರ ಸರ್ಕಾರವು 10 ವರ್ಷಗಳ ಅಂತರದಲ್ಲಿ ಕೇಂದ್ರ ಸರ್ಕಾರಿ ನೌಕರರ ವೇತನ ಪರಿಷ್ಕರಣೆಯನ್ನು ಮಾಡುತ್ತಿದ್ದು, ರಾಜ್ಯ ಸರ್ಕಾರವು ತನ್ನ ನೌಕರರ ವೇತನ ಮತ್ತು ಭತ್ಯೆಗಳನ್ನು ಪ್ರತಿ 5 ರಿಂದ 6 ವರ್ಷಗಳ ಅವಧಿಯಲ್ಲಿ ಪರಿಷ್ಕರಿಸಿಕೊಂಡು ಬರುತ್ತಿದೆ. ಆದುದರಿಂದ, ಕೇಂದ್ರ ಸರ್ಕಾರದ ನಿಯಮಗಳು ಮತ್ತು ಕೇಂದ್ರ ವೇತನ ಆಯೋಗದ ಶಿಫಾರಸ್ಸುಗಳು ರಾಜ್ಯ ಸರ್ಕಾರದ ನೌಕರರಿಗೆ ಅನ್ವಯಿಸುವುದಿಲ್ಲ.
ಇ)	ಮುಂದಿನ ಆಯವ್ಯಯದಲ್ಲಿ ಈ ವಿಷಯವನ್ನು ಸೇರ್ಪಡೆಗೊಳಿಸಿ ರಾಜ್ಯ ಸರ್ಕಾರಿ ನೌಕರರಿಗೆ ಅನುಕೂಲ ಮಾಡಿಕೊಡಲಾಗುವುದೇ; ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಸಂ: ಆಇ 21 ಎಸ್‌ಆರ್‌ಪಿ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	309
ಸದಸ್ಯರ ಹೆಸರು	ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)
ಉತ್ತರಿಸಬೇಕಾದ ದಿನಾಂಕ	08.12.2020.
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ 2 ವರ್ಷಗಳ ಅವಧಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗಡಿನಾಡು ಅಭಿವೃದ್ಧಿ ಯೋಜನೆಯಲ್ಲಿ ಮಂಜೂರಾದ ಅನುದಾನವೆಷ್ಟು ಮತ್ತು ಹಂಚಿಕೆ ಮಾಡಲಾದ ಅನುದಾನವೆಷ್ಟು; (ವಿವರ ಒದಗಿಸುವುದು).	ಅ)2018-19ನೇ ಸಾಲಿನಲ್ಲಿ ಮಂಜೂರಾದ ಮೊತ್ತ ರೂ.3806.00ಲಕ್ಷಗಳು. ಇದರಲ್ಲಿ ರೂ.1000.00ಲಕ್ಷಗಳ ಆರ್ಥಿಕ ಇಲಾಖೆಯಿಂದ ಕಡಿತಗೊಳಿಸಲಾಗಿದ್ದರಿಂದ ರೂ.2806.00ಲಕ್ಷಗಳು ಹಂಚಿಕೆ ಮಾಡಲಾಗಿರುತ್ತದೆ. ಆ)2019-20ನೇ ಸಾಲಿನಲ್ಲಿ ಮಂಜೂರಾದ ಮೊತ್ತ ರೂ.7970.00ಲಕ್ಷಗಳು. ಇದರಲ್ಲಿ ರೂ.3019.00ಲಕ್ಷಗಳ ಆರ್ಥಿಕ ಇಲಾಖೆಯಿಂದ ಕಡಿತಗೊಳಿಸಲಾಗಿದ್ದರಿಂದ ರೂ.4942.75ಲಕ್ಷಗಳು ಹಂಚಿಕೆ ಮಾಡಲಾಗಿರುತ್ತದೆ.
ಆ)	2018-19ನೇ ಸಾಲಿನಲ್ಲಿ ಬಂಗಾರಪೇಟೆ ವಿಧಾನ ಸಭಾ ಕ್ಷೇತ್ರದ ಗಡಿ ಪ್ರದೇಶದಲ್ಲಿನ ಸಮುದಾಯ ಭವನ ನಿರ್ಮಾಣಕ್ಕಾಗಿ ಮಂಜೂರಾಗಿದ್ದ ಮೊತ್ತವನ್ನು ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ, ಬಂದಿರುವುದಿಲ್ಲ.
ಇ)	ತಡೆಹಿಡಿಯಲಾದ ಅನುದಾನವನ್ನು ಬಿಡುಗಡೆ ಮಾಡದಿರಲು ಕಾರಣವೇನು;	2018-19ನೇ ಸಾಲಿನಲ್ಲಿ ಸಮುದಾಯ ಭವನಕ್ಕಾಗಿ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಆದರೆ, 2019-20ನೇ ಸಾಲಿನಲ್ಲಿ ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಸಾಂಸ್ಕೃತಿಕ ಭವನ ನಿರ್ಮಿಸಲು ರೂ.100.00ಲಕ್ಷ ಅನುದಾನ ಮಂಜೂರು ಮಾಡಿ ರೂ.50.00ಲಕ್ಷ ಅನುದಾನವನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್ ವಿಭಾಗ, ಕೋಲಾರ ಜಿಲ್ಲೆ, ಇವರಿಗೆ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ, ಇವರ ಮುಖಾಂತರ 2019-20ನೇ ಸಾಲಿನಲ್ಲಿ ೧ನೇ ಕಂತಿನ ಅನುದಾನ ಪ್ರಾಧಿಕಾರದ ಖಾತೆಗೆ ಜಮಾ ಆದ ನಂತರ ಬಿಡುಗಡೆ ಮಾಡಲಾಗುವುದು ಎಂಬ ಷರತ್ತಿನ ಮೇಲೆ ಆದೇಶ ನೀಡಲಾಗಿತ್ತು. ಸದರಿ ಸಾಲಿನಲ್ಲಿ ಆರ್ಥಿಕ ಮಿತವ್ಯಯದ ಕಾರಣ ಅನುದಾನ ಕಡಿತಗೊಳಿಸಿರುವುದರಿಂದ ಅನುದಾನವನ್ನು ಈ ಕಾಮಗಾರಿಗೆ ಬಿಡುಗಡೆ ಮಾಡಿರುವುದಿಲ್ಲ.

ಈ)	ಸರ್ಕಾರದಿಂದ ತಡೆಹಿಡಿದಿರುವ ಹಣವನ್ನು ಬಿಡಗಡೆ ಮಾಡಲಾಗುವುದೇ? (ವಿವರಗಳನ್ನು ನೀಡುವುದು)	ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ:ಆಇ 02 ಟಿಎಫ್‌ಡಿ 2020, ದಿನಾಂಕ:04.05.2020 ಮತ್ತು 06.05.2020ರಂತೆ 2020-21ನೇ ಸಾಲಿನ ಕಾರ್ಯಕ್ರಮಗಳಿಗೆ ಆರ್ಥಿಕ ಮಿತವ್ಯಯ ಹಾಗೂ ನಿಬಂಧನೆಗಳು ಇರುವುದರಿಂದ ಸದರಿ ಕಾಮಗಾರಿಯ ಬಗ್ಗೆ ಮುಂದಿನ ಗಡಿ ಅಭಿವೃದ್ಧಿ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಚರ್ಚಿಸಿ ಅನುದಾನ ಲಭ್ಯತೆಯ ಆಧಾರದ ಮೇಲೆ ನಿಯಮಾನುಸಾರ ಪರಿಶೀಲಿಸಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು.

ಸಂಖ್ಯೆ: ಕಸಂವಾ 165 ಕೆಬಿಎಲ್ ಆಕ 2020.

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	367
ಸದಸ್ಯರ ಹೆಸರು	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
ಉತ್ತರಿಸಬೇಕಾದ ದಿನಾಂಕ	08.12.2020
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿನ ಕಛೇರಿಗಳಿಗೆ ಮಂಜೂರು ಮಾಡಲಾದ ಹುದ್ದೆಗಳ ಸಂಖ್ಯೆ ಎಷ್ಟು.	**ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೊಪ್ಪಳ ಜಿಲ್ಲಾ ಕಚೇರಿಗೆ ವಿವಿಧ ವೃಂದದ ಒಟ್ಟು 03 ಹುದ್ದೆಗಳು ಮಂಜೂರಾಗಿರುತ್ತದೆ. **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೊಪ್ಪಳ ಜಿಲ್ಲಾ ಕಚೇರಿಗೆ ವಿವಿಧ ವೃಂದದ ಒಟ್ಟು 08 ಹುದ್ದೆಗಳು ಮಂಜೂರಾಗಿರುತ್ತವೆ.
ಆ)	ಸದರಿ ಹುದ್ದೆಗಳಲ್ಲಿ ಭರ್ತಿ ಮಾಡಲಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು)	**ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಸಹಾಯಕ ನಿರ್ದೇಶಕರು -ಖಾಲಿ ಬೆರಳಚ್ಚುಗಾರರು -01 ಹುದ್ದೆ ಭರ್ತಿ ಮಾಡಲಾಗಿದೆ ದಲಾಯಿತ್ -ಖಾಲಿ **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ** ಸದರಿ ಹುದ್ದೆಗಳ ಪೈಕಿ 02 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಸಹಾಯಕ ನಿರ್ದೇಶಕರ 01 ಹುದ್ದೆಯನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿದೆ.

ಕ್ರ. ಸಂ.	ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1	ಸಹಾಯಕ ನಿರ್ದೇಶಕರು	01	--	01 (ಪ್ರಭಾರ)
2	ವಾರ್ತಾ ಸಹಾಯಕರು	01	--	01
3	ಪ್ರ.ದ.ಸ.	01	01	--
4	ಬೆರಳಚ್ಚುಗಾರರು	01	--	01
5	ವಾಹನ ಚಾಲಕರು	02	--	02
6	ಗ್ರೂಪ್ ಡಿ	02	02	--
	ಒಟ್ಟು	**08**	**03**	**05**

ಇ)	ಖಾಲಿ ಇರುವ ಹುದ್ದೆಗಳಿಂದಾಗಿ ಹಾಗೂ ಹೆಚ್ಚುವರಿ ಪ್ರಭಾರಿ ಅಧಿಕಾರಿಗಳಿಂದಾಗಿ ಸದರಿ ಕಛೇರಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಸಾಧ್ಯವಾಗದಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು	**ಕನ್ನಡ ಮತ್ತು ಸಂಸ್ಕೃತಿ ಇಲಾಖೆ** 1. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಳ್ಳಾರಿ ಜಿಲ್ಲೆ ಇವರನ್ನು ಕೊಪ್ಪಳ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಹುದ್ದೆಗೆ ಹೆಚ್ಚಿನ ಪ್ರಭಾರದಲ್ಲಿರಿಸಲಾಗಿದೆ. 2. ಎರಡು ಹುದ್ದೆ ಖಾಲಿ ಇದ್ದು, ಸಹಾಯಕ ನಿರ್ದೇಶಕರ 01 ಹುದ್ದೆಯನ್ನು ತುಂಬಲು ಕರ್ನಾಟಕ ಲೋಕಾಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕರ್ನಾಟಕ ಲೋಕಾಸೇವಾ ಆಯೋಗವು ಸದರಿ ಹುದ್ದೆಯ ಭರ್ತಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಿರುತ್ತದೆ. **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ** ಖಾಲಿ ಇರುವ ಗ್ರೂಪ್ ಸಿ ವೃಂದದ ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಪಡೆದು ಕಚೇರಿ ಕೆಲಸ ನಿರ್ವಹಿಸಲಾಗುತ್ತಿದ್ದು, ಕಚೇರಿಯಲ್ಲಿ ಬಾಹ್ಯ ಗುತ್ತಿಗೆಯಿಂದ ಪಡೆದಿರುವ ಸೇವೆಯನ್ನು ಹೊರತುಪಡಿಸಿ, ಖಾಲಿ ಇರುವ ಸಹಾಯಕ" ನಿರ್ದೇಶಕರು ಮತ್ತು ವಾರ್ತಾ ಸಹಾಯಕರ ಹುದ್ದೆಗಳನ್ನು ಭರ್ತಿಮಾಡುವ ಕುರಿತಾದ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಈ)	ಕಳೆದ ಕೆಲವು ತಿಂಗಳುಗಳಿಂದ ಕಲಾವಿದರುಗಳಿಗೆ ಮಾಶಾಸನವನ್ನೂ ಸಹ ಸಮರ್ಪಕವಾಗಿ ವಿತರಿಸದೇ ಇರುವ ವಿಷಯವನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣವೇನು;	**ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೊಪ್ಪಳ ಜಿಲ್ಲಾ ಸಹಾಯಕ ನಿರ್ದೇಶಕರ ಹುದ್ದೆಯು ಖಾಲಿ ಇದ್ದುದ್ದರಿಂದ ಸದರಿ ಹುದ್ದೆಗೆ ಶಿಕ್ಷಣ ಇಲಾಖೆಯ ಅಧಿಕಾರಿಯನ್ನು ಪ್ರಭಾರದಲ್ಲಿರಿಸಿ ಜಿಲ್ಲಾಧಿಕಾರಿ ಹಂತದಲ್ಲಿ ಕ್ರಮವಹಿಸಿದ್ದು, ಕೆಲಸ ಸಮರ್ಪಕವಾಗಿ ನಡೆಯದೇ ಇರುವುದರಿಂದ ತದನಂತರ ಇಲಾಖೆಯಿಂದ ಬಳ್ಳಾರಿ ಜಿಲ್ಲಾ ಸಹಾಯಕ ನಿರ್ದೇಶಕರನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ ಕಲಾವಿದರ ಮಾಸಾಶನವನ್ನು ನವೆಂಬರ್‌ವರೆಗೆ ಪಾವತಿಸಲು ಕ್ರಮವಹಿಸಲಾಗಿದೆ. **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ** ಅನ್ವಯಿಸುವುದಿಲ್ಲ.
ಉ)	ಸದರಿ ಕಛೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು?	**ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಕೊಪ್ಪಳ ಜಿಲ್ಲಾ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ: 01 **ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ** ಸದರಿ ಕಚೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಒಟ್ಟು : 02.

ಸಂಖ್ಯೆ: ಕಸಂವಾ 84 ಕಸನಿ 2020.

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮಾನ್ಯ ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 84
2. ಪ್ರಶ್ನೆ ಮಂಡಿಸಿರುವವರು : ಶ್ರೀ ಮಹದೇವ. ಕೆ
3. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು
4. ಉತ್ತರಿಸ ಬೇಕಾದ ದಿನಾಂಕ : 08/12/2020

ಪ್ರ. ಸಂ	ಪ್ರಶ್ನೆ	ಉತ್ತರ
01	ಕಳೆದ 2 ವರ್ಷಗಳಿಂದ ಇಲ್ಲಿಯವರೆಗೆ ಸಿಎಂಆರ್‌ಎಫ್ ಶಾಖೆಯಲ್ಲಿ ಎಷ್ಟು ರೋಗಿಗಳ ಕಡತಗಳು ವಿಲೇವಾರಿಯಾಗದೆ ಬಾಕಿ ಉಳಿದಿವೆ ?	ದಿನಾಂಕ : 01/12/2018 ರಿಂದ ದಿನಾಂಕ : 01/12/2020ರ ವರೆಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿ ಶಾಖೆಗೆ ಪರಿಹಾರ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಪೈಕಿ ಅಗತ್ಯ ಅತ್ಯಲ್ಪ ದಾಖಲೆಗಳೊಂದಿಗೆ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಪುರಸ್ಕರಿಸಿ ಸಕಾಲದಲ್ಲಿ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಿದೆ. ಅಗತ್ಯ ದಾಖಲೆಗಳು ಸಲ್ಲಿಕೆಯಾಗದ ಅಪೂರ್ಣ ಅರ್ಜಿಗಳ ಅರ್ಜಿದಾರರಿಗೆ ನಿಗಧಿತ ದಾಖಲೆಗಳನ್ನು ಸಲ್ಲಿಸುವಂತೆ ಪತ್ರ ಬರೆಯಲಾಗಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಯಾವುದೇ ಕಡತಗಳು ವಿಲೇವಾರಿಯಾಗದೆ ಬಾಕಿ ಉಳಿದಿರುವುದಿಲ್ಲ.
02	ರೋಗಿಗಳ ಬಾಕಿ ಉಳಿದಿರುವ ಕಡತಗಳನ್ನು ವಿಲೇವಾರಿ ಮಾಡಲು ಸರ್ಕಾರಕ್ಕಿರುವ ತೊಂದರೆಯೇನು ? ಹಾಗೂ ವಿಲೇವಾರಿಯಾಗದೆ ಬಾಕಿ ಇರುವ ಕಡತಗಳ ಮತ ಕ್ಷೇತ್ರವಾರು ವಿವರ ನೀಡುವುದು ?	ಉದ್ಭವಿಸುವುದಿಲ್ಲ
03	ಕಡತಗಳು ವಿಲೇವಾರಿಯಾಗದೆ ಧೂಳು ಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	ಉದ್ಭವಿಸುವುದಿಲ್ಲ
04	ಬಾಕಿ ಇರುವ ಕಡತಗಳು ವಿಲೇವಾರಿ ಸಾಧ್ಯವಾಗದಿರಲು ಕಾರಣ ನೀಡುವುದು ?	ಉದ್ಭವಿಸುವುದಿಲ್ಲ.
05	ಬಡ ರೋಗಿಗಳ ದಾಖಲೆ ಸರಿಯಿಲ್ಲ ಅಥವಾ ಅಗತ್ಯ ಪ್ರಮಾಣ ಪತ್ರವಿಲ್ಲವೆಂದು ಹಾಗೇ ಕಡತಗಳನ್ನು ಬಾಕಿ ಇಡದೇ ಸಾಧ್ಯವಾದಷ್ಟು ಪರಿಹಾರ ನೀಡಲು ಸರ್ಕಾರಕ್ಕಿರುವ ತೊಂದರೆಯೇನು ?	ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸರ್ಕಾರದ ವಾರ್ಷಿಕ ಆಯ-ವ್ಯಯದಲ್ಲಿ ಯಾವುದೇ ಅನುದಾನವನ್ನು ನಿಗಧಿಪಡಿಸಲಾಗಿರುವುದಿಲ್ಲ. ಸಾರ್ವಜನಿಕರು, ಸಂಘ-ಸಂಸ್ಥೆಗಳು, ನಿಗಮ-ಮಂಡಳಿಗಳು ನೀಡುವ ದೇಣಿಗೆಯಿಂದ ಕಡುಬಡಜನರ ವೈದ್ಯಕೀಯ ಚಿಕಿತ್ಸೆಗಾಗಿ ಅಥವಾ ಆರ್ಥಿಕ ಸಹಾಯಕ್ಕಾಗಿ ಸೂಕ್ತ ಪರಿಹಾರ ಒದಗಿಸಲಾಗುತ್ತಿದೆ. ಪರಿಹಾರ ಹಂಚಿಕೆ ಕಾರ್ಯದಲ್ಲಿ ಪಾರದರ್ಶಕತೆ, ಶಿಸ್ತು ಮತ್ತು ಸಮಾನತೆಯನ್ನು ಕಾಪಾಡುವ ದೃಷ್ಟಿಯಿಂದ ಪಾಲಿಸಬೇಕಾದ ನಿಯಮಗಳ ಬಗ್ಗೆ ಕಾಲಕಾಲಕ್ಕೆ ಸರ್ಕಾರದ ನಡವಳಿ ಮತ್ತು ಅಧಿಕೃತ ಜ್ಞಾಪನಗಳನ್ನು ಹೊರಡಿಸಲಾಗಿದೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಲ್ಲಿಸಲಾಗುವ ಅರ್ಜಿಯೊಂದಿಗೆ ಅತ್ಯಲ್ಪ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಲು ತಿಳಿಸಲಾಗಿದ್ದು, ಪರಿಹಾರ ವಿತರಿಸಲಾಗಿರುವ ಕಡತಗಳನ್ನು ಮಹಾಲೇಖಪಾಲಕರ ಅಧೀನದಲ್ಲಿ ಲೆಕ್ಕ-ಪತ್ರ ಪರಿಶೀಲನೆಗೆ ಒಳಪಡಿಸಬೇಕಾಗಿರುತ್ತದೆ. ದಾಖಲೆಗಳು ಸರಿಯಿಲ್ಲ ಅಥವಾ ಅಗತ್ಯ ಪ್ರಮಾಣ ಪತ್ರವಿಲ್ಲವೆಂದರೆ ನೈಜ ಫಲಾನುಭವಿಯನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯವಾಗುತ್ತದೆ ಹಾಗೂ ನಕಲಿ ಫಲಾನುಭವಿಗಳು ಸೃಷ್ಟಿಯಾಗಿ ಮೋಸ, ವಂಚನೆಗೆ ದಾರಿ ಮಾಡಿಕೊಟ್ಟಂತಾಗುತ್ತದೆ. ಈ ಹಿನ್ನೆಲೆಯಲ್ಲಿ ನಿಗಧಿತ ದಾಖಲೆಗಳನ್ನು ಸಲ್ಲಿಸದ ಪ್ರಕರಣಗಳಿಗೆ ಪರಿಹಾರ ನೀಡಲು ಸಾಧ್ಯವಾಗುವುದಿಲ್ಲ.

ಸಿಎಂ/143/ಸಿಎಂಆರ್‌ಎಫ್/ಜಿಇಎನ್/2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	348
ಮಾನ್ಯ ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ	08-12-2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹೊಸದಾಗಿ ಎಂ.ಎಸ್.ಐ.ಎಲ್ ಮದ್ಯ ಮಾರಾಟ ಮಳಿಗೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವಾಗ ಅನುಸರಿಸುವ ಮಾನದಂಡಗಳೇನು;	ರಾಜ್ಯದಲ್ಲಿ ಎಂ.ಎಸ್.ಐ.ಎಲ್ ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳು ಕೆಳಕಂಡಂತಿವೆ: i. ಎಂ.ಎಸ್.ಐ.ಎಲ್ ಮಳಿಗೆಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ-3(II-ಸಿ), 8, 8(ಎ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5ರ ಪ್ರಕಾರ ನಿಬಂಧನೆಗಳನ್ನು ಪಾಲಿಸಿ ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುವುದು. ii. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಇಎಫ್ಎಲ್ 2008 ದಿನಾಂಕ: 03.07.2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಠ 2 ರಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ. iii. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 15 ಇಎಫ್ಎಲ್ 2015 ದಿ:23.09.2016 ರಲ್ಲಿ ಕೆಳಕಂಡ ಷರತ್ತುಗಳ ಮೇಲೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 900 ಸನ್ನದುಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲು ಅನುಮೋದನೆ ನೀಡಲಾಗಿದೆ.

		• ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು. • ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು. • ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು. • ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕ ವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು. iv. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ 08 ಇಎಫ್‌ಎಲ್ 2020 ದಿ:08.09.2020 ರಲ್ಲಿ ಈಗಾಗಲೇ ಮಂಜೂರು ಮಾಡಿರುವ ಒಟ್ಟು 900 ಸನ್ನದುಗಳ ಪೈಕಿ ಬಾಕಿ ಉಳಿದಿರುವ 441 ಸನ್ನದುಗಳನ್ನು ಕೆಳಕಂಡ ಷರತ್ತುಗಳ ಮೇಲೆ ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. • ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

...3

		• ಸಿಎಲ್-11(ಸಿ) ಕೋಟಾದಲ್ಲಿನ ಬಾಕಿ ಇರುವ 441 ಜಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ದಿನಾಂಕ:31.12.2020 ರೊಳಗೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು. • ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೆ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳತಕ್ಕದ್ದು.
ಆ)	ತಾಲ್ಲೂಕು ವ್ಯಾಪ್ತಿ, ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಹಾಗೂ ಗ್ರಾಮೀಣ ಪ್ರದೇಶಗಳ ವ್ಯಾಪ್ತಿಗೆ ಪ್ರತ್ಯೇಕ ಮಾರ್ಗಸೂಚಿಗಳು ಇವೆಯೇ; ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು?	ತಾಲ್ಲೂಕು ವ್ಯಾಪ್ತಿ, ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಹಾಗೂ ಗ್ರಾಮೀಣ ಪ್ರದೇಶಗಳ ವ್ಯಾಪ್ತಿಗೆ ಪ್ರತ್ಯೇಕ ಮಾರ್ಗಸೂಚಿಗಳು ಇರುವುದಿಲ್ಲ. ಮೇಲಿನ ಉತ್ತರದಲ್ಲಿ ತಿಳಿಸಿರುವ ಮಾರ್ಗಸೂಚಿಗಳನ್ನೇ ಅನುಸರಿಸಲಾಗುತ್ತದೆ.

ಆಇ 103 ಇಎಲ್‌ಕ್ಯೂ 2020

(ಹೆಚ್.ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನ ಸಭೆ

(1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 70

(2) ಸದಸ್ಯರ ಹೆಸರು : ಶ್ರೀ ದೊಡ್ಡನಗೌಡ ಜಿ ಪಾಟೀಲ್ (ಹುನಗುಂದ)

(3) ಉತ್ತರಿಸಬೇಕಾದ ದಿನಾಂಕ : 08.12.2020

(4) ಉತ್ತರಿಸುವ ಸಚಿವರು : ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಪ್ರಶ್ನೆ		ಉತ್ತರ
(ಅ)	ಇಲಕಲ್ ಅನ್ನು ಹೊಸದಾಗಿ ತಾಲ್ಲೂಕು ಕೇಂದ್ರವೆಂದು ಘೋಷಣೆ ಮಾಡಲಾಗಿದ್ದು ಅಲ್ಲಿ ಹೊಸದಾಗಿ ಜೆ.ಎಂ.ಎಫ್.ಸಿ. ನ್ಯಾಯಾಲಯ ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು
ಆ)	ಹಾಗಿದ್ದಲ್ಲಿ, ಎಷ್ಟು ಕಿ.ಮೀ. ಕಾಲುವೆಯ ಆಧುನೀಕರಣ ನಡೆಯುತ್ತಿದೆ? (ಇದರ ಪೂರ್ಣ ವಿವರ ನೀಡುವುದು)	ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆ ಹಾಗೂ ಎಲ್.ಎಲ್.ಸಿ. ಕಾಲುವೆಗಳ ಆಧುನೀಕರಣ ಕಾಮಗಾರಿಗಳನ್ನು ನಂ.1, ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್ ಮತ್ತು ನಂ.6, ಕಾಲುವೆ ವಿಭಾಗ ಬಳ್ಳಾರಿ ಅಡಿಯಲ್ಲಿ ಕೈಗೊಳ್ಳಲಾಗುತ್ತಿದ್ದು, ವಿವರ ಕೆಳಕಂಡಂತಿದೆ. **<u>ನಂ.1, ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್:</u>** ಸದರಿ ವಿಭಾಗದಡಿಯಲ್ಲಿ ಆರ್.ಬಿ.ಹೆಚ್.ಎಲ್.ಸಿ. ಮತ್ತು ಆರ್.ಬಿ.ಎಲ್.ಎಲ್.ಸಿ. ವಿತರಣಾ ಕಾಲುವೆ ಒಟ್ಟು ಉದ್ದ 66.11 ಕಿ.ಮೀ.ಯಿದ್ದು, ಈ ಪೈಕಿ 55.55 ಕಿ.ಮೀ. ಸಿ.ಸಿ. ಲೈನಿಂಗ್ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಬಾಕಿ 10.56 ಕಿ.ಮೀ. ಸಿ.ಸಿ. ಲೈನಿಂಗ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. **<u>ನಂ.6, ಕಾಲುವೆ ವಿಭಾಗ, ಬಳ್ಳಾರಿ:</u>** ಸದರಿ ವಿಭಾಗದಡಿಯಲ್ಲಿ ಬರುವ ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆಗಳ ಆಧುನೀಕರಣ ಕಾಮಗಾರಿಯನ್ನು 02 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ವಿವರ ಕೆಳಗಿನಂತಿದೆ: **<u>ಪ್ಯಾಕೇಜ್–I</u>**: ಈ ಕಾಮಗಾರಿಯಲ್ಲಿ ವಿತರಣಾ ಕಾಲುವೆ 7, 8, 9, 10, 11, 12 & 13 ರ ಒಟ್ಟು ಉದ್ದ 271.47 ಕಿ.ಮೀ. ಯಿದ್ದು, ಸಿ.ಸಿ. ಲೈನಿಂಗ್ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಲಾಗಿದೆ. **<u>ಪ್ಯಾಕೇಜ್–II</u>**: ಈ ಕಾಮಗಾರಿಯಲ್ಲಿ ವಿತರಣಾ ಕಾಲುವೆ 14, 14ಎ, 15, 16 ಮತ್ತು 16ಎ ರ ಒಟ್ಟು ಉದ್ದ 273.77 ಕಿ.ಮೀ. ಯಿದ್ದು, ಸಿ.ಸಿ. ಲೈನಿಂಗ್ ಕಾಮಗಾರಿ ಕೈಗೊಂಡು ಪೂರ್ಣಗೊಳಿಸಲಾಗಿದೆ.

ಸಂಖ್ಯೆ:ಜಸಂಇ 152 ಎಂಎಲ್ಎ 2020

(ರಮೇಶ್ ಎಲ್. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	368
ಮಾನ್ಯ ಸದಸ್ಯರ ಹೆಸರು	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ)
ಉತ್ತರಿಸಬೇಕಾದ ದಿನಾಂಕ	08-12-2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಿನ ದರಕ್ಕೆ ಮದ್ಯ ಮಾರಾಟ ಮಾಡುತ್ತಿರುವ ವಿಷಯವಾಗಿ ಪ್ರಸಕ್ತ ಸಾಲಿನಲ್ಲಿ ಕೈಗೊಂಡ ಹಠಾತ್ ದಾಳಿಗಳ ಸಂಖ್ಯೆ ಎಷ್ಟು;	ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಿನ ದರಕ್ಕೆ ಮದ್ಯ ಮಾರಾಟ ಮಾಡುತ್ತಿರುವ ಸಂಬಂಧ 2020-21ನೇ ಅಬಕಾರಿ ಸಾಲಿನಲ್ಲಿ (ಜುಲೈಯಿಂದ ನವೆಂಬರ್‌ವರೆಗೆ) 14 ಸನ್ನದುಗಳ ಮೇಲೆ ಹಠಾತ್ ದಾಳಿ ಮಾಡಲಾಗಿದೆ.
ಆ)	ಸದರಿ ದಾಳಿಗಳ ಸಫಲತೆಯ ಪ್ರಮಾಣವೆಷ್ಟು; ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;	ಎಲ್ಲಾ 14 ಸನ್ನದುದಾರುಗಳ ವಿರುದ್ಧ ಎಮ್.ಆರ್.ಪಿ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಸದರಿ ಪ್ರಕರಣಗಳು ಇಲಾಖಾ ಮುಖಾಂತರ ದಂಡ ವಿಧಿಸಿ ಇತ್ಯರ್ಥಗೊಳಿಸಬಹುದಾದ ಪ್ರಕರಣಗಳಾಗಿರುತ್ತದೆ. ಈ 14 ಪ್ರಕರಣಗಳ ಪೈಕಿ 7 ಪ್ರಕರಣಗಳನ್ನು ಇತ್ಯರ್ಥಪಡಿಸಿ ಪ್ರತಿ ಪ್ರಕರಣದಲ್ಲಿ ಕನಿಷ್ಠ ರೂ. 15,000/-ರಿಂದ ಗರಿಷ್ಠ ರೂ.30,000/-ರ ವರೆಗೆ ದಂಡವನ್ನು ವಿಧಿಸಲಾಗಿರುತ್ತದೆ. ಹೀಗೆ ಒಟ್ಟು ರೂ 1,56,000/- ಗಳ ದಂಡ ವಸೂಲು ಮಾಡಲಾಗಿದ್ದು, ಉಳಿದ 07 ಪ್ರಕರಣಗಳು ಇನ್ನೂ ದಂಡ ವಿಧಿಸಿ ಇತ್ಯರ್ಥಗೊಳಿಸಲು ಬಾಕಿ ಇರುತ್ತದೆ.
ಇ)	ಈ ಜಿಲ್ಲೆಯಲ್ಲಿರುವ ಒಟ್ಟು ಮದ್ಯದಂಗಡಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)	ಜಿಲ್ಲೆಯಲ್ಲಿರುವ ಒಟ್ಟು ಮದ್ಯದಂಗಡಿಗಳ ತಾಲ್ಲೂಕುವಾರು ವಿವರಗಳು ಕೆಳಕಂಡಂತಿದೆ.

ತಾಲ್ಲೂಕು	ಸಿಎಲ್ -2	ಸಿಎಲ್ -4	ಸಿಎಲ್ -7	ಸಿಎಲ್ -9	ಸಿಎಲ್ -11[1]	WT/WB	ಒಟ್ಟು
ಕೊಪ್ಪಳ	11	2	15	11	7	4	56
ಗಂಗಾವತಿ	12	-	16	3	1	4	36
ಕಾರಟಗಿ	3	-	9	1	3	1	17
ಕನಕಗಿರಿ	3	-	2	1	-	4	10
ಕುಷ್ಟಗಿ	13	-	5	-	6	6	30
ಯಲಬುರ್ಗಾ	4	-	-	-	3	4	11
ಕುಕನೂರು	4	-	1	2	-	-	7
						ಒಟ್ಟು	167

...2

ಈ)	ಈ ಜಿಲ್ಲೆಯಲ್ಲಿ ಇನ್ನೂ ಹೆಚ್ಚಿನ ಮದ್ಯದಂಗಡಿಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರಕ್ಕೆ ಸ್ವೀಕೃತವಾಗಿವೆಯೇ; ಸ್ವೀಕೃತವಾಗಿದ್ದಲ್ಲಿ, ವಿವರಗಳನ್ನು ನೀಡುವುದು;	ಪ್ರಸ್ತುತ ಸಿಎಲ್–4, ಸಿಎಲ್–7 ಮತ್ತು ಸಿಎಲ್–11(ಸಿ) ಮದ್ಯದಂಗಡಿಗಳನ್ನು ತೆರೆಯಲು ಅವಕಾಶವಿರುತ್ತದೆ. ಸಿಎಲ್–4 ಮತ್ತು ಸಿಎಲ್–7 ಸನ್ನದುಗಳ ಮಂಜೂರಾತಿಗೆ ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಸರ್ಕಾರದ ನಿರ್ದೇಶನದನ್ವಯ ಸಿಎಲ್–11(ಸಿ) ಸನ್ನದುಗಳ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುತ್ತದೆ. 2009ರಲ್ಲಿ ಸರ್ಕಾರವು ಕೊಪ್ಪಳ ಜಿಲ್ಲೆಗೆ ಒಟ್ಟು 10 11(ಸಿ) ಸನ್ನದುಗಳನ್ನು ನಿಗಧಿಪಡಿಸಿದ್ದು, ಎಲ್ಲಾ ಸನ್ನದುಗಳನ್ನು ಮಂಜೂರು ಮಾಡಲಾಗಿದೆ. 2016ರಲ್ಲಿ ಕೊಪ್ಪಳ ಜಿಲ್ಲೆಗೆ 20 11(ಸಿ) ಸನ್ನದುಗಳನ್ನು ನಿಗಧಿಪಡಿಸಿದ್ದು, ಈ ಪೈಕಿ 11 ಸನ್ನದುಗಳನ್ನು ಈಗಾಗಲೇ ಮಂಜೂರು ಮಾಡಲಾಗಿರುತ್ತದೆ. ಉಳಿದ 9 ಸನ್ನದುಗಳ ಮಂಜೂರಾತಿಗೆ ಎಂ.ಎಸ್.ಐ.ಎಲ್ ಸಂಸ್ಥೆಯವರು ಪ್ರಸ್ತಾವನೆ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ.
ಉ)	ಸದರಿ ಜಿಲ್ಲೆಯಲ್ಲಿ ಹೊಸದಾಗಿ ಯಾವ ಯಾವ ಭಾಗದಲ್ಲಿ ಹೊಸ ಮದ್ಯದಂಗಡಿಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿಯನ್ನು ನೀಡುತ್ತಿದೆ? (ವಿವರ ನೀಡುವುದು)	ಸರ್ಕಾರವು ಸಿಎಲ್–11(ಸಿ) ಸನ್ನದು ಮಂಜೂರಾತಿಗೆ ಸಂಬಂಧಿಸಿದಂತೆ ಪ್ರತಿ ಮತಕ್ಷೇತ್ರಕ್ಕೆ 4 ರಂತೆ ಕೊಪ್ಪಳ ಜಿಲ್ಲೆಗೆ ಒಟ್ಟು 20 ಸನ್ನದುಗಳನ್ನು ನಿಗಧಿಪಡಿಸಿದ್ದು, ಈವರೆಗೆ 11 ಸನ್ನದುಗಳನ್ನು ಮಂಜೂರು ಮಾಡಲಾಗಿರುತ್ತದೆ. ಉಳಿದ 9 ಸನ್ನದುಗಳ ಮಂಜೂರಾತಿಗೆ ಎಂ.ಎಸ್.ಐ.ಎಲ್ ಸಂಸ್ಥೆಯವರು ಪ್ರಸ್ತಾವನೆ ಸಲ್ಲಿಸಿದಲ್ಲಿ, ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ. ಸಿಎಲ್–4 ಮತ್ತು ಸಿಎಲ್–7 ಸನ್ನದುಗಳ ಮಂಜೂರಾತಿಗೆ ಯಾವುದೇ ರೀತಿಯ ಭೌಗೋಳಿಕ ನಿರ್ಬಂಧ ಇರುವುದಿಲ್ಲ. ಅರ್ಜಿದಾರರು ಆಯ್ಕೆ ಮಾಡಿದ ಸ್ಥಳವನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.

ಆಇ 105 ಇಎಲ್‌ಕ್ಯೂ 2020

(ಹೆಚ್. ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 113

ಸದಸ್ಯರ ಹೆಸರು : ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು)

ಉತ್ತರಿಸುವ ದಿನಾಂಕ : 08.12.2020

ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ತುಂಗಭದ್ರಾ ನಾಲೆಗೆ ನವಲಿ ಸಮಾನಾಂತರ ಜಲಾಶಯದ ನಿರ್ಮಾಣದ ಕಾಮಗಾರಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿದೆಯೇ; ಹಾಗಿದ್ದಲ್ಲಿ ಯಾವಾಗ ನೀಡಲಾಯಿತು;	ತುಂಗಭದ್ರಾ ನಾಲೆಗೆ ನವಲಿ ಸಮಾನಾಂತರ ಜಲಾಶಯದ ನಿರ್ಮಾಣದ ಕಾಮಗಾರಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿರುವುದಿಲ್ಲ.
ಆ)	ಈ ಜಲಾಶಯದ ನಿರ್ಮಾಣಕ್ಕಾಗಿ ಸರ್ಕಾರ ನಿಗಧಿಪಡಿಸಿ, ಬಿಡುಗಡೆ ಮಾಡಿ ವೆಚ್ಚವಾಗಿರುವ ಮೊತ್ತವೆಷ್ಟು (ಸಂಪೂರ್ಣ ಮಾಹಿತಿ ನೀಡುವುದು)	ಆದಾಗ್ಯೂ, ತುಂಗಭದ್ರಾ ಜಲಾಶಯದಲ್ಲಿ ಸಂಗ್ರಹಣಾ ಸಾಮರ್ಥ್ಯದ ಸಮಸ್ಯೆ ನೀಗಿಸಲು ಪರ್ಯಾಯ ಮಾರ್ಗೋಪಯೋಗವಾಗಿ, ನವಲಿ ಗ್ರಾಮದ ಹತ್ತಿರ ಸಮತೋಲನಾ ಜಲಾಶಯ ನಿರ್ಮಿಸುವ ಸಲುವಾಗಿ ಸರ್ವೇ ಸಮೀಕ್ಷೆ ಕೈಗೊಳ್ಳಲು ರೂ.14.30 ಕೋಟಿ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ:16.05.2020 ರಂದು ನೀಡಲಾಗಿದೆ.
ಇ)	ನವಲಿ ಸಮಾನಾಂತರ ಜಲಾಶಯದ ನಿರ್ಮಾಣ ಹಂತದ ಕಾಮಗಾರಿಯು ಯಾವ ಹಂತದಲ್ಲಿದೆ; ಸದರಿ ಕಾಮಗಾರಿಯು ಸ್ಥಗಿತಗೊಂಡಿರುವುದು ನಿಜವೇ;	
ಈ)	ಹಾಗಿದ್ದಲ್ಲಿ, ಈ ಜಲಾಶಯ ನಿರ್ಮಾಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?	2020-21 ರ ಆಯವ್ಯಯದಲ್ಲಿ ಸದರಿ ಪ್ರಸ್ತಾವನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸುವ ಕಾಮಗಾರಿಗೆ ರೂ.20.00 ಕೋಟಿ ಅನುದಾನವನ್ನು ಒದಗಿಸುವ ಬಗ್ಗೆ ಘೋಷಣೆಯಾಗಿದ್ದು, ಯೋಜನೆಯ ಸರ್ವೇ ಕನ್ಸಲ್ಟೆನ್ಸಿ ಕಾಮಗಾರಿಯ ಟೆಂಡರ್ ಅಂತಿಮಗೊಂಡಿದ್ದು, ಸರ್ವೇ ಕಾರ್ಯ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ:ಜಸಂಇ 149 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	350
ಮಾನ್ಯ ಸದಸ್ಯರ ಹೆಸರು	ಶ್ರೀ ಕೃಷ್ಣ ಭೈರೇಗೌಡ (ಬ್ಯಾಟರಾಯನಪುರ)
ಉತ್ತರಿಸಬೇಕಾದ ದಿನಾಂಕ	08-12-2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 03 ವರ್ಷಗಳಲ್ಲಿ ಅಬಕಾರಿ ಸುಂಕ, ತೆರಿಗೆ ಹಾಗೂ ವಿವಿಧ ಶ್ರೇಣಿಯ ಮದ್ಯದ ಮೇಲಿನ ತೆರಿಗೆಗಳಿಂದ ಸರ್ಕಾರಕ್ಕೆ ಬಂದ ವಾರ್ಷಿಕ ಆದಾಯವೆಷ್ಟು; ಅಂತಹ ಆದಾಯಗಳು ಆ ವರ್ಷದ ರಾಜ್ಯ ಆಯವ್ಯಯದ ಶೇಕಡಾವಾರು ಪ್ರಮಾಣ ಎಷ್ಟು;	ಕಳೆದ ಮೂರು ವರ್ಷಗಳಿಂದ ಅಂದರೆ 2017-18 ರಿಂದ 2019-20 ರವರೆಗೆ ವಿವಿಧ ಮೂಲಗಳಿಂದ ಸಂಗ್ರಹಿಸಿದ ಅಬಕಾರಿ ರಾಜಸ್ವ ವಿವರಗಳು ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ಕ್ರ ಸಂ.	ಮೂಲ	2017-18	2018-19	2019-20
1	ಭಾರತೀಯ ತಯಾರಿಕಾ ಮದ್ಯ	15084.3	16894.83	17899.01
2	ಬಿಯರ್	2151.44	2396.29	3018.90
3	ಸನ್ನದು ಶುಲ್ಕ	597.03	616.77	620.89
4	ಇತರೆ	115.74	36.04	45.15
ಒಟ್ಟು ಅಬಕಾರಿ ರಾಜಸ್ವ		17,948.51	19,943.93	21,583.95
ರಾಜ್ಯ ಆಯವ್ಯಯದ ಗಾತ್ರ		1,86,561	2,18,488	2,34,153
ಶೇಕಡಾವಾರು ಪ್ರಮಾಣ		ಶೇ.9.6	ಶೇ.9.12	ಶೇ.9.21

....2

<table>
<tr>
<td>ಆ)</td>
<td>ಕಳೆದ 03 ವರ್ಷಗಳಲ್ಲಿ ಸರ್ಕಾರಕ್ಕೆ ಯಾವ ಮೂಲಗಳಿಂದ ಎಷ್ಟು ವರಮಾನ ಬಂದಿದೆ;</td>
<td>ಕಳೆದ ಮೂರು ವರ್ಷಗಳಲ್ಲಿ ಸರ್ಕಾರಕ್ಕೆ ಬಂದ ವರಮಾನ ಈ ಕೆಳಕಂಡಂತೆ ಇರುತ್ತದೆ.
(ರೂ.ಕೋಟಿಗಳಲ್ಲಿ)
<table>
<tr><th>ಕ್ರ ಸಂ</th><th>ವಿವರ</th><th>2017–18</th><th>2018–19</th><th>2019–20 ಮಹಾ ಲೇಖಪಾಲರು ಮಾರ್ಚ್ 2020ರ ಅಂತ್ಯಕ್ಕೆ ಸಲ್ಲಿಸಿರುವ ಲೆಕ್ಕ</th></tr>
<tr><td>1</td><td>ಸ್ವಂತ ತೆರಿಗೆ ರಾಜಸ್ವ</td><td>87130.38</td><td>96829.71</td><td>102362.79</td></tr>
<tr><td>2</td><td>ಸ್ವಂತ ತೆರಿಗೆಯೇತರ ರಾಜಸ್ವ</td><td>6476.53</td><td>6772.87</td><td>7681.47</td></tr>
<tr><td>3</td><td>ಕೇಂದ್ರ ಸರ್ಕಾರದ ತೆರಿಗೆ ಹಂಚಿಕೆ</td><td>31751.96</td><td>35894.83</td><td>30919.00</td></tr>
<tr><td>4</td><td>ಕೇಂದ್ರ ಸರ್ಕಾರದಿಂದ ಸಹಾಯಧನ(*)</td><td>21640.78</td><td>25481.25</td><td>34479.53</td></tr>
<tr><td></td><td>ಒಟ್ಟು</td><td>146999.65</td><td>164978.66</td><td>175442.79</td></tr>
</table>
(*) ಜಿಎಸ್‌ಟಿ ಪರಿಹಾರವು ಒಳಗೊಂಡಿರುತ್ತದೆ.</td>
</tr>
<tr>
<td>ಇ)</td>
<td>ಈ ಅವಧಿಯಲ್ಲಿ ಅಬಕಾರಿ ಆದಾಯದ ಮೇಲಿನ ಅವಲಂಬನೆ ಕ್ರಮೇಣ ಹೆಚ್ಚಾಗುತ್ತಾ ಬಂದಿದೆಯೇ;</td>
<td>ಇಲ್ಲ.</td>
</tr>
</table>

ಈ)	ಅಬಕಾರಿ ಆದಾಯ ವೃದ್ಧಿದರವು ಮುಂದಿನ ವರ್ಷಗಳಲ್ಲಿ ಕುಸಿಯುವ ಸಾಧ್ಯತೆಯಿದೆಯೇ;	ಅಬಕಾರಿ ಆದಾಯವು ಮದ್ಯ ಬಳಕೆಯ ಆಧಾರದ ಮೇಲೆ ಅವಲಂಬಿತವಾಗಿರುವುದರಿಂದ, ಅಬಕಾರಿ ಆದಾಯವು ಮುಂದಿನ ವರ್ಷಗಳಲ್ಲಿ ಕುಸಿಯುವ ಸಾಧ್ಯತೆ ಬಗ್ಗೆ ನಿರ್ದಿಷ್ಟವಾಗಿ ವ್ಯಾಖ್ಯಾನಿಸಲು ಸಾಧ್ಯವಾಗುವುದಿಲ್ಲ.
ಉ)	ಮದ್ಯದಿಂದ ಬರುವ ಆದಾಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸರ್ಕಾರವು ಮಧ್ಯಮ ಮತ್ತು ಧೀರ್ಘಾವಧಿಯ ಪರ್ಯಾಯಗಳನ್ನು ಆಲೋಚಿಸಿದೆಯೇ; ಅಂತಹ ಪರ್ಯಾಯಗಳು ಯಾವುವು?	ಇಲ್ಲ.

ಆಇ 104 ಇಎಲ್‌ಕ್ಯೂ 2020

(ಹೆಚ್.ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	340
ಸದಸ್ಯರ ಹೆಸರು	:	ಶ್ರೀ.ಈಶ್ವರ್ ಖಂಡ್ರೆ (ಭಾಲ್ಕಿ)
ಉತ್ತರಿಸುವ ದಿನಾಂಕ	:	08-12-2020
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಬಚಾವತ್ ಆಯೋಗದ ತೀರ್ಪಿನಂತೆ ಗೋದಾವರಿ ಕಣಿವೆಯಿಂದ ಬೀದರ್ ಜಿಲ್ಲೆಗೆ ಆದ ನೀರಿನ ಹಂಚಿಕೆ ಎಷ್ಟು; ಸದರಿ ಹಂಚಿಕೆಯ ಅನುಸಾರ ಈಗಾಗಲೇ ಬಳಕೆಯಾಗಿರುವ ಮತ್ತು ಬಳಕೆಯಾಗದ ಹಂಚಿಕೆ ಪ್ರಮಾಣವೆಷ್ಟು; (ವಿವರ ಒದಗಿಸುವುದು)</td><td>ಬಚಾವತ್ ಆಯೋಗವು (ಗೋದಾವರಿ ಜಲ ವಿವಾದ ನ್ಯಾಯಾಧಿಕರಣ) ಗೋದಾವರಿ ಜಲಾನಯನಕ್ಕೆ ಸಂಬಂಧಿಸಿದಂತೆ ಅಂತಿಮ ಆದೇಶದ ವರದಿ ಹಾಗೂ ಮುಂದುವರೆದ ಆದೇಶದ ವರದಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಆಗ ಸಣ್ಣ ನೀರಾವರಿ ಯೋಜನೆಗಳ ಅಡಿಯಲ್ಲಿ ಬಳಕೆಯಾಗುತ್ತಿರುವ 4.6 ಟಿಎಂಸಿ ನೀರಿನ ಪ್ರಮಾಣದೊಂದಿಗೆ ಹೆಚ್ಚುವರಿಯಾಗಿ 17.77 ಟಿಎಂಸಿ ನೀರನ್ನು ಹಂಚಿಕೆ ಮಾಡಲಾಗಿದೆ. ಒಟ್ಟಾರೆ 22.37 ಟಿಎಂಸಿ ಪ್ರಮಾಣದಷ್ಟು ನೀರನ್ನು ಕರ್ನಾಟಕ ರಾಜ್ಯವು ಉಪಯೋಗಿಸಬಹುದಾಗಿದೆ. ಗೋದಾವರಿ ನದಿ ಕಣಿವೆಯಲ್ಲಿ ಕರ್ನಾಟಕಕ್ಕೆ ದೊರೆತ ಪಾಲಿನಲ್ಲಿ ಯೋಜನಾವಾರು ಹಂಚಿಕೆಯಾಗಿರುವ ಪ್ರಮಾಣ ಈ ಕೆಳಗಿನಂತಿದೆ:
<table>
<tr><th>ಕ್ರ.ಸಂ</th><th>ಯೋಜನೆ</th><th>ನೀರಿನ ಪ್ರಮಾಣ</th></tr>
<tr><td>1</td><td>ಕಾರಂಜಾ</td><td>13.10 ಟಿಎಂಸಿ</td></tr>
<tr><td>2</td><td>ಚುಳ್ಕಿ ನಾಲಾ</td><td>01.17 ಟಿಎಂಸಿ</td></tr>
<tr><td>3</td><td>ಮಾಂಜ್ರಾ ಏತ ನೀರಾವರಿ</td><td>01.00 ಟಿಎಂ</td></tr>
<tr><td>4</td><td>ನಿಜಾಮ್ ಸಾಗರ್ ಕೆಳಗಿನ ಕರ್ನಾಟಕ ಭಾಗದ ಜಲಾನಯನ ಪ್ರದೇಶದಲ್ಲಿ</td><td>02.50 ಟಿಎಂಸಿ</td></tr>
<tr><td>5</td><td>ಸಣ್ಣ ನೀರಾವರಿ ಯೋಜನೆಗಳಿಂದ</td><td>04.60 ಟಿಎಂಸಿ</td></tr>
<tr><td colspan="2">ಒಟ್ಟು:-</td><td>22.37 ಟಿಎಂಸಿ</td></tr>
</table>
ಮಾಂಜ್ರಾ ಏತ ನೀರಾವರಿಗಾಗಿ 1.00 ಟಿ.ಎಂ.ಸಿ ನೀರನ್ನು ನಿಗಧಿಪಡಿಸಲಾಗಿತ್ತು. ಮಾಂಜ್ರಾ ಏತ ನೀರಾವರಿ ಯೋಜನೆ ಪ್ರಸ್ತಾವನೆಯನ್ನು ತಾಂತ್ರಿಕ ಸಲಹಾ ಸಮಿತಿಯ ಮುಂದೆ ಮಂಡಿಸಲಾಗಿ, ಸಮಿತಿಯು, ಪ್ರಸ್ತಾಪಿಸಿರುವ 1.00 ಟಿಎಂ.ಸಿ ಬದಲಾಗಿ, ಕಾರಂಜಾ ಯೋಜನೆಯ ವರದಿಯಲ್ಲಿ ಪ್ರಸ್ತಾಪಿಸಿರುವ ಬೆಳೆ-ನೀರು ಲೆಕ್ಕಾಚಾರವನ್ನು ಅವಲೋಕಿಸಿ, ಈ ಯೋಜನೆಯಲ್ಲಿ 9.30ಟಿ.ಎಂ.ಸಿ ನೀರು ಬಳಕೆಯನ್ನು ಅಂತಿಮಗೊಳಿಸಿರುವುದನ್ನು ಉಲ್ಲೇಖಿಸಿ, ಅದರಂತೆ 3.80 ಟಿಎಂಸಿ ಉಳಿದಿದ್ದು, ಇದನ್ನು ಸೇರಿಸಿಕೊಂಡು (1.00 +3.80) ಒಟ್ಟು 4.80 ಟಿಎಂಸಿ ನೀರನ್ನು ಮಾಂಜ್ರಾದಲ್ಲಿ ಈ ಕೆಳಗಿನಂತೆ ಉಪಯೋಗಿಸಿಕೊಳ್ಳಲು ಯೋಜಿಸಲಾಗಿರುತ್ತದೆ:</td></tr>
</table>

...2

ಕ್ರ ಸಂ	ಬ್ಯಾರೇಜ್ ಹೆಸರು	ನೀರಿನ ಬಳಕೆ (ಟಿ.ಎಂ.ಸಿ)
1	ಜೀರಗಿಹಾಳ್	0.78
2	ಮಾಣೀಕೇಶ್ವರ	0.78
3	ಹಾಲಹಳ್ಳಿ	2.46
4	ಚಂದಾಪುರ	0.78
ಒಟ್ಟು:-		**4.80**

ಆ)	2019–20ನೇ ಸಾಲಿನ ಆಯವ್ಯಯದಲ್ಲಿ ಮಾಂಜ್ರಾ ನದಿಯಿಂದ ಭಾಲ್ಕಿ ತಾಲ್ಲೂಕಿನ ಮೇಹಕರ್ ಗ್ರಾಮದ ಹತ್ತಿರದಿಂದ 1.0 TMC ನೀರು ಎತ್ತಿ ನೀರಾವರಿ ಕಲ್ಪಿಸುವ ಯೋಜನೆಗೆ ಮಂಜೂರಾತಿ ದೊರಕಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸದರಿ ಯೋಜನೆಯ ಅನುಷ್ಠಾನಕ್ಕೆ ಕ್ರಮ ಕೈಗೊಂಡಿರುವ ಹಂತದ ವಿವರ ಒದಗಿಸುವುದು;	ಹೌದು. 2019–20ನೇ ಸಾಲಿನ ಆಯವ್ಯಯದಲ್ಲಿನ ಘೋಷಣೆಯಂತೆ ಮಾಂಜ್ರಾ ನದಿಯಿಂದ ಭಾಲ್ಕಿ ತಾಲ್ಲೂಕಿನ ಮೇಹಕರ್ ಗ್ರಾಮದ ಹತ್ತಿರದಿಂದ 1.00 ಟಿ.ಎಂ.ಸಿ. ನೀರನ್ನೆತ್ತಿ ನೀರಾವರಿ ಕಲ್ಪಿಸುವ ಯೋಜನೆಗೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಪ್ರಸ್ತಾವನೆಯು ನಿಗಮದ ಪರಿಶೀಲನಾ ಹಂತದಲ್ಲಿರುತ್ತದೆ.
ಇ)	ಬೀದರ್ ಜಿಲ್ಲೆಯ ರೈತರ ಒಡನಾಡಿ ಮತ್ತು ಹಲವಾರು ನಗರ ಪಟ್ಟಣಗಳಿಗೆ ಕುಡಿಯುವ ನೀರಿಗಾಗಿ 7.69TMC ಸಾಮರ್ಥ್ಯದ ಕಾರಂಜಾ ಜಲಾಶಯವು ಅದರ ಜಲಾನಯನ ಪ್ರದೇಶದಲ್ಲಿ ಸುರಿಯುವ ಮಳೆಯ ಪ್ರಮಾಣದ ಅಭಾವದಿಂದ ಪ್ರತಿ ವರ್ಷ ಜಲಾಶಯ ತುಂಬದೇ ಇರುವುದು ಸರ್ಕಾರದ ಗಮನದಲ್ಲಿದೆಯೇ;	ಹೌದು, ಆದರೆ ಪ್ರಸಕ್ತ ಸಾಲಿನಲ್ಲಿ (2020–21) ಉತ್ತಮ ಮಳೆಯಾಗಿರುವುದರಿಂದ, ಸದರಿ ಜಲಾಶಯವು ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿರುತ್ತದೆ.
ಈ)	ಹಾಗಿದ್ದಲ್ಲಿ, ಶಾಶ್ವತ ಪರ್ಯಾಯ ವ್ಯವಸ್ಥೆಗಾಗಿ ಪಕ್ಕದ ಕೃಷ್ಣ ಕಣಿವೆಯಿಂದ ನೀರು ಎತ್ತಿ ಕಾರಂಜಾ ಜಲಾಶಯ ತುಂಬುವ ಯೋಜನೆಗೆ ಪ್ರಸ್ತಾನೆಗೆ ಸಿದ್ದಪಡಿಸಲಾಗಿದೆಯೇ?	ಕೃಷ್ಣಾ ನ್ಯಾಯಾಧೀಕರಣ–1 ಹಾಗೂ 2ರ ತೀರ್ಪಿನಲ್ಲಿ, ರಾಜ್ಯದ ಅಗತ್ಯತೆಗೆ ಅನುಗುಣವಾಗಿ ಕೃಷ್ಣಾ ಕಣಿವೆಗೆ ನೀರಿನ ಹಂಚಿಕೆ ಆಗಿರುವುದಿಲ್ಲ. ಕೃಷ್ಣಾ ಕಣಿವೆಯ ನೀರನ್ನು ಇತರೆ ಕಣಿವೆಗೆ ವರ್ಗಾಯಿಸಲು ಕೃಷ್ಣಾ ನ್ಯಾಯಾಧೀಕರಣ–1 ಹಾಗೂ 2ರ ತೀರ್ಪಿನಲ್ಲಿ, ಅವಕಾಶ ಇರುವುದಿಲ್ಲ. ಆದರೆ, ಗೋದಾವರಿ ಕೊಳ್ಳದ ಮಾಂಜ್ರಾ ನದಿಯಿಂದ ನೀರನ್ನೆತ್ತಿ ಕಾರಂಜಾ ಜಲಾಶಯವನ್ನು ತುಂಬಿಸುವ ಪ್ರಸ್ತಾವನೆಯು ನಿಗಮದ ಪರಿಶೀಲನಾ ಹಂತದಲ್ಲಿದ್ದು, ನೀರಿನ ಲಭ್ಯತೆ, ಹಂಚಿಕೆ ಮತ್ತು ತಾಂತ್ರಿಕ ಹಾಗೂ ಆರ್ಥಿಕ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ಯೋಜಿಸಲಾಗಿದೆ.

ಸಂಖ್ಯೆ:ಜಸಂಇ 148 ಎಂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 116
ಸದಸ್ಯರ ಹೆಸರು : ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ : 08.12.2020
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಚಿಕ್ಕಮಂಚಾಲಿ ಗ್ರಾಮದ ಹತ್ತಿರ ಸುಕ್ಷೇತ್ರ ಮಂತ್ರಾಲಯಕ್ಕೆ ಸಂಪರ್ಕ ಕಲ್ಪಿಸುವ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ನಿರ್ಮಾಣ ಕಾಮಗಾರಿಯು 2019-20 ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯಾಗಿದ್ದು, ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ;	ರಾಯಚೂರು ತಾಲ್ಲೂಕಿನ ವ್ಯಾಪ್ತಿಯಲ್ಲಿಯ ಚಿಕ್ಕಮಂಚಾಲಿ ಗ್ರಾಮದ ಹತ್ತಿರ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಲು 2019-20 ನೇ ಸಾಲಿನ ಆಯವ್ಯಯದಲ್ಲಿ ರೂ.50.00 ಕೋಟಿಗಳು ಘೋಷಿಸಲಾಗಿರುತ್ತದೆ. ಯೋಜನಾ ವರದಿಯನ್ನು ರೂ.50.00 ಕೋಟಿಗಳಿಗೆ ಸೀಮಿತಗೊಳಿಸಿ ಕೈಗೆತ್ತಿಕೊಳ್ಳಲು ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ.
ಆ)	2019-20ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ಎಷ್ಟು ಅನುದಾನವನ್ನು ಮೀಸಲಾಗಿರಿಸಿತ್ತು;	ಸದರಿ ಕಾಮಗಾರಿಯ ಯೋಜನಾ ವರದಿಯನ್ನು ರೂ.102.52 ಕೋಟಿಗಳ ಮೊತ್ತಕ್ಕೆ ಅಂದಾಜಿಸಲಾಗಿದ್ದು, ರೂ.50.00 ಕೋಟಿಗಳಿಗೆ ಸೀಮಿತಗೊಳಿಸಿದಲ್ಲಿ, ಯೋಜನೆಯನ್ನು ಅನುಷ್ಠಾನಗೊಳಿಸಲು ತಾಂತ್ರಿಕವಾಗಿ ಕಾರ್ಯಸಾಧ್ಯವಾಗುವುದಿಲ್ಲ.
ಇ)	ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಚಿಕ್ಕಮಂಚಾಲಿ ಗ್ರಾಮದ ಹತ್ತಿರ ಸುಕ್ಷೇತ್ರ ಮಂತ್ರಾಲಯಕ್ಕೆ ಸಂಪರ್ಕ ಕಲ್ಪಿಸುವ ರೂ.102.52 ಕೋಟಿಗೆ ಅಂದಾಜಿಸಿರುವ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ನಿರ್ಮಾಣ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತಾದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ:ಜಸಂಇ 153 ಎಂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 83
2. ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಮಹದೇವ.ಕೆ (ಪಿರಿಯಾಪಟ್ಟಣ)
3. ಉತ್ತರಿಸುವ ದಿನಾಂಕ : 08-12-2020
4. ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾ ಪಟ್ಟಣ ಕ್ಷೇತ್ರದಲ್ಲಿ ಅಗ್ನಿಶಾಮಕ ಠಾಣೆ ಯಾವ ವರ್ಷ ಪ್ರಾರಂಭವಾಗಿದೆ;	ಸರ್ಕಾರದ ಆದೇಶ ಸಂಖ್ಯೆ: ಒಇ 235 ಕಅಸೇ 2005, ದಿನಾಂಕ:26-10-2006 ರಲ್ಲಿ ಮಂಜೂರಾತಿ ನೀಡಿದ್ದು, ದಿನಾಂಕ:02-08-2008 ರಿಂದ ಕಾರ್ಯ ನಿರ್ವಹಿಸುತ್ತಿದೆ.
ಆ)	ಯಾವ ಮಾನದಂಡದ ಆಧಾರ ಮೇಲೆ ಅಗ್ನಿಶಾಮಕ ಉಪಠಾಣೆ ಸ್ಥಾಪನೆ ಮಾಡಲಾಗುತ್ತದೆ;	ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ಸಂಬಂಧಿಸಿದಂತೆ ಅಗ್ನಿಶಾಮಕ ಉಪಠಾಣೆ ಸ್ಥಾಪನೆಗಾಗಿ ಯಾವುದೇ ನಿರ್ದಿಷ್ಟ ಮಾನದಂಡವನ್ನು ನಿಗದಿಪಡಿಸಿರುವುದಿಲ್ಲ. ಆದರೆ, ಪ್ರಸ್ತುತ ಇಲಾಖೆಯಲ್ಲಿ Standing Fire Advisory Council (SFAC)ನ ಶಿಫಾರಸ್ಸಿನನ್ವಯ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.
ಇ)	ಈ ಕ್ಷೇತ್ರದ ಬೆಟ್ಟದಪುರದಲ್ಲಿ ಅಗ್ನಿಶಾಮಕ ಉಪಠಾಣೆ ಮಂಜೂರಾಗಿದೆಯೇ; (ಹಾಗಿದ್ದಲ್ಲಿ, ಪ್ರತಿ ಒದಗಿಸುವುದು)	ಪಿರಿಯಾಪಟ್ಟಣ ಮತಕ್ಷೇತ್ರ ವ್ಯಾಪ್ತಿಯ ಬೆಟ್ಟದಪುರದಲ್ಲಿ ಉಪ ಅಗ್ನಿಶಾಮಕ ಠಾಣೆ ಸ್ಥಾಪಿಸಲು ಜಿಲ್ಲಾಧಿಕಾರಿ, ಮೈಸೂರು ಇವರು ಸರ್ವೆ ನಂ.58 ರಲ್ಲಿ 01 ಎಕರೆ ಜಮೀನನ್ನು ಮಂಜೂರು ಮಾಡಿದ್ದು, ಈ ಪ್ರಸ್ತಾವನೆಯ ಸಂಬಂಧ ಆರ್ಥಿಕ ಇಲಾಖೆಯು ಪರಿಶೀಲಿಸಿ ಪಿರಿಯಾಪಟ್ಟಣದಲ್ಲಿ ಈಗಾಗಲೇ ಅಗ್ನಿಶಾಮಕ ಠಾಣೆ ಇರುವುದರಿಂದ ಹಾಗೂ ಕುಶಾಲನಗರದ ಅಗ್ನಿಶಾಮಕ ಠಾಣೆ ಸಮೀಪದಲ್ಲಿರುವುದರಿಂದ ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರ ಗ್ರಾಮದಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿರುತ್ತದೆ.
ಈ)	ಮಂಜೂರಾತಿ ನೀಡಲಾಗಿದ್ದಲ್ಲಿ ಇದುವರೆವಿಗೂ ಪ್ರಾರಂಭ ಮಾಡದಿರಲು ಕಾರಣವೇನು?	ಪ್ರಸ್ತುತ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಕಾಯ್ದೆ ಪ್ರಕಾರ ಒಂದು ಅಗ್ನಿಶಾಮಕ ಠಾಣೆಯಿಂದ ಇನ್ನೊಂದು ಅಗ್ನಿಶಾಮಕ ಠಾಣೆಗೆ 40ಕಿ.ಮೀ ಅಂತರವಿರಬೇಕೆಂದಿರುತ್ತದೆ. ಆದಾಗ್ಯೂ, ಮೈಸೂರು ಜಿಲ್ಲೆಯ ಬೆಟ್ಟದಪುರದಲ್ಲಿ ಉಪ ಅಗ್ನಿಶಾಮಕ ಠಾಣೆ ಸ್ಥಾಪನೆಗೆ ಮಂಜೂರಾಗಿರುವ ಸರ್ವೆ ನಂ.58 ರ 01 ಎಕರೆ ಜಮೀನಿನಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪನೆಯ ಸಂಬಂಧ Standing Fire Advisory Council (SFAC) ಮಾನದಂಡಗಳನ್ವಯ ಸದರಿ ಗ್ರಾಮದಲ್ಲಿ ಜನಸಂಖ್ಯೆ, ಕೈಗಾರಿಕಾ ಬೆಳವಣಿಗೆ, ಕಟ್ಟಡಗಳ ಸಂಖ್ಯೆ ಹಾಗೂ ಅಗ್ನಿ ಅನಾಹುತಗಳ ರಕ್ಷಣಾ ಕರೆಗಳ ಆಧಾರದ ಮೇರೆಗೆ ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು.

ಸಂಖ್ಯೆ: ಒಇ 206 ಎಸ್‌ಎಫ್‌ಬಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	75
ಮಾನ್ಯ ಸದಸ್ಯರ ಹೆಸರು	ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)
ಉತ್ತರಿಸಬೇಕಾದ ದಿನಾಂಕ	08-12-2020
ಉತ್ತರಿಸಬೇಕಾದವರು	ಅಬಕಾರಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟು ಎಂ.ಎಸ್.ಐ.ಎಲ್. ಮಳಿಗೆಗಳನ್ನು ತೆರೆಯಲಾಗಿದೆ; ಯಾವ ಯಾವ ಪ್ರದೇಶದಲ್ಲಿ ತೆರೆಯಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	ಕೊಡಗು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಅಂದರೆ ಜುಲೈ 2017 ರಿಂದ ಇಲ್ಲಿಯವರೆಗೆ ಎಂ.ಎಸ್.ಐ.ಎಲ್ ಸಂಸ್ಥೆಗೆ ಒಟ್ಟು 03 ಸಿಎಲ್-11ಸಿ ಸನ್ನದುಗಳನ್ನು ತೆರೆಯಲು ಪೂರ್ವಾನುಮತಿ ನೀಡಲಾಗಿದ್ದು ವಿವರಗಳು ಕೆಳಕಂಡಂತಿದೆ.

ಕ್ರಸಂ	ತಾಲ್ಲೂಕು	ಸ್ಥಳ / ಗ್ರಾಮ
1	ಮಡಿಕೇರಿ	ಕೊಣಂಜಗೇರಿ ಗ್ರಾಮ
2	ಸೋಮವಾರಪೇಟೆ	ಚೌಡ್ಲು ಗ್ರಾಮ
3	ವಿರಾಜಪೇಟೆ	ಬಿರುನಾಣಿ ಗ್ರಾಮ

ಕ್ರ ಸಂ	ಪ್ರಶ್ನೆ	ಉತ್ತರ
ಆ)	ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಅಕ್ರಮ ಮದ್ಯ ಮಾರಾಟ, ಕಳ್ಳಭಟ್ಟಿ ತಯಾರಿಕೆ ಸಂಬಂಧ ಎಷ್ಟು ಮೊಕದ್ದಮೆಗಳು ದಾಖಲಾಗಿವೆ	ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ, ಕಳ್ಳಭಟ್ಟಿ ತಯಾರಿಕೆ ಸಂಬಂಧ ದಾಖಲಿಸಿದ ಪ್ರಕರಣಗಳ ವಿವರಗಳು ಕೆಳಕಂಡಂತಿದೆ.

ಅಬಕಾರಿ ವರ್ಷ	ಅಕ್ರಮ ಮದ್ಯ ಮಾರಾಟದ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ	ಕಳ್ಳಭಟ್ಟಿ ತಯಾರಿಕೆ/ಮಾರಾಟ ಸಂಬಂಧ ದಾಖಲಿಸಿದ ಪ್ರಕರಣಗಳ ಸಂಖ್ಯೆ
2018-19	25	8
2019-20	4	33
2020-21 (ನವೆಂಬರ್ 2020 ವರೆಗೆ ವರೆಗೆ)	2	4
ಒಟ್ಟು	31	45

...2

ಇ)	ಈ ಅಕ್ರಮ ದಂಧೆ ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಪೂರ್ಣ ವಿವರ ನೀಡುವುದು)	ಇಲಾಖೆಯು ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಡೆಗಟ್ಟಲು ಅಬಕಾರಿ ಕಾಯ್ದೆ ಮತ್ತು ತತ್ಸಂಬಂಧ ನಿಯಮಗಳ ಜಾರಿಗೊಳಿಸುವಿಕೆ ಕ್ರಮಗಳನ್ನು ಚುರುಕುಗೊಳಿಸಿ ಅಂತಹವರ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 02 ತಿಂಗಳಿಗೊಮ್ಮೆ ನಡೆಯುವ ಸಮನ್ವಯ ಸಮಿತಿ ಸಭೆಯಲ್ಲಿ ಅಬಕಾರಿ ಅಕ್ರಮ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಅಬಕಾರಿ ಇಲಾಖೆಯ ಸಿಬ್ಬಂದಿಯು ಸದಾ ಕಾಲ ಜಾಗೃತರಾಗಿದ್ದು ನಿರಂತರ ಗಸ್ತು ಕಾರ್ಯ ನಡೆಸಿ, ಅಕ್ರಮವಾಗಿ ಮದ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಲಾಗಿದೆ. ರಾಜ್ಯಾದ್ಯಂತ ಕಳ್ಳಭಟ್ಟಿ ತಯಾರಿಕಾ ಕೇಂದ್ರಗಳ ಮೇಲೆ ವ್ಯವಸ್ಥಿತ ಅಬಕಾರಿ ದಾಳಿ ನಡೆಸಿ ಕಳ್ಳಭಟ್ಟಿ ತಯಾರಿಕೆ ಪತ್ತೆ ಹಚ್ಚುವ ಹಾಗೂ ತಡೆಗಟ್ಟುವ ನಿಟ್ಟಿನಲ್ಲಿ ನಿರಂತರ ಕಾರ್ಯಾಚರಣೆ ಹಮ್ಮಿಕೊಳ್ಳಲಾಗಿದೆ. ಕಳ್ಳಭಟ್ಟಿ ತಯಾರಿಕೆಗೆ ಬಳಸಲ್ಪಡುವ ಕಚ್ಚಾವಸ್ತುಗಳನ್ನು ಒದಗಿಸುವವರ ಮೇಲೂ ನಿಗಾ ಇಡಲಾಗಿದ್ದು, ಹಿಂದಿನ ಪ್ರಕರಣಗಳ ಪೂರ್ವಾಪರಾಧಿಗಳ ಚಲನ–ವಲನಗಳ ಬಗ್ಗೆ ಅಬಕಾರಿ ಗಸ್ತಿನ ವೇಳೆಯಲ್ಲಿ ನಿಗಾ ಇಡಲಾಗಿದೆ. ಸರ್ಕಾರಿ/ಅರಣ್ಯ ಪ್ರದೇಶಗಳಲ್ಲಿ ಕಳ್ಳಭಟ್ಟಿ ತಯಾರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸದರಿ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, ಅಕ್ರಮವೆಸಗದಂತೆ ಕ್ರಮ ಜರುಗಿಸಲಾಗಿದೆ.

ಆಇ 99 ಇಎಲ್‌ಕ್ಯೂ 2020

(ಹೆಚ್. ನಾಗೇಶ್)
ಅಬಕಾರಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	288
ಮಾನ್ಯ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್. ಡಿ.(ಹೊಳೇನರಸೀಪುರ)
ಉತ್ತರಿಸಬೇಕಾದ ದಿನಾಂಕ	08.12.2020
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು, ಹಳೇಕೋಟೆ ಹೋಬಳಿ, ಹರದನಹಳ್ಳಿ ಗ್ರಾಮದಲ್ಲಿ ಸರ್ಕಾರ ನೂತನವಾಗಿ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜನ್ನು ಮಂಜೂರು ಮಾಡಿದ್ದು, 2019-20ನೇ ಶೈಕ್ಷಣಿಕ ಸಾಲಿನಲ್ಲಿ ಬಿ.ಎ ಮತ್ತು ಬಿ.ಕಾಂ ಎರಡು ವಿಭಾಗಗಳನ್ನು ಪ್ರಾರಂಭಿಸಲಾಗಿರುತ್ತದೆ, ಕರ್ನಾಟಕ ವಿವಿಧ ಜಿಲ್ಲೆಗಳನ್ನು ಒಳಗೊಂಡಂತೆ ಹಾಸನ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ 37 ವಿದ್ಯಾರ್ಥಿನಿಯರು ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿದ್ದು, 2020-21ನೇ ಶೈಕ್ಷಣಿಕ ವರ್ಷದಲ್ಲಿ ಸುಮಾರು 200 ವಿದ್ಯಾರ್ಥಿನಿಯರು ಮತ್ತು 2021-22ನೇ ವರ್ಷದಲ್ಲಿ ಸುಮಾರು 500 ವಿದ್ಯಾರ್ಥಿನಿಯರು ಪ್ರವೇಶಾತಿ ಪಡೆಯುವ ಸಾಧ್ಯತೆಯಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಗ್ರಾಮೀಣ ಪ್ರದೇಶದ ಬಡತನದ ಹಿನ್ನೆಲೆಯಿರುವ ರೈತಾಪಿ ಮತ್ತು ಕಾರ್ಮಿಕ ಕುಟುಂಬದ ವಿದ್ಯಾರ್ಥಿನಿಯರು ಪ್ರವೇಶಕ್ಕಾಗಿ ಬರುವ ಸಾಧ್ಯತೆ ಇರುವುದರಿಂದ, ಹರದನಹಳ್ಳಿಯ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ 500 ಸಂಖ್ಯೆಯುಳ್ಳ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸರ್ಕಾರದ ಆದೇಶ ಸಂಖ್ಯೆ:ಇಡಿ 80 ಹೆಚ್ ಪಿ ಸಿ 2018, ದಿನಾಂಕ 14.9.2018ರಲ್ಲಿ ಹಾಸನ ಜಿಲ್ಲೆಯ, ಹೊಳೆನರಸೀಪುರ ತಾಲ್ಲೂಕು, ಹರದನಹಳ್ಳಿ ಗ್ರಾಮದಲ್ಲಿ ಮಾದರಿ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜನ್ನು ರೂ.15.00 ಕೋಟಿ ಅಂದಾಜಿನಲ್ಲಿ ಅಗತ್ಯವಿರುವ ಹುದ್ದೆಗಳ ಸಮೇತ ಉನ್ನತ ಶಿಕ್ಷಣ ಇಲಾಖೆಯಿಂದ ಮಂಜೂರು ಮಾಡಲಾಗಿರುತ್ತದೆ. ಉನ್ನತ ಶಿಕ್ಷಣ ಇಲಾಖೆಯಿಂದಲೇ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಹಾಗೂ 180 ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿನಿಲಯವನ್ನು ಹುದ್ದೆಗಳೊಂದಿಗೆ ಸ್ಥಾಪಿಸಲು ಆದೇಶಿಸಲಾಗಿರುವುದರಿಂದ, ವಸತಿಯುಕ್ತ ಕಾಲೇಜಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ ಮಂಜೂರು ಮಾಡುವ ಪ್ರಸ್ತಾವನೆ ಇಲಾಖೆಯ ಮುಂದೆ ಇರುವುದಿಲ್ಲ.

ಆ)	ಹಾಸನ ಜಿಲ್ಲೆ, ಹೊಳೆನರಸೀಪುರ ತಾಲ್ಲೂಕು, ಹಳೇಕೋಟೆ ಹೋಬಳಿ, ಹರದನಹಳ್ಳಿ ಗ್ರಾಮದಲ್ಲಿ ಅಗತ್ಯವಿರುವ 500 ಸಂಖ್ಯಾಬಲದ ವಿದ್ಯಾರ್ಥಿನಿಲಯವನ್ನು ಸ್ಥಾಪಿಸದೇ ಇದ್ದಲ್ಲಿ, ರಾಜ್ಯದ ವಿವಿಧ ಜಿಲ್ಲೆಗಳಿಂದ ಬರುವ ಗ್ರಾಮಾಂತರ ಪ್ರದೇಶದ ಬಡಕುಟುಂಬದ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಿನಾಂಕ 14.9.2018ರ ಸರ್ಕಾರದ ಆದೇಶದನ್ವಯ, ಸದರಿ ವಸತಿಯುಕ್ತ ಪ್ರಥಮ ದರ್ಜೆ ಕಾಲೇಜಿಗೆ ವಿದ್ಯಾರ್ಥಿನಿಲಯವನ್ನು ಶಿಕ್ಷಣ ಇಲಾಖೆಯಿಂದ ಪ್ರಾರಂಭಿಸಬೇಕಾಗಿರುತ್ತದೆ. ಪ್ರಸ್ತುತ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹೊಳೆನರಸೀಪುರ ತಾಲ್ಲೂಕಿನಲ್ಲಿ 815 ಸಂಖ್ಯಾಬಲವುಳ್ಳ 7 ಮೆಟ್ರಿಕ್-ನಂತರದ ಬಾಲಕರ ಹಾಗೂ 610 ಸಂಖ್ಯಾಬಲವುಳ್ಳ 5 ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ.
ಇ)	ಸದರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ 500 ಸಂಖ್ಯೆಯುಳ್ಳ ವಸತಿನಿಲಯವನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಆಯವ್ಯಯದ ಲಭ್ಯತೆಯನ್ನು ಅವಲಂಬಿಸಿರುತ್ತದೆ.

ಸಂಖ್ಯೆ:ಹಿಂವಕ 676 ಬಿಎಂಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

2	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ದಾಬಾಸ್‌ಪೇಟೆ, ನೆಲಮಂಗಲ ತಾಲ್ಲೂಕು.	2018-19	3.73	ನಿಲಯದ ಶೌಚಾಲಯಗಳಿಗೆ ಬಾಗಿಲು, ಕಿಟಕಿ ಬಾಗಿಲು ಮತ್ತು ಟೈಲ್ಸ್ ಅಳವಡಿಕೆ, ಸುಣ್ಣ ಬಣ್ಣ ಕಾಮಗಾರಿ.
3	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಎಲೆಕ್ಯಾತನಹಳ್ಳಿ, ನೆಲಮಂಗಲ ತಾಲ್ಲೂಕು.	2018-19	2.77	ನಿಲಯದ ಶೌಚಾಲಯಗಳಿಗೆ, ಕಿಟಕಿ ಬಾಗಿಲು ಮತ್ತು ಟೈಲ್ಸ್ ಅಳವಡಿಕೆ.
4	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ದಾಬಾಸ್‌ಪೇಟೆ, ನೆಲಮಂಗಲ ತಾಲ್ಲೂಕು.	2019-20	3.90	ಬಟ್ಟೆ ಹೊಗೆಯುವ ಕಲ್ಲುಗಳು, ಸಂಪ್ ದುರಸ್ಥಿ, ಧ್ವಜಸ್ತಂಭ, ಅಡುಗೆ ಕೋಣೆ ಹಾಗೂ ಆಹಾರದಾಸ್ತಾನು ಶೆಲ್ಫ್‌ಗಳು, ಶೌಚಾಲಯದಲ್ಲಿ ಟಾಯ್ಲೆಟ್ ಬೇಶನ್ಸ್, ನಿಲಯಕ್ಕೆ ಸುಣ್ಣ ಬಣ್ಣಕಾಮಗಾರಿ.
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಎಲೆಕ್ಯಾತನಹಳ್ಳಿ, ನೆಲಮಂಗಲ ತಾಲ್ಲೂಕು.	2019-20	3.90	ಬಟ್ಟೆ ಹೊಗೆಯುವ ಕಲ್ಲುಗಳು, ಸಂಪ್ ದುರಸ್ಥಿ, ಧ್ವಜಸ್ತಂಭ, ಅಡುಗೆ ಕೋಣೆ ಹಾಗೂ ಆಹಾರದಾಸ್ತಾನು ಶೆಲ್ಫ್‌ಗಳು, ಚಾಲಯದಲ್ಲಿ ಟಾಯ್ಲೆಟ್ ಬೇಶನ್ಸ್, ನಿಲಯಕ್ಕೆ ಸುಣ್ಣ ಬಣ್ಣಕಾಮಗಾರಿ.

ಈ)	ಈ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ಕಲ್ಯಾಣ ಇಲಾಖೆ ಯಿಂದ ಎಷ್ಟು ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ.	ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 09 ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ.
ಉ)	ನೆಲಮಂಗಲ ಕ್ಷೇತ್ರದಲ್ಲಿರುವ ಸಮುದಾಯ ಭವನಗಳ ಸಂಖ್ಯೆ ಎಷ್ಟು; ಪ್ರಗತಿಯಲ್ಲಿರುವ ಸಮುದಾಯ ಭವನಗಳ ಸಂಖ್ಯೆ ಎಷ್ಟು? ಪೂರ್ಣಗೊಂಡಿರುವ ಸಮುದಾಯ ಭವನಗಳ ಸಂಖ್ಯೆ ಎಷ್ಟು? (ಕಳೆದ ಮೂರು ವರ್ಷಗಳಿಂದ ವಿವರ ನೀಡುವುದು)	ನೆಲಮಂಗಲ ಕ್ಷೇತ್ರದಲ್ಲಿರುವ ಸಮುದಾಯ ಭವನಗಳ ಸಂಖ್ಯೆ-9 ಪ್ರಗತಿಯಲ್ಲಿರುವ ಸಮುದಾಯ ಭವನಗಳ ಸಂಖ್ಯೆ-4 ಹಾಗೂ ಪೂರ್ಣಗೊಂಡಿರುವ ಸಮುದಾಯ ಭವನಗಳ ಸಂಖ್ಯೆ-5 ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ	ಸಮುದಾಯ ಭವನ/ವಿದ್ಯಾರ್ಥಿನಿಲಯದ ಹೆಸರು	ಮಂಜೂರಾತಿ ವರ್ಷ	ಮಂಜೂರಾದ ಮೊತ್ತ	ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತ	ಕಟ್ಟಡದ ಕಾಮಗಾರಿ ಪ್ರಗತಿ ಹಂತ
1.	ಶ್ರೀ ಹಂಪಿ ಹೇಮಕೂಟ, ಶ್ರೀ ಗಾಯತ್ರಿ ಪೀಠ ಮಹಾ ಸಂಸ್ಥಾನ ಶಾಖೆ, ದೇವಾಂಗ ಮಠ, ಕೆಂಪಲಿಗನಹಳ್ಳಿ, ನೆಲಮಂಗಲ ತಾಲ್ಲೂಕು	2010-11	100.00	100.00	ಪೂರ್ಣ ಗೊಂಡಿದೆ
2.	ಶ್ರೀ ಮಹಾಲಕ್ಷ್ಮೀ ತಿಗಳರ ಮಹಾ ಸಂಸ್ಥಾನ ಶಿವಗಂಗೆ ನೆಲಮಂಗಲ ತಾಲ್ಲೂಕು	2012-13	100.00	100.00	ಪೂರ್ಣ ಗೊಂಡಿದೆ
3.	ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್, ನೆಲಮಂಗಲದ ಹತ್ತಿರ, ವೆಂಕಟಾಪುರ ಗ್ರಾಮ, ಬೆಂಗಳೂರು ಗ್ರಾಮಾಂತರ ಜಿಲ್ಲೆ.	2014-15	50.00	50.00	ಪೂರ್ಣ ಗೊಂಡಿದೆ
4.	ಶ್ರೀ ಹಂಪಿ ಹೇಮಕೂಟ, ಶ್ರೀ ಗಾಯತ್ರಿ ಪೀಠ ಮಹಾ ಸಂಸ್ಥಾನ ಶಾಖೆ, ದೇವಾಂಗ ಮಠ, ಕೆಂಪಲಿಂಗನಹಳ್ಳಿ, ನೆಲಮಂಗಲ ತಾಲ್ಲೂಕು	2015-16	90.00	90.00	ಪೂರ್ಣ ಗೊಂಡಿದೆ
5.	ದೇವಾಂಗ ಧರ್ಮಛತ್ರ ಟ್ರಸ್ಟ್ (ರಿ), ಶಿವಗಂಗೆ, ನೆಲಮಂಗಲ ತಾಲ್ಲೂಕು	2016-17	10.00	10.00	ಪೂರ್ಣ ಗೊಂಡಿದೆ

2.	ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ನೆಲಮಂಗಲ ಟೌನ್.	2018-19	171.52	171.52	ಕಾಮಗಾರಿ ಪೂರ್ಣಗೊಂಡಿರುತ್ತದೆ.
3.	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ನೆಲಮಂಗಲ ಟೌನ್.	2019-20	199.90	100.00	ಲಿಂಟಲ್ ಹಂತದ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಇ) ಕಳೆದ ಮೂರು ವರ್ಷಗಳಿಂದ ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಹಿಂದುಳಿದ ವರ್ಗಗಳ ಹಾಸ್ಟಲ್‌ಗಳ ರಿಪೇರಿ ಕಾಮಗಾರಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. (ಪೂರ್ಣ ಮಾಹಿತಿ ನೀಡುವುದು)

ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಹಿಂದುಳಿದ ವರ್ಗಗಳ ಹಾಸ್ಟಲ್‌ಗಳ ರಿಪೇರಿ ಕಾಮಗಾರಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ	ವಿದ್ಯಾರ್ಥಿನಿಲಯದ ಹೆಸರು	ಮಂಜೂರಾದ ವರ್ಷ	ಮಂಜೂರಾದ ಅನುದಾನ	ಕಾಮಗಾರಿಯ ಪ್ರಗತಿಯ ವಿವರ
1.	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ದಾಬಾಸ್‌ಪೇಟೆ, ನೆಲಮಂಗಲ ತಾಲ್ಲೂಕು.	2017-18	8.75	ವಿದ್ಯಾರ್ಥಿನಿಲಯದ ಚರಂಡಿ ದುರಸ್ಥಿ, ನೆಲಮಹಡಿ ದುರಸ್ಥಿ, ವಾಟರ್ ಪ್ಯೂರಿಫಯರ್ ಕಾಮಗಾರಿ, ಶೌಚಾಲಯದ ಪಿಟ್ ಗುಂಡಿ ದುರಸ್ಥಿ ಕಾಮಗಾರಿ, ನಿಲಯಕ್ಕೆ ಸುಣ್ಣ ಬಣ್ಣ ಕಾಮಗಾರಿ.

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	361
ಮಾನ್ಯ ಸದಸ್ಯರ ಹೆಸರು	ಶ್ರೀ ಶ್ರೀನಿವಾಸಮೂರ್ತಿ ಕೆ.ಡಾ|| (ನೆಲಮಂಗಲ)
ಉತ್ತರಿಸಬೇಕಾದ ದಿನಾಂಕ	08.12.2020
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಕಳೆದ ಮೂರು ವರ್ಷಗಳಿಂದ ಎಷ್ಟು ಅನುದಾನ ಹಂಚಿಕೆ ಮಾಡಲಾಗಿದೆ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಅನುದಾನ ಬಳಕೆ ಮಾಡಲಾಗಿದೆ;(ಪೂರ್ಣ ವಿವರ ನೀಡುವುದು)</td><td>ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ಈ ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ನಿರ್ಮಾಣಗೊಂಡ ಹಾಸ್ಟಲ್‌ಗಳ ಸಂಖ್ಯೆ ಎಷ್ಟು? ಯಾವ ಯಾವ ಹಾಸ್ಟಲ್ ಗಳಿಗೆ ಎಷ್ಟೆಷ್ಟು ಅನುದಾನ ಮಂಜೂರು ಮಾಡಲಾಗಿದೆ. (ವಿವರ ನೀಡುವುದು)</td><td>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ನಿರ್ಮಾಣಗೊಂಡ ಹಾಸ್ಟೆಲ್‌ಗಳ ಸಂಖ್ಯೆ-3, ಮಂಜೂರು ಮಾಡಲಾದ ಹಾಸ್ಟೆಲ್‌ಗಳ ಅನುದಾನದ ವಿವರಗಳು ಈ ಕೆಳಕಂಡಂತಿವೆ.

(ರೂ.ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ವಿದ್ಯಾರ್ಥಿನಿಲಯದ ಹೆಸರು</th><th>ಮಂಜೂರಾದ ವರ್ಷ</th><th>ಮಂಜೂರಾದ ಅನುದಾನ</th><th>ಬಿಡುಗಡೆ ಯಾದ ಅನುದಾನ</th><th>ಕಾಮಗಾರಿಯ ಪ್ರಗತಿಯ ವಿವರ</th></tr>
<tr><td>1.</td><td>ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ನೆಲಮಂಗಲ ಟೌನ್.</td><td>2017-18</td><td>325.00</td><td>325.00</td><td>ನಾಲ್ಕು ಅಂತಸ್ತಿನ ಕಾಮಗಾರಿ ಪೂರ್ಣಗೊಂಡಿದ್ದು, ಪ್ಲಾಸ್ಟರಿಂಗ್ ಕಾರ್ಯ ಪ್ರಗತಿಯಲ್ಲಿರುತ್ತದೆ.</td></tr>
</table></td></tr>
</table>

ಜಿಲ್ಲಾ ವಲಯ								
1	ನೆಲಮಂಗಲ	ವಿದ್ಯಾರ್ಥಿನಿಲಯಗಳ ನಿರ್ವಹಣೆ 2225-00-103-0-26	90.96	90.96	99.75	92.57	99.82	96.10
ತಾಲ್ಲೂಕು ಪಂಚಾಯಿತಿ								
1	ನೆಲಮಂಗಲ	ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು 2225-00-103-0-74	8.46	6.06	6.26	2.51	6.50	2.50
2		ವಿದ್ಯಾರ್ಥಿನಿಲಯಗಳಲ್ಲಿರುವವರಿಗೆ ಪ್ರೋತ್ಸಾಹಕ 2225-00-103-0-79	1.77	0.18	2.00	0.50	2.23	0.92
3		ಹಿಂದುಳಿದ ವರ್ಗಳ ವಿದ್ಯಾರ್ಥಿವೇತನ 2225-00-103-0-66	28.00	27.98	29.00	29.00	35.45	34.00
4		ವಿದ್ಯಾರ್ಥಿನಿಲಯಗಳ ಸುಧಾರಣೆ 2225-00-103-0-72	6.25	6.25	4.75	4.75	7.50	7.50

(ಕೆ.ಅಶ್ವತ್ಥ)
ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ),
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಶ್ರೀನಿವಾಸಮೂರ್ತಿ ಕೆ. ಡಾ|| (ನೆಲಮಂಗಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:361ಕ್ಕೆ ಅನುಬಂಧ

ಕ್ರ.ಸಂ	ತಾಲ್ಲೂಕು/ವಿಧಾನಸಭಾ ಕ್ಷೇತ್ರದ ಹೆಸರು	ಯೋಜನೆ/ಲೆಕ್ಕ ಶೀರ್ಷಿಕೆ	2017-18		2018-19		2019-20	
			ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
		ರಾಜ್ಯ ವಲಯ						
1	ನೆಲಮಂಗಲ	ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಕಛೇರಿಗಳು 2225-03-277-3-11	2.93	2.93	3.50	3.50	9.09	9.09
2		ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮತ್ತು ನಿರ್ವಹಣೆ 2225-03-277-2-53	47.28	47.28	33.78	33.78	30.27	30.26
3		ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕೇಂ.ಪು.ಯೋ 2225-03-277-2-52	23.95	23.95	31.49	31.49	35.92	34.92
4		ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರ ವಿದ್ಯಾರ್ಥಿವೇತನಕೇಂ.ಪು.ಯೋ 2225-03-277-2-51	15.50	15.50	22.71	22.71	9.51	7.66
5		ಅಲೆಮಾರಿ/ ಅರೆ ಅಲೆಮಾರಿ ಅಭಿವೃದ್ಧಿ ಯೋಜನೆ 2225-03-102-0-12	2.69	2.69	12.01	12.01	10.46	8.52
6		ತರಬೇತಿ, ಅರಿವು ಮತ್ತು ಪ್ರೋತ್ಸಾಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ 2225-03-277-2-37	0.00	0.00	0.40	0.40	0.00	0.00
		ವಿವಿಧ ಸಮುದಾಯಗಳ ಅಭಿವೃದ್ಧಿ 2225-03-001-0-05	222.50	222.50	10.00	10.00	-	-
8		ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ಯೋಜನೆ 2225-03-102-0-12	-	-	100.00	100.00	57.00	57.00
9		ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ 4225-03-277-2-06	30.00	30.00	171.52	171.52	169.9	169.9

		6	ನೆಲಮಂಗಲ ತಾಲ್ಲೂಕು ಕುರುಬರ ಸಂಘ. (ರಿ) ನಂ.3798 ಕಾಳಿದಾಸ ಮಾರ್ಗ, ಪರ್ವತಪ್ಪ ಲೇಔಟ್ ಗಾಂಧಿನಗರ, ಬೈಪಾಸ್ ರಸ್ತೆ, ನೆಲಮಂಗಲ	2017-18	25.00	6.25	ಕಾಮಗಾರಿ ಪ್ರಗತಿಯಲ್ಲಿದೆ.
		7	ಶ್ರೀ ವನಕಲ್ಲು ಮಹಾ ಸಂಸ್ಥಾನ ಮಠ ಟ್ರಸ್ಟ್, (ರಿ) ಶ್ರೀ ವಜ್ರಕಲ್ಲು ಮಲ್ಲೇಶ್ವರ ಕ್ಷೇತ್ರ, ಹೆಗ್ಗುಂದ ಅಂಚೆ, ಸೋಂಪುರ ಹೋಬಳಿ ನೆಲಮಂಗಲ ತಾಲ್ಲೂಕು	2017-18	35.00	8.75	ಕಾಮಗಾರಿ ಪ್ರಗತಿಯಲ್ಲಿದೆ.
		8	ಶ್ರೀ ಹಿರೇಮಠ ಶಾಖೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಹಳೇ ನಿಜಗಲ್ಲು ಗ್ರಾಮದಲ್ಲಿ ಸಮುದಾಯಭವನ ಕಟ್ಟಡ ನಿರ್ಮಾಣ	2017-18	200.00	100.00	ಕಾಮಗಾರಿ ಪ್ರಗತಿಯಲ್ಲಿದೆ.
		9	ಶ್ರೀ ಬೀರೇಶ್ವರ ಸ್ವಾಮಿ ದೇವಸ್ಥಾನ, ಅಭಿವೃದ್ಧಿ ಸೇವಾ ಸಮಿತಿ(ರಿ), ದೇವಾಂಗ ರಸ್ತೆ, ನೆಲಮಂಗಲ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.	2014-15	70.00	65.00	ಕಾಮಗಾರಿ ಪ್ರಗತಿಯಲ್ಲಿದೆ.

ಸಂಖ್ಯೆ:ಹಿಂವಕ 675 ಬಿಎಂಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 317
ಉತ್ತರಿಸಬೇಕಾದ ದಿನಾಂಕ : 08/12/2020
ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ನೊಂದಾಯಿತ ಯುವಕ ಮತ್ತು ಯುವತಿಯರ ಸಂಘಗಳಿವೆ (ತಾಲ್ಲೂಕುವಾರು, ಸಂಘವಾರು ಮಾಹಿತಿ ನೀಡುವುದು);	ಶಿವಮೊಗ್ಗ ಜಿಲ್ಲೆಯ 07 ತಾಲ್ಲೂಕಿನಲ್ಲಿ ಒಟ್ಟು 147 ಯುವಕ ಮತ್ತು ಯುವತಿ ಮಂಡಳಿಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೊಂದಾವಣೆಗೊಂಡಿದ್ದು, ಅವುಗಳ ತಾಲ್ಲೂಕುವಾರು, ಸಂಘವಾರು ಪಟ್ಟಿಯನ್ನು **ಅನುಬಂಧ -1** ರಲ್ಲಿ ಒದಗಿಸಿದೆ.
ಆ.	ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಎಷ್ಟು ನೋಂದಾಯಿತ ತರಬೇತುದಾರರಿದ್ದಾರೆ (ತಾಲ್ಲೂಕುವಾರು, ಕ್ರೀಡಾವಾರು ಸಂಪೂರ್ಣ ವಿವರ ನೀಡುವುದು);	ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಸ್ತುತ ಕರ್ನಾಟಕ ಕ್ರೀಡಾ ಪ್ರಾಧಿಕಾರದ ವತಿಯಿಂದ ಕ್ರಿಕೆಟ್ ಕ್ರೀಡೆಗೆ ಸಂಬಂಧಿಸಿದಂತೆ ಒಬ್ಬ ತರಬೇತುದಾರರನ್ನು ನಿಯೋಜಿಸಲಾಗಿದೆ. ಇದನ್ನು ಹೊರತುಪಡಿಸಿ ಯಾವುದೇ ರೀತಿಯ ನೋಂದಾಯಿತ ತರಬೇತುದಾರರು ಇರುವುದಿಲ್ಲ.
ಇ.	ಶಿವಮೊಗ್ಗ ಜಿಲ್ಲೆಯಲ್ಲಿ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ನೋಂದಾಯಿತ ಯುವಕ / ಯುವತಿ ಸಂಘಗಳಿಗೆ ಇಲಾಖೆ ವತಿಯಿಂದ ನೀಡಿದ ಪ್ರೋತ್ಸಾಹ ಧನವೆಷ್ಟು ಹಾಗೂ ಕ್ರೀಡಾ ಉಪಕರಣಗಳಾವುವು (ಸಂಘವಾರು, ಕ್ರೀಡಾವಾರು ಮಾಹಿತಿ ನೀಡುವುದು)?	ಶಿವಮೊಗ್ಗ ಜಿಲ್ಲೆಯಲ್ಲಿ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ನೋಂದಾಯಿತ ಯುವಕ / ಯುವತಿ ಸಂಘಗಳಿಗೆ ರಾಜ್ಯ ವಲಯದಿಂದ ರೂ. 27500/- ಮೌಲ್ಯದ ಕ್ರೀಡಾ ಉಪಕರಣಗಳನ್ನು ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ರೂ. 20,000/- ಕ್ರೀಡಾ ಉಪಕರಣಗಳಾದ ವಾಲಿಬಾಲ್, ಫುಟ್ಬಾಲ್, ಬ್ಯಾಸ್ಕೆಟ್‌ಬಾಲ್, ಥ್ರೋಬಾಲ್, ಕೇರಂ ಬೋರ್ಡ್, ಅಬಿಲಿಟಿ ಲಾಡರ್, ಸ್ಕಿಪಿಂಗ್ ರೋಪ್ ಹಾಗೂ ಇನ್ನಿತರೆ ಉಪಕರಣಗಳನ್ನು

		ನೀಡಲಾಗಿರುತ್ತದೆ. ಪ್ರಸ್ತುತ, ಯಾವುದೇ ಪ್ರೋತ್ಸಾಹಧನ ನೀಡಲು ಅವಕಾಶವಿರುವುದಿಲ್ಲ. ಕ್ರೀಡಾ ಪರಿಕರಗಳನ್ನು ನೀಡಲಾದ ಸಂಘಗಳ ಪಟ್ಟಿಯನ್ನು ಅನುಬಂಧ-2 ರಲ್ಲಿ ಒದಗಿಸಿದೆ.

ವೈಎಸ್‌ಡಿ 123 ಇಬಿಬಿ 2020

(**ಬಿ.ಎಸ್.ಯಡಿಯೂರಪ್ಪ**)
ಮುಖ್ಯಮಂತ್ರಿ.

ಅನುಬಂಧ-1

1. ಶಿವಮೊಗ್ಗ ತಾಲ್ಲೂಕು

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಕಿತ್ತೂರು ರಾಣಿ ಚೆನ್ನಮ್ಮ ಯುವತಿ ಮಂಡಳಿ, ಹರಮಘಟ್ಟ	ಹರಮಘಟ್ಟ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
2.	ಮಾತೃ ಶ್ರೀ ಯುವತಿ ಮಂಡಳಿ,	ಹರಮಘಟ್ಟ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
3.	ರಂಗನಾಥ ಗ್ರಾಮೀಣ ಕ್ರೀಡಾ ಯುವಕ ಸಂಘ	ಅಬ್ಬಲಗೆರೆ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
4.	ಪಾರ್ವತಿ ಗ್ರಾಮೀಣ ಯುವತಿ ಮಂಡಳಿ	ಅಬ್ಬಲಗೆರೆ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
5.	ಶ್ರೀ ಮೂಕಾಂಬಿಕ ಮಹಿಳಾ ಮಂಡಳಿ,	ಕೊಮ್ಮನಾಳ್ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
6.	ಶ್ರೀ ಓಂ. ಕನ್ನಡ ಯುವಕ ಸಂಘ,	ಮತ್ತೋಡು, ಅಬ್ಬಲಗೆರೆ ಅಂಚೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
7.	ಶುಭಮಂಗಳ ಯುವತಿ ಮಂಡಳಿ.	ಕೊಮ್ಮನಾಳ್ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
8.	ಬಸವೇಶ್ವರ ಗ್ರಾಮೀಣ ಕ್ರೀಡಾ ಯುವಕ ಸಂಘ	ಕೊಮ್ಮನಾಳ್ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
9.	ಕಿತ್ತೂರು ರಾಣಿ ಯೂತ್ ಕ್ಲಬ್ (ಎಸ್.ಸಿ)	ನಂಜಪ್ಪ ಲೇಔಟ್, ಸಹ್ಯಾದ್ರಿ ಕಾಲೇಜ್ ಹಿಂಬಾಗ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
10.	ಪಾರ್ವತಿ ಗ್ರಾಮೀಣ ಕ್ರೀಡಾ ಯುವತಿ ಮಂಡಳಿ,	ಮತ್ತೋಡು, ಅಬ್ಬಲಗೆರೆ ಅಂಚೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
11.	ಶ್ರೀ ಮಾತಂಗದೇವಿ ಯುವಕರ ಸಂಘ. (ಎಸ್.ಸಿ)	ತ್ಯಾಜವಳ್ಳಿ ಗ್ರಾಮ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
12.	ಶ್ರೀ ಮಾತಂಗದೇವಿ ಯುವತಿ/ಮಹಿಳಾ ಸಂಘ. (ಎಸ್.ಸಿ)	ತ್ಯಾಜವಳ್ಳಿ ಗ್ರಾಮ, ಹಾರನಹಳ್ಳಿ ಹೋಬಳಿ, ಶಿವಮೊಗ್ಗ ಜಿಲ್ಲೆ
13.	ಶ್ರೀ ಸೇವಾಲಾಲ್ ಯುವಕರ ಸೇವಾ ಸಂಘ,	ಶಿವಪುರ ತಾಂಡ, ದುಮ್ಮಳ್ಳಿ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
14.	ನಂಜಪ್ಪ ಬಡಾವಣೆ ಯುವಕರ ಸಂಘ	ನಂಜಪ್ಪ ಲೇ ಔಟ್, ಸಹ್ಯಾದ್ರಿ ಕಾಲೇಜು ಹಿಂಭಾಗ, ಶಿವಮೊಗ್ಗ
15.	ಶಿವಮೊಗ್ಗ ಯೂತ್ ಕ್ರಿಕೆಟ್ ಕ್ಲಬ್	ಜ್ಯೋತಿರಾವ್ ಬೀದಿ, ವಿದ್ಯಾನಗರ, ಶಿವಮೊಗ್ಗ
16.	ಕರ್ನಾಟಕ ಬಣಜಾರ್ (ಎಸ್.ಸಿ) ಕ್ಷೇಮಾಭಿವೃದ್ಧಿ ಯುವ ಸೇನೆ	ಬೀರನಕೆರೆ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ
17.	ಸಹ್ಯಾದ್ರಿ ಹಾಕಿ ಕ್ಲಬ್	ಜಯನಗರ, 3ನೇ ಕ್ರಾಸ್, ಶಿವಮೊಗ್ಗ
18.	ಇಂಚರ ಯುವಕ ಸಂಘಪುರದಾಳ್,	ಪುರದಾಳ್, ಶಿವಮೊಗ್ಗ ಜಿಲ್ಲೆ
19.	ಸನ್‌ಶೈನ್ ಯೂತ್ ಕ್ಲಬ್	ನಂಜಪ್ಪ ಲೇಔಟ್, ಶಿವಮೊಗ

20.	ಜಾಗೃತಿ ಯುವಕ ಸಂಘ (ರಿ)	ಹುಣಸೋಡು, ಶಿವಮೊಗ್ಗ ತಾ||
21.	ಅರುಣೋದಯ ಯುವಕ ಸಂಘ,	ಕೊರಗಿ, ಕುಂಸಿ ಹೋಬಳಿ, ಶಿವಮೊಗ್ಗ ತಾ||
22.	ಶ್ರೀ ನಂದಿ ಬಸವೇಶ್ವರ ಯುವಕ ಸಂಘ	ಮೇಲಿನಹನಸೆ ವಾಡಿ, ಶಿವಮೊಗ್ಗ ತಾ||
23.	ಡಾ||ಬಿ.ಆರ್.ಅಂಬೇಡ್ಕರ್ ಯುವಕ ಸಂಘ	ಬೇಡರಹೊಸಹಳ್ಳಿ, ಶಿವಮೊಗ್ಗ ತಾ||
24.	ಶ್ರೀ ದುರ್ಗಾಂಬಿಕ ಯುವಕ ಸಂಘ	ಕಾಚಿನಕಟ್ಟೆ, ಶಿವಮೊಗ್ಗ ತಾ||
25.	ಶ್ರೀ ಮಾರುತಿ ಯುವಕ ಸಂಘ,	ಶೆಟ್ಟಿಹಳ್ಳಿ ಶಿವಮೊಗ್ಗ ತಾ||
26.	ಸರ್ವೋದಯ ಸ್ಪೋರ್ಟ್ಸ್ ಕ್ಲಬ್	ಹೊಳೆಬೆಳಗಲು ಶಿವಮೊಗ್ಗ ತಾ||
27.	ಪ್ರಿಯಾಂಕ ಲೇ ಔಟ್ ಯುವಕ ಸಂಘ	ಪ್ರಿಯಾಂಕ ಲೇ ಔಟ್, ಮತ್ತೂರು ರಸ್ತೆ, ಶಿವಮೊಗ್ಗ
28.	ಶ್ರೀ ಸಿಂಗಂದೂರೇಶ್ವರಿ ಮಹಿಳಾ ಸಂಘ,	ಬಸವನಗುಡಿ, 3ನೇ ಕ್ರಾಸ್ ಶಿವಮೊಗ್ಗ ತಾ||
29.	ಶ್ರೀ ಸಾಯಿ ದೀಪ ಕಲಾ ವೃಂದ	ಸ್ವಾಮಿ ವಿವೇಕಾನಂದ ಶಾಲೆ ಎದುರು ರಾಜೇಂದ್ರನಗರ, ಶಿವಮೊಗ್ಗ
30.	ಶ್ರೀ ಅಜೇಯ ಯುವಕ ಸಂಘ	ಹಸೂಡಿ ಫೋಸ್ಟ್, ಶಿವಮೊಗ್ಗ ತಾ||
31.	ಶ್ರೀ ಮೈಲಾರೇಶ್ವರ ಯುವಕ ಸಂಘ	ಕಾಟೀಕೆರೆ, ಶಿವಮೊಗ್ಗ ತಾ||
32.	ಮೌರ್ಯ ಕೇಸರಿ ಪಡೆ ಯುವಕ ಸಂಘ	ಭಂಡಾರಿ ಕ್ಯಾಂಪ್, ಸಂತೆಕಡೂರು, ಶಿವಮೊಗ್ಗ
33.	ಪ್ರಗತಿಪರ ಯುವಕರ ಕ್ರೀಡಾ ಸಂಘ	ಚಿಕ್ಕ ಮಾರಡಿ ಗ್ರಾಮ ಅಸೂಡಿ ಅಂಚೆ ಶಿವಮೊಗ್ಗ ತಾ.
34.	ಶ್ರೀ ಮಾರಿಯಮ್ಮ ಕ್ರೀಡಾ ಸಂಘ	ಹೊಳೆ ಬೆನವಳ್ಳಿ ಅಂಚೆ
35.	ವಿಘ್ನೇಶ್ವರ ಯುವಕ ಕ್ರೀಡಾ ಸಂಘ	ಅಸೂಡಿ ಫಾರಂ ಅಸೂಡಿ ಅಂಚೆ
36.	ಶ್ರೀ ವಿನಾಯಕ ಯುವಕ ಸಂಘ	ಜ್ಯೋತಿ ನಗರ ಕಾಚಿನ ಕಟ್ಟೆ
37.	ಶ್ರೀ ಸಂಗೊಳ್ಳಿ ರಾಯಣ್ಣ ಯುವಕ ಸಂಘ	ಕಂಟೀಕೆರೆ ಶಿವಮೊಗ್ಗ ತಾ/
38.	ಮಹರ್ಷಿ ವಾಲ್ಮೀಕಿ ಬೇಡರಕಣ್ಣಪ್ಪ ಮಹಿಳಾ ಸಂಘ	ಬೇಡರ ಹೊಸಹಳ್ಳಿ ಶಿವಮೊಗ್ಗ ತಾ
39.	ಚಂದನ ಯುವತಿ ಮಂಡಳಿ	ಹೊಳೆಹಟ್ಟಿ ಶಿವಮೊಗ್ಗ ತಾ
40.	ನಿಸರ್ಗ ಯುವತಿ ಮಂಡಳಿ	ರತ್ನಗಿರಿ ನಗರ ಅಬ್ಬಲಗೆರೆ ಶಿವಮೊಗ್ಗ
41.	ಅಮೂಲ್ಯ ಯುವಕ ಸಂಘ	ಲಕ್ಕಿನಕೊಪ್ಪ ಬಿ. ಕೊರಲಹಳ್ಳಿ ನಿಧಿಗೆ ಶಿವಮೊಗ್ಗ
42.	ಶ್ರೀ ಮಂಜುನಾಥೇಶ್ವರ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ)	ಬ. ಬೀರನಹಳ್ಳಿ ಶಿವಮೊಗ್ಗ
43.	ಶುಭಮಂಗಳ ಯುವತಿ ಮಂಡಳಿ	ವೀರನ ಬೆನವಳಿ ಶಿವಮೊಗ್ಗ

44.	ಶ್ರೀ ಕೆಂಚಾಂಬಿಕೆ ಯುವಕ ಸಂಘ	ಸಂತೆ ಕಡೂರು ಶಿವಮೊಗ್ಗ ತಾ
45.	ವೀರಾಂಜನೇಯ ಯುವಕ ಸಂಘ	ಸೋಗಾನೆ ಶಿವಮೊಗ್ಗ ತಾ
46.	ಶ್ರೀ ಸೇವಾಲಾಲ್ ಯುವಕರ ಗ್ರಾಮಾಭಿವೃದ್ಧಿ ಸಂಘ	ಹುಣಸೋಡು ಶಿವಮೊಗ್ಗ ತಾ
47.	ಶ್ರೀ ಮಾತಂಗಮ್ಮ ಯುವಕರ ಸಂಘ	ಸಂತೆ ಕಡೂರು ಶಿವಮೊಗ್ಗ
48.	ಶಿವಮೊಗ್ಗ ಜಿಲ್ಲಾ ಯುವ ಬ್ಯಾಡ್ಮಿಂಟನ್ ಸಂಸ್ಥೆ	ಪೆನ್ಶನ್ ಮೊಹಲ್ಲಾ ಶಿವಮೊಗ್ಗ
49.	ಶ್ರೀ ಬಸವೇಶ್ವರ ಯುವಕರ ಸಂಘ	ಬೆಳಲಕಟ್ಟೆ ಶಿವಮೊಗ್ಗ
50.	ಸಿದ್ಧಿವಿನಾಯಕ ಕ್ರೀಡಾ ಸಂಘ	ಶಿವಪ್ಪ ನಾಯಕ ಬಡಾವಣೆ ಕಲ್ಲಹಳ್ಳಿ
51.	ಶಿವಮೊಗ್ಗ ಜಿಲ್ಲಾ ವಾಡೋ ಕರಾಟೆ ಸಂಘ	ಶಿವಮೊಗ್ಗ ವಿದ್ಯಾ ಭವನ ಡಿ.ಡಿ.ಪಿ ಐ ಆಫೀಸ್ ಕಂಪೌಡ್ ಕಾನ್ವೆಂಟ್ ರಸ್ತೆ ಶಿವಮೊಗ್ಗ
52.	ಎ.ಜೆಡ್ ಉಮೆನ್ಸ್ ಫಿಟ್ನೆಸ್ ಕ್ಲಬ್	ನವಲೆ ವಿನಾಯಕ ನಗರ ಸವಳಂಗ ರಸ್ತೆ ಶಿವಮೊಗ್ಗ
53.	ರೇಣುಕಾಂಬ ವಿವಿದ್ದೋದ್ದೇಶ ಸೇವಾ ಮತ್ತು ಕ್ರೀಡಾ ಸಂಘ	ಭದ್ರಾಪುರ ಕೂಡ್ಲಿ ಅಂಚೆ ಶಿವಮೊಗ್ಗ ತಾ
54.	ಕುಂಚೇನಹಳ್ಳಿ ಬಣಜಾರ್ (ಎಸ್‌ಸಿ) ಕ್ಷೇಮಾಭಿವೃದ್ಧಿ ಯುವಕರ ಸಂಘ	ಕುಂಚೇನ ಹಳ್ಳಿ ಅಂಚೆ ಶಿವಮೊಗ್ಗ ತಾ
55.	ಶ್ರೀ ವಿನಾಯಕ ಯುವಕರ ಸಂಘ	ಹಾರೆಕಟ್ಟೆ ಸೋಗಾನೆ ಅಂಚೆ
56.	ಸೃಷ್ಟಿ ಮಹಿಳಾ ಸಂಘ	ಯಲವಟ್ಟಿ ನಿಧಿಗೆ ಹೋಬಳಿ ಹಸೋಡಿ ಶಿವಮೊಗ್ಗ ತಾ
57.	ಡಿಸ್ಟ್ರಿಕ್ಟ್ ಮಾರ್ಷಲ್ ಆರ್ಟ್ಸ್ ಸ್ಪೋರ್ಟ್ಸ್ ಕ್ಲಬ್	ಶಿವಮೊಗ್ಗ
58.	ಕುಂಚೇನಹಳ್ಳಿ ಬಣಜಾರ (ಎಸ್ ಸಿ) ಕ್ಷೇಮಾಭಿವೃದ್ಧಿ ಯುವಕರ ಸಂಘ	ಕುಂಚೇನಹಳ್ಳಿ ಮೇಲಿನ ತಾಂಡ ಹೊಳಲೂರು ಶಿವಮೊಗ್ಗ
59.	ಶ್ರೀ ಸೇವಾಲಾಲ್ ಯುವಕರ ಸಂಘ	ಕೋಟೆ ಗಂಗೂರು
60.	ಅಕ್ಷರ ಯುವಕರ ಸಂಘ	ಚೆನ್ನ ಮುಂಬಾಪುರ ಜೆ.ಎನ್ .ಎನ್ .ಸಿ ಕಾಲೇಜ್ ಎದುರು ಸವಳಂಗ ರಸ್ತೆ
61.	ಶ್ರೀ ಸೇವಾಲಾಲ್ ಬಣಜಾರ್ ಸೇವಾ ಸಮಿತಿ (ರಿ)	ನಿದಿಗೆ ಗ್ರಾಮ ಶಿವಮೊಗ್ಗ
62.	ಸಮನ್ವಯ ಸಮೃದ್ಧಿ ಯುವಕರ ಸಂಘ	ಗೋಪಾಳ 2 ನೇ ಕ್ರಾಸ್ ಶಿವಮೊಗ್ಗ
63.	ಶ್ರೀ ರಾಮಾಂಜನೇಯ ಯುವಕ ಸಂಘ	ಸೋಮಿನಕೊಪ್ಪ ಶಿವಮೊಗ್ಗ
64.	ಬಸವೇಶ್ವರ ಯುವಕರ ಸಂಘ	ಮಂಡಘಟ್ಟ ಶಿವಮೊಗ್ಗ ತಾ
65.	ಸೌಹಾರ್ದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ	ಸ್ವಾಮಿ ವಿವೇಕಾನಂದ ಬಡಾವಣೆ
66.	ಶ್ರೀ ದುರ್ಗಾಂಭಿಕೆ ಯುವತಿ ಮಂಡಳಿ	ಸೋಮಿನಕೊಪ್ಪ ಶಿವಮೊಗ್ಗ ತಾ
67.	ಕುವೆಂಪು ಕ್ಷೇಮಾಭಿವೃದ್ಧಿ ಸೇವಾ ಸಂಘ	ಚಾಲುಕ್ಯ ನಗರ ಕೆ.ಹೆಚ್.ಬಿ ಕಾಲೋನಿ ಶಿವಮೊಗ್ಗ
68.	ಶ್ರೀ ಪಾರ್ವತಿ ಪರಮೇಶ್ವರ ವೀರಗಾಸೆ ಕಲಾಸಂಘ	ಯಲವಟ್ಟಿ ಹಸೂಡಿ ಅಂಚೆ ಶಿವಮೊಗ್ಗ

69.	ಸನ್ಮಿತ್ರ ಕ್ರೀಡಾ ಕೇಂದ್ರ	ಹೊಸಹಳ್ಳಿ, ಶಿವಮೊಗ್ಗ ತಾ
70.	ಡಾ. ಬಿ ಆರ್ ಅಂಬೇಡ್ಕರ್ ಯುವಕರ ಸಂಘ (ಎಸ್.ಸಿ)	ದುಮ್ಮಳ್ಳಿ ಸಿದ್ದೇಶ್ವರ ನಗರ ಶಿವಮೊಗ್ಗ ತಾ
71.	ಶ್ರೀ ಸೇವಾಲಾಲ್ ಯುವಕರ ಸೇವಾ ಸಂಘ (ಎಸ್.ಸಿ)	2 ನೇ ತಿರುವು 3 ನೇ ಹಂತ ಆದರ್ಶ ಕಾಲೋನಿ ವಿನೋಬ ನಗರ ಶಿವಮೊಗ್ಗ
72.	ಪ್ರೇರಣ ಯುವಕರ ಸಂಘ	ದುರ್ಗಿಗುಡಿ, ಶಿವಮೊಗ್ಗ

2. ತೀರ್ಥಹಳ್ಳಿ ತಾಲ್ಲೂಕು :

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಪ್ರತಿಭಾ ವಿಕಾಸ ಯುವಕ ಸಂಘ	ಹಾದಿಗಲ್ಲು, ತೀರ್ಥಹಳ್ಳಿ ತಾ||
2.	ಪ್ರಜ್ವಲ ಯುವಕ ಸಂಘ	ಕಲ್ಲುಕೊಪ್ಪ, ಸಿರಿಗೆರೆ ಪೋಸ್ಟ್ ತೀರ್ಥಹಳ್ಳಿ ತಾ||

3. ಸೊರಬ ತಾಲ್ಲೂಕು :

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಬಾಲಾಜಿ ಕಲಾ ಬಳಗ	ಆನವಟ್ಟಿ, ಸೊರಬ ತಾ||
2.	ಶ್ರೀ ಜಟೇಶ್ವರ ಯುವಕ ಸಂಘ	ಕೋಣನಮನೆ, ಹೆಚ್ಚೆ, ಚಂದ್ರುಗುತ್ತಿ, ಸೊರಬ ತಾ||
3.	ರತ್ನಾಶ್ರೀ ಭಜನಾ ಮಂಡಳಿ	ಬನದಕೊಪ್ಪ, ನಿಸರಾಣಿ, ಉಳವಿ, ಸೊರಬ ತಾ||
4.	ಶ್ರೀ ಶಿವಶಕ್ತಿ ಯುವಕ ಸಂಘ	ಬಂದಿಗೆ ಮೂಟಗುಪ್ಪೆ, ಚಂದ್ರುಗುತ್ತಿ ಸೊರಬ ತಾ||
5.	ಗುರುಕೃಪಾ ಶ್ರೀ ಗುರು ಪಂಡಿತ ಪುಟ್ಟರಾಜ ಸಂಗೀತ ಪಾಠಶಾಲೆ	ಸೊರಬ ತಾ||
6.	ಶ್ರೀ ಕಾಳಿಕಾಂಬ ಯುವಕ ಸಂಘ	ಹೆಚ್ಚೆ, ಚಂದ್ರುಗುತ್ತಿ ಸೊರಬ ತಾ||
7.	ಚೈತನ್ಯ ಯುವಕ ಸಂಘ	ಹೊಳೆಜೋಳದ ಗುಡ್ಡೆ, ಚಂದ್ರುಗುತ್ತಿ ಸೊರಬ ತಾ||
8.	ಚಿರಂಜೀವಿ ಯುವಕ ಸಂಘ	ಚನ್ನಪಟ್ಟಣ ಚಂದ್ರುಗುತ್ತಿ, ಸೊರಬ ತಾ||
9.	ಬಸವೇಶ್ವರ ಯುವಕ ಸಂಘ	ಉಳವಿ ಸೊರಬ ತಾ||
10.	ಶ್ರೀ ಬಸವೇಶ್ವರ ಕಲಾ ಸಂಘ	ಕಂತನಹಳ್ಳಿ, ಗುಡುವಿ ಸೊರಬ ತಾ||

11.	ಶ್ರೀ ಚೌಡೇಶ್ವರಿ ಯುವಕ ಸಂಘ	ಶಿವಪುರ ಚಂದ್ರಗುತ್ತಿ ಸೊರಬ ತಾ||
12.	ಶ್ರೀ ವೀರಭದ್ರೇಶ್ವರ ಯುವಕ ಸಂಘ	ಕಣ್ಣೂರು ಉಳವಿ ಸೊರಬ ತಾ||
13.	ಶ್ರೀ ಅಮೃತಲಿಂಗೇಶ್ವರ ಯುವಕ ಸಂಘ	ಚಿತ್ರದಹಳ್ಳಿ ಬಿಳವಾಣಿ ಸೊರಬ ತಾ||
14.	ಶ್ರೀ ಬಸವೇಶ್ವರ ಯುವತಿ ಮಂಡಳಿ	ಸಂಬಾಪುರ, ಬೆನ್ನೂರು ಗ್ರಾ.ಪಂ ಚಂದ್ರಗುತ್ತಿ ಸೊರಬ ತಾ||
15.	ಶ್ರೀ ವೀರಭದ್ರೇಶ್ವರ ಯುವಕ ಸಂಘ	ಕಾನಹಳ್ಳಿ, ಉಳವಿ ಸೊರಬ ತಾ||
16.	ಶ್ರೀ ಮಾರಿಕಾಂಬ ಯುವಕ ಸಂಘ	ಹರಿಶಿ-ಮಂಗಳೂರು, ಚಂದ್ರಗುತ್ತಿ ಸೊರಬ ತಾ||
17.	ಅರುಣೋದಯ ಯುವಕ ಸಂಘ	ಬೆನ್ನೂರು ಗ್ರಾ.ಪಂ ಚಂದ್ರಗುತ್ತಿ ಸೊರಬ ತಾ||
18.	ಶ್ರೀ ಬಸವೇಶ್ವರ ಯುವಕ ಸಂಘ (ರಿ)	ಕಾಸ್ವಾಡಿಕೊಪ್ಪ, ಮಾವಲಿ, ಸೊರಬ ತಾ||
19.	ಶ್ರೀ ಹಮಾಂಬಿಕ ಕಲಾ ಮತ್ತು ಕ್ರೀಡಾ ಯುವಕ ಸಂಘ,	ತಿಗ್ಗಾ, ಉಳವಿ,
20.	ಶ್ರೀ ಮಾರುತಿ ಯುವಕ ಸಂಘ	ಬೆನ್ನೂರು ಗ್ರಾ.ಪಂ ಚಂದ್ರಗುತ್ತಿ ಸೊರಬ ತಾ||
21.	ಶ್ರೀ ಚೌಡೇಶ್ವರಿ ಯುವತಿ ಮಂಡಳಿ,	ಚಂದ್ರಗುತ್ತಿ ಸೊರಬ ತಾ|| ಶಿವಮೊಗ್ಗ
22.	ಸುಂಟ್ರಹಳ್ಳಿ ಹರಿಶಿ, ಚಂದ್ರಗುತ್ತಿ ಸೊರಬ ತಾ||	ಸುಂಟ್ರಹಳ್ಳಿ ಹರಿಶಿ, ಚಂದ್ರಗುತ್ತಿ ಸೊರಬ ತಾ|| ಶಿವಮೊಗ್ಗ
23.	ಶ್ರೀ ಮಾರುತಿ ಭಜನಾ ಸಂಘ	ಕುಂಸಿ, ಬಿಳವಾಣಿ, ಸೊರಬ ತಾ|| ಶಿವಮೊಗ್ಗ
24.	ಶ್ರೀ ಆಂಜನೇಯ ಯುವಕ ಸಂಘ	ಗುಂಜನೂರು, ಹೆಚ್ಚೆ, ಸೊರಬ ತಾ|| ಶಿವಮೊಗ್ಗ
25.	ಶ್ರೀ ಬಸವೇಶ್ವರ ಯುವಕ ಸಂಘ,	ತಳೇಬೈಲು, ತಿಗ್ಗ ಉಳವಿ, ಸೊರಬ ತಾ|| ಶಿವಮೊಗ್ಗ
26.	ಸರ್ವಸಿದ್ಧಿ ವಿನಾಯಕ ಯುವಕ ಸಂಘ	ಕೊಲ್ಲುಣಸಿ ಬಿಳವಾಣಿ ಸೊರಬ ತಾ|| ಶಿವಮೊಗ್ಗ

4. **ಸಾಗರ ತಾಲ್ಲೂಕು :**

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ನವೋಧಯ ಗ್ರಾಮೀಣಾಭಿವೃಧ್ಧಿ ಯುವಕ ಸಂಘ,	ಬೇದರಕೊಪ್ಪ, ಬ್ರಾಹ್ಮಣಕೆಪ್ಪಿಗೆ, ಸಾಗರ ತಾ||
2.	ಸಮೃದ್ಧಿ ಯುವ ಬಳಗ	ಬ್ಯಾಕೋಡು, ಸಾಗರ ತಾ||
3.	ಶ್ರೀ ಮಂಜುನಾಥ ಸ್ವಾಮಿ ರೈತ ಯುವಕ ಸಂಘ	ಕಲ್ಲೋಡಿ ಚೆನ್ನಗೊಂಡ ಗ್ರಾಮ ಕರೂರು ಹೋಬಳಿ ಸಾಗರ ತಾ||
4.	ಮೊಳಗು ಮಹಿಳಾ ಕಲಾ ತಂಡ	ಹೆಗ್ಗೋಡು, ಸಾಗರ ತಾ||
5.	ಶ್ರೀ ಮಹಾಗಣಪತಿ ಯುವಕ ಸಂಘ	ಮತ್ತಿಕರೆ, ಸಾಗರ ತಾ||
6.	ಪ್ರಕೃತಿ ಯುವಕ ಸಂಘ	ಲಾವಿಗೆರೆ, ಸಾಗರ ತಾ||
7.	ಭುವನೇಶ್ವರಿ ಯವತಿ ಮಂಡ	ಮತ್ತಿಕರೆ, ಸಾಗರ ತಾ||
8.	ಬನಶಂಕರಿ ಯುವತಿ ಮಂಡಳಿ	ಹುತ್ತಾ ದಿಂಬ, ನೀಚಡಿ, ಸಾಗರ ತಾ||
9.	ಗ್ರಾಮಲಿಂಗೇಶ್ವರ ಯುವಕ ಸಂಘ	ಹುತ್ತಾ ದಿಂಬ, ನೀಚಡಿ, ಸಾಗರ ತಾ||
10.	ಕನ್ನಡ ಯುವ ಸೇನೆ,	ಕಣ್ಣೂರು, ಆನಂದಪುರ ಸಾಗರ ತಾ||
11.	ಸಾಗರ ಯೂತ್ ಪೋರ್ಸ್ ಅಸೋಸಿಯೇಷನ್	ಸಾಗರ
12.	ನಾವು ನಿಮ್ಮವರ ಅಂಬೇಡ್ಕರ ಸಂಘ	ಬಿ.ಕೆ.ರಸ್ತೆ, ಗಾಂಧಿನಗರ, ಸಾಗರ ತಾ||
13.	ಯುವ ನಕ್ಷತ್ರ ಸಂಘ	ಅಶೋಕ ರಸ್ತೆ, ಆನಂದಪುರ
14.	ರಂಗೋಲಿ ಸಾಂಸ್ಕೃತಿಕ ಕಲಾ ಮತ್ತು ಕ್ರೀಡಾ ಯುವತಿ ಸಂಘ	ತುಮರಿ, ಸಾಗರ ತಾ||
15.	ನವಚೇತನ ಯುವಕ ಸಂಘ,	ತ್ಯಾಗರ್ತಿ, ಸಾಗರ ತಾ||
16.	ಡಾ||ಅಂಬೇಡ್ಕರ್ ಕೋಲಾಟ ಕಲಾ ಬಳಗ	ಬಂದಗದ್ದೆ, ಕೆಳದಿ ಸಾಗರ ತಾ||

5. ಹೊಸನಗರ ತಾಲ್ಲೂಕು :

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಶ್ರೀಸರ್ವಸಿದ್ಧಿ ವಿನಾಯಕ ಸಾಂಸ್ಕೃತಿಕ ಕಲಾ ಯುವತಿ ಮಂಡಳಿ	ಜಿ.ಎಸ್ ರಸ್ತೆ, ರಿಪ್ಪನಪೇಟೆ, ಬರುವೆ, ಹೊಸನಗರ ತಾ||
2.	ಜೀರಿಗೆ ಮನೆ ಫ್ರೆಂಡ್ಸ್ ಕ್ಲಬ್ (ರಿ)	ಜೀರಿಗೆ ಮನೆ, ಹೊಸನಗರ ತಾ||
3.	ಶ್ರೀ ಸಿದ್ಧಿವಿನಾಯಕ ಯುವಕ ಸಂಘ (ರಿ)	ಕಾರಣಗಿರಿ, ಹೊಸನಗರ ತಾ||
4.	ಯುವ ಸ್ಪಂದನ ಸೇವಾ ಸಂಸ್ಥೆ (ರಿ)	ಕುಸುಗುಂಡಿ, ಕೊಡೂರು ಅಂಚೆ ಹೊಸನಗರ ತಾ||
5.	ಯುವಕರ ಸಂಘ, ಶಿವಪುರ	ಹುಳಿಗದ್ದೆ ಅಮೃತಪುರ ಗ್ರಾ.ಪಂ, ಹೊಸನಗರ ತಾ||
6.	ಸತ್ಯಮೇವ ಜಯತೇ ಯುವಕ ಸಂಘ	ಶಾಂತಪುರ, ಕೊಡೂರು, ಹೊಸನಗರ ತಾ||
7.	ಗುರುರಾಘವೇಂದ್ರ ಯುವಕ ಸಂಘ	ಮುಂಬಾರೂ, ಹೊಸನಗರ ತಾ||

6. ಭದ್ರಾವತಿ ತಾಲ್ಲೂಕು :

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಶ್ರೀರಾಮ ಕನ್ನಡ ಯುವಕ ಸಂಘ	ಕೆಂಚೆನಹಳ್ಳಿ, ನೀರ್ಗುಂಡಿ, ಭದ್ರಾವತಿ ತಾ||
2.	ಜೈ ಭುವನೇಶ್ವರಿ ಯುವಕರ ಸಂಘ,	ಹಳ್ಳಿಕೆರೆ, ಬಾರಂದೂರು, ಭದ್ರಾವತಿ ತಾ||
3.	ಗಜಸೇನೆ ಯುವಕ ಸಂಘ,	ಅಂತರಗಂಗೆ ಕ್ಯಾಂಪ್, ಭದ್ರಾವತಿ ತಾ||
4.	ಯಶ್ವಂತಮಿತ್ರ ಯುವಕರ ಸಂಘ,	ಬೊಮ್ಮನಹಳ್ಳಿ, ಹೊಸಬಡಾವಣೆ, ಬಾರಂದೂರು ಭದ್ರಾವತಿ ತಾ||
5.	ಶ್ರೀ ಶಾರದ ಯುವತಿ ಮಂಡಳಿ	ಆಗರದಹಳ್ಳಿ, ಹೊಳೆಹೊನ್ನೂರು, ಭದ್ರಾವತಿ ತಾ||
6.	ಶ್ರೀಶಕ್ತಿ ಜಾಗೃತಿ, ಯುವತಿ ಮಂಡಳಿ	ಮೈದೊಳಲು ಕ್ಯಾಂಪ್, ಮಲ್ಲಾಪುರ, ಭದ್ರಾವತಿ ತಾ||
7.	ಅನನ್ಯ ಯೂತ್ ಕ್ಲಬ್	ಶಂಕರಘಟ್ಟ, ಭದ್ರಾವತಿ ತಾ||
8.	ಭದ್ರಾವತಿ ತಾಲ್ಲೂಕು ಜೋಗಿ ಯುವಕ ಸಂಘ	ಕಂಬದಾಳ್ ಹೊಸೂರು, ಭದ್ರಾವತಿ ತಾ||
9.	ಶತಮಾನೋತ್ಸವ ಯುವ ಕ್ರೀಡಾ ಸಂಘ,	ಹೊಸಮನೆ, ಭದ್ರಾವತಿ ತಾ||
10.	ಸಹ್ಯಾದ್ರಿ ಯುವಕ ಸಂಘ	ಅಗರದಹಳ್ಳಿ, ಭದ್ರಾವತಿ ತಾ||
11.	ಪೈಲ್ವಾನ್ ಗಫಾರ್ ಕ್ರೀಡಾ ಯುವಕ ಸಂಘ	ದೊಣಬಘಟ್ಟ, ಭದ್ರಾವತಿ ತಾ||
12.	ಶ್ರೀ ವಿನಾಯಕ ಯುವಕ ಸಂಘ	ಕೆ.ಹೆಚ್.ನಗರ, ಸುಣ್ಣದಹಳ್ಳಿ, ಭದ್ರಾವತಿ ತಾ||
13.	ಶ್ರೀ ಚೌಡೇಶ್ವರಿ ಯುವಕ ಸಂಘ	ಕೆಂಚೆನಹಳ್ಳಿ, ಭದ್ರಾವತಿ ತಾ||
14.	ಅಂಜನೇಯ ಯುವಕ ಸಂಘ	ಬೊಮ್ಮನಹಳ್ಳಿ ಬಾರಂದೂರು ಭದ್ರಾವತಿ ತಾ||
15.	ಜಾಗೋ ಬಂಜಾರ್ ಯುವಕ ಸಂಘ	ಕಲ್ಪನಹಳ್ಳಿ, ಕೂಡ್ಲಿಗೆರೆ ಭದ್ರಾವತಿ ತಾ||

7. **ಶಿಕಾರಿಪುರ ತಾಲ್ಲೂಕು :**

ಕ್ರ.ಸಂ.	ಸಂಘದ ಹೆಸರು	ವಿಳಾಸ
1.	ಸ್ಫೂರ್ತಿ ಯುವಕ ಸಂಘ	ಕಲ್ಮನೆ, ಶಿಕಾರಿಪುರ ತಾ||
2.	ಕನಕ ಯುವಕ ಜಾನಪದ ಕಲಾ ಸ್ವಸಾಯ ಸಂಘ,	ಹೊಸಮುಗಳಗೆರೆ, ಶಿಕಾರಿಪುರ ತಾ||
3.	ಸ್ನೇಹಬಂದು ಯುವಕ ಸಂಘ	ಚಿಕ್ಕಜೋಗಿಹಳ್ಳಿ, ಶಿಕಾರಿಪುರ ತಾ||
4.	ಜೈ ಶ್ರೀರಾಮ್ ಯುವಕ ಸಂಘ	ಉಡಗಣಿ, ಶಿಕಾರಿಪುರ ತಾ||
5.	ಶ್ರೀ ಆದಿಶಕ್ತಿ ಯುವಕ ಸಂಘ	ಕ್ಯಾಂಪ್‌ಕೇರಿ, ಈಸೂರು, ಶಿಕಾರಿಪುರ ತಾ||
6.	ಶ್ರೀ ಬಸವೇಶ್ವರ ಭಜನಾ ಯುವಕ ಸಂಘ	ದಿಂಡಹದಳ್ಳಿ, ಶಿಕಾರಿಪುರ ತಾ||
7.	ಶ್ರೀ ಗಾಳಿ ಆಂಜನೇಯ ಸೇವಾ ಸಂಘ	ಬೇಗೂರು ಮರಡಿ ತಾಂಡ, ಶಿಕಾರಿಪುರ ತಾ||
8.	ಫಾರ್ ಎವರ್ ಉತ್ಸಾಹಿ ಕ್ರೀಡಾ ಯುವಕರ ಸಂಘ	ತರಲಘಟ್ಟ, ಚಿಕ್ಕಜೋಗಿಹಳ್ಳಿ ಪೋಸ್ಟ್, ಶಿಕಾರಿಪುರ ತಾ||
9.	ನೆವರ್ ಎಂಡರ್ ಕ್ರೀಡಾ ಯುವಕರ ಸಂಘ	ಹೊಸೂರು ಪೋಸ್ಟ್, ಶಿಕಾರಿಪುರ ತಾ||

ಅನುಬಂಧ-2

ಕ್ರ.ಸಂ	ಯುವಕ / ಯುವತಿ ಮಂಡಳಿ ಹೆಸರು
	2018-19
1	ಕುಂಬಾರಕೆರೆ ಗೆಳೆಯರ ಬಳಗ, ಸೋನಲೆ ಗ್ರಾ.ಪಂ, ಹೊಸನಗರ ತಾ||
2	ಶ್ರೀ ನರಸಿಂಹ ಸ್ವಾಮಿ ಸೇವಾ ಸಮಿತಿ, ಹೆಗಲತ್ತಿ, ತೀರ್ಥಹಳ್ಳಿ ತಾ||
3	ಚೌಡೇಶ್ವರಿ ಯುವಕ ಸಂಘ, ಕಮರಿಕೊಪ್ಪ, ಸೊರಬ ತಾ||
4	ಶ್ರೀ ಬಸವೇಶ್ವರ ಯುವಕ ಸಂಘ, ಗಂಗೊಳ್ಳಿ, ಸೊರಬ ತಾ||
5	ನೇತಾಜಿ ಯುವಕ ಸಂಘ, ಬೇಗೂರು, ಶಿಕಾರಿಪುರ ತಾ||
6	ಬಿ.ಎಸ್.ಜಿ ಫ್ರೆಂಡ್ಸ್ ಬಿಲ್ಲೇಶ್ವರ, ಹೊಸನಗರ ತಾ||
7	ವೀರಭದ್ರೇಶ್ವರ ಯುವಕ ಸಂಘ, ಬೇಡರಹೊಸಹಳ್ಳಿ, ಶಿವಮೊಗ್ಗ ತಾ||
8	ಶ್ರೀ ಮೈಲಾರೇಶ್ವರ ಯುವಕ ಸಂಘ, ಶೆಟ್ಟಿಹಳ್ಳಿ, ಶಿವಮೊಗ್ಗ ತಾ||
9	ಶ್ರೀ ದುರ್ಗಾಪರಮೇಶ್ವರಿ ಸ್ತ್ರೀ-ಶಕ್ತಿ ಸ್ವ ಸಹಾಯಕ ಸಂಘ, ಮಂಗೋಟೆ, ಭದ್ರಾವತಿ ತಾ||
10	ಮುತ್ತು ಮಾರಿಯಮ್ಮ ಯುವಕರ ಸಂಘ, ಆರಳಿಹಳ್ಳಿ, ಭದ್ರಾವತಿ ತಾ||
11	ನವೋದಯ ಯುವಕ ಸಂಘ, ಅರಳಾಪುರ, ಹೊದಲಾ ಗ್ರಾ.ಪಂ ತೀರ್ಥಹಳ್ಳಿ ತಾ||
12	ಬೇಳೂರು ಯುವಕ ಸಂಘ, ಬೇಳೂರು ತೀರ್ಥಹಳ್ಳಿ ತಾ||
	2019-20
1.	ಚೌಡೇಶ್ವರಿ ಯುವಕ ಸಂಘ, ತುಮರಿಕೊಪ್ಪ, ಸೊರಬ ತಾ||
2.	ಸಿದ್ಧರಾಮೇಶ್ವರ ಯುವಕ ಸಂಘ, ತತ್ತೂರು, ವಡ್ಡಿಗೆರೆ, ಸೊರಬ ತಾ||
3.	ಅಕ್ಕಮಹಾದೇವಿ ಹವ್ಯಾಸಿ ಯುವತಿ ಮಂಡಳಿ, ಶಿಕಾರಿಪುರ ತಾ||
4.	ಶಿವಾಜಿ ಡೊಳ್ಳಿನ ಯುವಕರ ಸಂಘ, ಬೆಂಡೆಕಟ್ಟೆ, ಶಿಕಾರಿಪುರ ತಾ||
5.	ಶ್ರೀ ಗುರು ರಾಘವೇಂದ್ರ ಯುವಕ ಸಂಘ, ಹೊಸನಗರ ತಾ||
6.	ಶ್ರೀ ರಾಮೇಶ್ವರ ಯುವಕ ಸಂಘ, ಸೊನಲೆ, ಹೊಸನಗರ ತಾ||
7.	ಶ್ರೀ ಮಾರುತಿ ಯುವಕ ಸಂಘ, ಮಳಲಿಕೊಪ್ಪ, ಶಿವಮೊಗ್ಗ ತಾ||
8.	ಶ್ರೀ ದುರ್ಗಾಂಬ ಯುವಕರ ಸಂಘ, ಹಾರನಹಳ್ಳಿ, ಶಿವಮೊಗ್ಗ ತಾ||
9.	ಶ್ರೀ ದುರ್ಗಾಪರಮೇಶ್ವರಿ ಸ್ತ್ರೀ-ಶಕ್ತಿ ಸ್ವ-ಸಹಾಯ ಸಂಘ, ಮಂಗೋಟೆ, ಭದ್ರಾವತಿ ತಾ||
10.	ಜೋಗಿ ಯುವಕರ ಸಂಘ, ಕಂಬದಾಳು ಹೊಸೂರು, ಭದ್ರಾವತಿ ತಾ||
11.	ಸಾಲುಕಟ್ಟೆ ಯುವತಿ ಮಂಡಳಿ, ಸಾಲುಕಟ್ಟೆ, ತೀರ್ಥಹಳ್ಳಿ ತಾ||
12.	ನವೋದಯ ಯುವಕ ಸಂಘ, ಅರಳಾಪುರ, ತೀರ್ಥಹಳ್ಳಿ ತಾ||
13.	ಕಣ್ಣೂರು ಯುವಕ ಸಂಘ, ಕಣ್ಣೂರು, ಸಾಗರ ತಾ||
14.	ಶ್ರೀ ಗಾಮೇಶ್ವರ ಯುವಕ ಸಂಘ, ಗಾಮನಕೊಡ್ಲು, ಹೆಳವಗೋಡು ಗ್ರಾಮ, ಸಾಗರ ತಾ||
15.	ನವೋದಯ ಯುವಕ ಸಂಘ, ಮಾವಿನಕುಳಿ, ಸಾಗರ ತಾ||
16.	ಶ್ರೀ ಸಂತ ಸೇವಾಲಾಲ್ ಯುವಕರ ಸಂಘ, ಕುಂಚೇನಹಳ್ಳಿ ಕೆಳಗಿನ ತಾಂಡ, ಶಿವಮೊಗ್ಗ ತಾ||

17.	ಕನ್ನಡ ಯುವಸೇನೆ, ಕಣ್ಣೂರು, ಸಾಗರ ತಾ||
18.	ನಂಜಪ್ಪ ಬಡಾವಣೆ ಯುವಕರ ಸಂಘ, ಶಿವಮೊಗ್ಗ
19.	ಸಹ್ಯಾದ್ರಿ ಕನ್ನಡ ಸ್ವ-ಸಹಾಯಕ ಸಂಘ, ಗುತ್ತನಹಳ್ಳಿ, ಬರೂರು (ಅ) ಸಾಗರ ತಾ||
20.	ಬಿ.ಎನ್.ಶಾರದಮ್ಮ ಲೇ-ಔಟ್ ನಿವಾಸಿಗಳ ಸಂಘ (ರಿ), ಸೋಮಿನಕೊಪ್ಪ ರಸ್ತೆ, ವಿನೋಬನಗರ, ಶಿವಮೊಗ್ಗ
21.	ಪ್ರಿಯಾಂಕ ಲೇ ಔಟ್ ಯುವಕರ ಸಂಘ, 3ನೇ ತಿರುವು, ಪ್ರಿಯಾಂಕ ಲೇ ಔಟ್, ಶಿವಮೊಗ್ಗ
22.	ಶ್ರೀ ಕರ ಏರಿ ಚೌಡೇಶ್ವರಿ ಸೇವಾ ಟ್ರಸ್ಟ್, ತಾಷ್ಕೆಂಟ್ ನಗರ, ಭದ್ರಾವತಿ ತಾ||
23.	ಪ್ರೇರಣ ಯುವಕರ ಸಂಘ, ದುರ್ಗಿಗುಡಿ, ಶಿವಮೊಗ್ಗ
24.	ಸರ್ವೋದಯ ಯುವಕ ಸಂಘ, ಉಳವಿ, ಸೊರಬ ತಾ||
25.	ಆನವೇರಿ ಯುವಕ ಸಂಘ, ಆನವೇರಿ, ಭದ್ರಾವತಿ ತಾ||
26.	ಶ್ರೀ ಸಿದ್ಧಿವಿನಾಯಕ ಯುವಕ ಸಂಘ, ಕಾರ್ಗಡಿ, ಹೊಸನಗರ ತಾ||
27.	ಭಾವಸಾರ ಯುವಕ ಸಂಘ, ಗಾಂಧಿಬಜಾರ್, ಶಿವಮೊಗ್ಗ
28.	ತುಂಗಾತೀರ್ಥ ಯೂತ್ ಸ್ಪೋರ್ಟ್ಸ್ ಟ್ರಸ್ಟ್, ಮಳಲಿಮಕ್ಕಿ, ದೇಮ್ಲಾಪುರ, ತೀರ್ಥಹಳ್ಳಿ ತಾ||
29.	ಬೆಳಕು ಕಲಾ ತಂಡ, ವೀರಣ್ಣ ಲೇ ಔಟ್, ವಿನೋಬನಗರ, ಶಿವಮೊಗ್ಗ ತಾ||
30.	ಸರ್. ಎಂ.ವಿ. ಯೂಥ್ ಸ್ಪೋರ್ಟ್ಸ್ ಕ್ಲಬ್, ಗೊಂದಿಕಾಯಿಮರ, ಭದ್ರಾವತಿ ತಾ||
31.	ಕನ್ನಡ ಯುವಕ ಸಂಘ ದೊಡ್ಡ ಗುಪ್ಪೇನಹಳ್ಳಿ, ಭದ್ರಾವತಿ ತಾ ತಾ||
32.	ಮಲೆನಾಡು ಸ್ಪೋರ್ಟ್ಸ್ ಕ್ಲಬ್ (ರಿ) ತಾಲ್ಲೂಕು ಕ್ರೀಡಾಂಗಣ ಶಿಕಾರಿಪುರ ತಾ||
33.	ಡಾ|| ಬಿ.ಆರ್.ಅಂಬೇಡ್ಕರ್ ಯುವಕರ ಸೇವಾ ಸಂಘ, (ಎಸ್.ಸಿ), ಚಿಕ್ಕಮಾಗಡಿ ತಾಂಡ ಶಿಕಾರಿಪುರ ತಾ||
34.	ಶ್ರೀ ಸಿದ್ಧರಾಮೇಶ್ವರ ಯುವಕರ ಸಂಘ, ತತ್ತೂರು, ಮಾಗೇರಿ, ಸೊರಬ ತಾ||
35.	ಜಾಗೋ ಬಂಜಾರ ಯುವಕರ ಸಂಘ (ರಿ), ಕಲ್ಪನಹಳ್ಳಿ, ಭದ್ರಾವತಿ ತಾ||
36.	ಶ್ರೀ ರಾಮೇಶ್ವರ ಯುವಕ ಸಂಘ, ಕೂಲಿ೯ಕೊಪ್ಪ, ಬರೂರು ಅಂಚೆ, ಸಾಗರ ತಾ||
37.	ಜೈ ಮಾರುತಿ ಯುವಕರ ಸಂಘ , ಹಳೆ ಸೀಗೆಬಾಗೆ , ಭದ್ರಾವತಿ ತಾ||
38.	ಶ್ರೀ ರಾಜೀವ್ ಗಾಂಧಿ ಯುವಕರ ಸಂಘ , ಕೂಡ್ಲಿಗೆರೆ , ಭದ್ರಾವತಿ ತಾ||

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	347
ಮಾನ್ಯ ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ	08.12.2020
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪುತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಈ ಇಲಾಖೆಯಿಂದ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಮಾಡಲು ಜಾಗವನ್ನು ಕಾಯ್ದಿರಿಸಿದ್ದರೂ ಸಹ ಇದುವರೆವಿಗೂ ಸ್ವಂತ ಕಟ್ಟಡವನ್ನು ನಿರ್ಮಿಸದೇ ಇರಲು ಕಾರಣವೇನು?	ಪುತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಒಟ್ಟು 09 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ವಿದ್ಯಾರ್ಥಿನಿಲಯಗಳ ಪೈಕಿ 04 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇನ್ನುಳಿದ 05 ವಿದ್ಯಾರ್ಥಿನಿಲಯಗಳಿಗೆ ನಿವೇಶನಗಳು ಲಭ್ಯವಿದ್ದು, ಇವುಗಳ ಕಟ್ಟಡ ನಿರ್ಮಾಣವನ್ನು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನಾಧರಿಸಿ ಸ್ವಂತ ಕಟ್ಟಡ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ:ಹಿಂವಕ 678 ಬಿಎಂಎಸ್ 2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ